# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34 ಭಾದ್ರಪದ – September-October 2007 ಸಂಚಿಕೆ : 07**



ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

**ಹಾಗೂ**

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ಶ್ರೀ ಬಿ.ಎ. ಪಾಟೀಲ್**



ಪ್ರಧಾನ ಕಛೇರಿ :

**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**

ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :

**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**

ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002

**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
**080-41146081, 9341387714, 9342651516**

ಮುಖಪುಟ : ಶತಾಯುಷಿ ಅಮ್ಮಾಳ್


## ವಿಷಯಸೂಚೀ


ಮಂಗಳಾಚರಣೆ ೦೩

ಸಂಪಾದಕೀಯ ೦೪

**ಲೇಖನಮಾಲಾ**

ಹೌದು ! ಅವರು ಕಾಣಿಸುತ್ತಾರೆ ೦೫

ಹರಿದಾಸರು ರಾಯರಿಗೆ ಅರ್ಪಿಸಿದ ಗುರುಪದಹಾರ — ವಸಂತರಾವ ಕೃ. ಕೊರ್ತಿ ೦೮

ಮಂತ್ರಾಲಯ ಪ್ರಭುಗಳ ಪ್ರಮಾಣಪದ್ಧತಿ ವ್ಯಾಖ್ಯಾನ ವೈಶಿಷ್ಟ್ಯ — ನರಸಿಂಹಾಚಾರ್ಯ ಪುರೋಹಿತ್ ೧೩

ಋಗ್ವೇದಕಾಲೀನ ದೇವತೆಗಳು — ಡಾ. ಕೊರಟಗೆರೆ ವಾಸುದೇವಾಚಾರ್ಯ ೧೭

ತಮಿಳುನಾಡಿನ ನವಗ್ರಹ ದೇವಾಲಯಗಳು-೭ — ಸಂಗ್ರಹ : ಸೂರೀಂದ್ರ ೧೯

ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಷಷ್ಠಿಕಲಾವಿದ್ಯೆಗಳು — ಕೆ.ಎಲ್. ಪುಷ್ಕರಾಚಾರ್ಯ ೨೧

ಯೋಗದರ್ಶನ — ಟಿ.ವಿ. ಸತ್ಯನಾರಾಯಣ ೨೫

ಇಣುಕುನೋಟ ೩೦

ಮಹಾಭಾರತದಲ್ಲಿ ಭೀಷ್ಮರ ಸ್ಥಾನ — ವಿ. ರಮೇಶಾಚಾರ್ಯ ೩೪

ಶ್ರೀಮನ್ಮಹಾಭಾರತ ನಿರೂಪಿಸಿದ ಧರ್ಮರಹಸ್ಯಗಳು — ಶ್ರೀನಿವಾಸ ಸು. ಮಠದ ೩೯

ಜ್ಞಾನಿ-ಕರ್ಮಿಗಳ ಮಾರ್ಗದರ್ಶನ — ಬಿ. ಭಾಸ್ಕರ ೪೧

ಪರ್ಯಟನೆ ೪೭


**[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]**

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

# ಮಂಗಳಾಚರಣೆ

ಯಥಾಽಽಪಃ ಪ್ರವತಾಽಽಯಂತಿ । ಯಥಾ ಮಾಸಾ ಅಹರ್ಜರಮ್ ।
ಏವಂ ಮಾಂ ಬ್ರಹ್ಮಚಾರಿಣಃ । ಧಾತರಾಯಂತು ಸರ್ವತಸ್ಸ್ವಾಹಾ
ಪ್ರತಿವೇಶೋಽಸಿ ಪ್ರಮಾಭಾಹಿ ಪ್ರಮಾಪದ್ಯಸ್ವ ॥

**- ತೈತ್ತರೀಯೋಪನಿಷತ್**

ಆಪಃ = ನೀರು, ಎತ್ತರದಿಂದ, ಯಥಾ = ಹೇಗೆ, ಪ್ರವತಾಃ = ತಗ್ಗುಪ್ರದೇಶದ ಕಡೆಗೆ, ಯಂತಿ = ಹರಿಯುತ್ತವೆಯೋ, ಯಥಾ = ಹೇಗೆ, ಮಾಸಾಃ = ಚೈತ್ರಾದಿಮಾಸಗಳು, ಅಹರ್ಜರಂ = ಸಂವತ್ಸರಗಳನ್ನು ಕುರಿತು, ಯಂತಿ = ಹೋಗುತ್ತವೆಯೋ (ಅನಾಯಾಸವಾಗಿ ಹಾಗೂ ನಮಗೆ ತಿಳಿಯದಂತೆಯೇ ಹೋಗುತ್ತವೆಯೋ ಹಾಗೆ).

ಹೇ ಧಾತಃ = ಸ್ವಾಹಾ = ಸರ್ವಜಗದ್ಧಾರಕನಾದ ಗೋವಿಂದನೇ ಏವಂ = ಹೀಗೆ ಅನಾಯಾಸವಾಗಿ, ಸರ್ವತಃ = ದಿಕ್ಕು, ವಿದಿಕ್ಕುಗಳಿಂದ, (ನಾನಾ ಮೂಲೆ ಮೂಲೆಗಳಿಂದ) ಬ್ರಹ್ಮಚಾರಿಣಃ = ವಿದ್ಯಾರ್ಥಿಗಳು, ಆಯಂತು = ಬರುವವರಾಗಲಿ. ಹೇ ಧಾತಃ, (ತ್ವಂ = ನೀನು) ಪ್ರತಿವೇಶೋಽಸಿ = ಪ್ರವೇಶಿಸಲು ಯೋಗ್ಯನಾಗಿದ್ದಿ. ಮಾ = ನನಗೆ ನಿ ಪ್ರಭಾಹಿ = ಪ್ರಕಾಶಿಸು ಮಾಂ = ನನ್ನನ್ನು, ನೀನು, ಪ್ರಪದ್ಯಸ್ವ = ಹೊಂದು, ನನ್ನಲ್ಲಿ ಸನ್ನಿಹಿತನಾಗು.

## ಶ್ರೀಸುಶಮೀಂದ್ರವಾಣಿ

**"ದೇವರು ಮಾಡಿದಂತೆ ಮಾಡಬೇಡ. ಗುರುಗಳು ನುಡಿದಂತೆ ನುಡಿಯಬೇಡ" ಎಂಬ ನಾಣ್ನುಡಿಯು ದೇವಮೂಲ, ಋಷಿಮೂಲವನ್ನು ನೋಡಬೇಡವೆಂದು ಹೇಳುತ್ತದೆ. ಕೃಷ್ಣನು ಸುಳ್ಳು ಹೇಳಿದನೆಂದು ನಾವೂ ಹೇಳಬಹುದಾದರೆ ಕೃಷ್ಣನಂತೆ ಕಿರುಬೆರಳಿನಲ್ಲಿ ಗೋವರ್ಧನ ಗಿರಿಯನ್ನು ಎತ್ತಬೇಕು, ಸಾಧ್ಯವೇ? ಗುರುವಾದ ಜಹ್ನು ಮಹರ್ಷಿಯು ಗಂಗೆಯನ್ನು ನಿರಾಯಾಸವಾಗಿ ಕುಡಿದನು. ನಂತರ ಸರ್ವರೂ ಪ್ರಾರ್ಥಿಸಲು, ಕಿವಿಯಿಂದ ಬರುವಂತೆ ಗಂಗೆಯನ್ನು ಆದೇಶಿಸಿದನು. ಗಂಗೆಯು ಕಿವಿಯಿಂದ ಧುಮುಕಿದಳು. 'ಜಹ್ನುಕನ್ಯೆ' ಎಂದು ಖ್ಯಾತಳಾದಳು. ದೊಡ್ಡವರ ಯೋಗ್ಯತೆ, ಸ್ಥಾನಮಾನದ ವಿಷಯಗಳು ಅತ್ಯಂತ ಸೂಕ್ಷ್ಮವಾದುದರಿಂದ ಅವರ ಚರಿತ್ರೆಯನ್ನು ನಾವು ಗೌರವಿಸಬೇಕು. ನಮ್ಮ ಧರ್ಮ, ದೇವರನ್ನು ಅವಮಾನಿಸುವುದು ಪರಿಪಾಠವಾದರೆ ಅದೊಂದು ದುಃಖಕರವಾದ, ದುರದೃಷ್ಟಕರವಾದ ಸಂಗತಿ. ನಮ್ಮ ಧರ್ಮವನ್ನು ನಾವು ಗೌರವಿಸಬೇಕು.**



# ಸಂಪಾದಕೀಯ

''**ಸ್ವಕಪೋಲಕಲ್ಪನೆ**'' ಎಂಬ ಅನರ್ಥಕಾರೀ ಪರಂಪರೆಯ ಬಗ್ಗೆ ತಿಳಿಯೋಣ.

ನಮ್ಮ ದೇಶದ ಭವ್ಯ ಪರಂಪರೆಯಲ್ಲಿ ಮಂತ್ರಗಳು, ಸ್ತೋತ್ರಗಳು ತಮ್ಮದೇ ಆದ ಶಕ್ತಿಯಿಂದಾಗಿ ಅವುಗಳನ್ನು ಭಕ್ತಿಯಿಂದ ಸ್ವರಭೇದ, ಛಂದೋಭಂಗ ಮಾಡದೇ ಪಠಿಸುವವರಿಗೆ ಮೋಕ್ಷಾದಿ ಫಲಗಳನ್ನು ಕೊಡುತ್ತವೆ ಎಂಬುದು ಸರ್ವವಿದಿತ. ಆದರೆ ಕೆಲವರಿಂದ ಮಂತ್ರಗಳು, ಸ್ತೋತ್ರಗಳಿಗೆ ಅಪಚಾರವಾಗುತ್ತಿದೆ ಎಂದು ಹೇಳಬಹುದು. ಕೆಲವರು, ಇರುವಂತಹಾ ಶ್ಲೋಕಗಳಿಗೆ ಹೆಚ್ಚಿನ ಶಬ್ದಗಳನ್ನು ಸೇರಿಸಿಬಿಡುತ್ತಾರೆ. ಉದಾ : ಶ್ರೀವಿಜಯೀಂದ್ರತೀರ್ಥರ ಚರಮಶ್ಲೋಕವನ್ನು ''**ನಮತಾಂ ಕಲ್ಪತರವೇ ಜಯೀಂದ್ರಗುರವೇ ನಮಃ**'' ಎಂಬುದರ ಬದಲಿಗೆ ''**ಶ್ರೀಜಯೀಂದ್ರಗುರವೇ ನಮಃ**'' ಎಂದು ಹೇಳುತ್ತಾರೆ. ಇಲ್ಲಿ **ಶ್ರೀ**ಕಾರವನ್ನು ಸೇರಿಸಬಾರದು. ಇದರಿಂದ ನಾಲ್ಕನೇ ಪಾದದಲ್ಲಿ ಎಂಟು ಅಕ್ಷರಗಳ ಬದಲು ಒಂಭತ್ತು ಅಕ್ಷರಗಳಾಗಿ ಛಂದೋಭಂಗವಾಗಿ ಅವರ ಸ್ತೋತ್ರಕ್ಕೆ ಅಪಚಾರವಾಗುತ್ತದೆಂದು ಹೇಳಿದರೂ ಕೇಳುವುದಿಲ್ಲ. ಇದರಂತೆಯೇ ''**ಸು**ಮೂಲರಾಮಪೂಜಾಢ್ಯಂ'' ಬದಲಿಗೆ ''**ಶ್ರೀ**ಮೂಲರಾಮಪೂಜಾಢ್ಯಂ'' ಎಂದು ಹೇಳುತ್ತಾರೆ.

ಇನ್ನೊಂದೆಡೆ ಶ್ರೀರಾಯರ ಮಂಗಳಾಷ್ಟಕದ ಪ್ರತೀ ಪಾದವೂ (ಸಾಲು) ಹತ್ತೊಂಭತ್ತು ಅಕ್ಷರಗಳಿಂದ ಕೂಡಿದೆ. ಒಟ್ಟು ನಾಲ್ಕು ಪಾದಗಳುಳ್ಳ ಶ್ಲೋಕವು ಸರಿಯಾಗಿ ಎಪ್ಪತ್ತಾರು ಅಕ್ಷರಗಳಿಂದ ಕೂಡಿದೆ. ಇದಕ್ಕೆ ಒಂದೇ ಒಂದು ಅಕ್ಷರ ಕಡಿಮೆಯಾದರೂ (೭೫) ಒಂದು ಅಕ್ಷರ ಹೆಚ್ಚಾದರೂ (೭೭) ಅದು ''ಜಾತಿಭ್ರಷ್ಟ (ನಿಯಮ ಮೀರಿದ) ಶ್ಲೋಕ''ವೆಂದು ಛಂದಃಶಾಸ್ತ್ರದ ರೀತ್ಯಾ ಪರಿಗಣಿಸಲ್ಪಡುತ್ತದೆ. ಆಗ ಅದು ಮಂಗಳಾಷ್ಟಕವಾಗುವುದಿಲ್ಲ. ರಾಯರ ಮಂಗಳಾಷ್ಟಕದ ಪ್ರತಿಶ್ಲೋಕದ ನಾಲ್ಕನೆಯ ಪಾದವು ''**ಶ್ರೀಮತ್ಸದ್ಗುರು ರಾಘವೇಂದ್ರ ಯತಿರಾಟ್ ಕುರ್ಯಾದ್ಧ್ರುವಂ ಮಂಗಳಮ್**'' ಎಂಬ ಸಾಲಿನಿಂದ ಮುಕ್ತಾಯವಾದರೆ, ಕೊನೆಯ ಶ್ಲೋಕದ (ಯಃ ಸಂಧ್ಯಾ) ನಾಲ್ಕನೆಯ ಪಾದವು ''**ಕೀರ್ತಿಂ ಪುತ್ರ ಕಲತ್ರ ಬಾಂಧವ ಸುಹೃನ್ಮೂರ್ತಿಃ ಪ್ರಯಾತಿದ್ಧ್ರುವಂ**'' ಎಂದು ಮುಕ್ತಾಯವಾಗುತ್ತದೆ. ಆದರೆ ಬಹಳಷ್ಟು ಜನ ''**ಕೀರ್ತಿಂ ಪುತ್ರ**......'' ಸಾಲನ್ನು ಪಠಿಸಿ, ಮತ್ತೆ ''**ಶ್ರೀಮತ್ಸದ್ಗುರು ರಾಘವೇಂದ್ರ**.....'' ಸಾಲನ್ನು ಹೇಳಿ, (ಐದು ಸಾಲು) ಎಪ್ಪತ್ತಾರು ಅಕ್ಷರಗಳಿರಬೇಕಾದ ಅಕ್ಷರಗಳನ್ನು ತೊಂಭತ್ತೈದು ಅಕ್ಷರಗಳನ್ನಾಗಿ ಮಾಡುತ್ತಾರೆ (ಕೊನೆಯಲ್ಲಿ ''ಶ್ರೀಮತ್ಸದ್ಗುರು ರಾಘವೇಂದ್ರ.........'' ಸಾಲನ್ನು ಹೇಳಬಾರದು). ತಿಳಿಯದೇ ಎಂದೋ ಯಾರೋ ಆ ವಿಧವಾಗಿ ಹೇಳಿ ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದನ್ನು ಬಿಟ್ಟು, ಅವರು ಮಾಡಿದ ತಪ್ಪುಗಳನ್ನು ತಿರುಪತಿ ಪ್ರಸಾದದಂತೆ ಸ್ವೀಕರಿಸಿ ಮುಂದುವರೆಸುವುದೇ? ತಿಳಿಸಿ ಹೇಳಿದರೂ ಕೇಳುವುದಿಲ್ಲ. ಅಪ್ಪಣ್ಣಾಚಾರ್ಯರಿಗಿಂತ ನಾವು ಹೆಚ್ಚು ತಿಳಿದವರೆ?

ಇದೊಂದು ರೀತಿಯಾದರೆ, ಇನ್ನೊಂದೆಡೆ ''ಪ್ರಹ್ಲಾದರಾಜಾಯ ವಿದ್ಮಹೇ ವ್ಯಾಸರಾಜಾಯ ಧೀಮಹೇ ತನ್ನೋ ರಾಘವೇಂದ್ರಃ ಪ್ರಚೋದಯಾತ್'' ಎಂಬ ''ನಾರಾಯಣಾಯ ವಿದ್ಮಹೇ.....'' ಧಾಟಿಯ ಮಂತ್ರವನ್ನು ಸೃಷ್ಟಿಮಾಡಿಬಿಡುತ್ತಾರೆ. ಹೀಗೆ ಮಾಡುವುದು ತಪ್ಪು.

ಗಮನಿಸಿ : ''ಇಂದ್ರಶತ್ರುರ್ವರ್ಧಸ್ವ....'' ಎಂಬ ಮಂತ್ರವನ್ನು ಹೇಳುವಾಗ ಕೇವಲ ಸ್ವಲ್ಪವಾದ ಸ್ವರವ್ಯತ್ಯಾಸಮಾಡಿದ ಕಾರಣ, ''ಹೇ ಗರ್ಭವೇ ಇಂದ್ರನ ಶತ್ರುವಾಗಿ ಅಭಿವೃದ್ಧಿ ಹೊಂದು'' ಎಂಬ ಅರ್ಥದ ಬದಲಿಗೆ ''ಹೇ ಇಂದ್ರನೇ ನೀನು ಈ ಗರ್ಭದ ಶತ್ರುವಾಗಿ ಅಭಿವೃದ್ಧಿ ಹೊಂದು'' ಎಂಬ ಅರ್ಥವು ಬಂದು ''ಇಂದ್ರನು ಗರ್ಭನಾಶ ಮಾಡಿದ'' ಎಂಬ ವೃತ್ತಾಂತವಿದೆ. ಸ್ವಲ್ಪವಾದ ಸ್ವರವ್ಯತ್ಯಾಸದಿಂದಲೇ ಇಷ್ಟು ಅನರ್ಥವಾಯಿತೆಂದಲ್ಲಿ, ಇಷ್ಟ ಬಂದಷ್ಟು ಅಕ್ಷರಗಳನ್ನು ಹೆಚ್ಚುಮಾಡಿ ಶ್ಲೋಕ-ಮಂತ್ರಗಳ ಪಠಿಸಿದರೆ ತೀವ್ರ ಅನರ್ಥವುಂಟಾಗುತ್ತದೆ. ಅಪರೋಕ್ಷಜ್ಞಾನಿಗಳು ಯಾವ ಶೈಲಿಯಲ್ಲಿ ರಚಿಸಿದ್ದಾರೋ ಅದೇ ಶೈಲಿಯನ್ನು ನಾವು ಅನುಸರಿಸಬೇಕು. ಸ್ವಕಪೋಲಕಲ್ಪಿತಗಳನ್ನು ಸೇರಿಸಬಾರದು.

ಲೇಖನಾಂಕ

# ಹೌದು ! ಅವರು ಕಾಣಿಸುತ್ತಾರೆ

**ಆ**ಕೆಗೆ ೧೦೧ ವರ್ಷ.

**ಕಳೆದ ೮೫ ವರ್ಷಗಳಿಂದ ಅನ್ನ-ಆಹಾರಾದಿಗಳ ಸೇವನೆ ಮಾಡದೆ ಕೇವಲ ಒಂದು ಲೋಟ ಹಾಲು, ಒಂದು ಬಾಳೇಹಣ್ಣಿನ ಮೇಲೆ ಇರುವ ಸಾಧನಾ ಚೇತನ.** ಸುಮಾರು ೪೦ ಸಾವಿರಕ್ಕೂ ಪ್ರೌಢ-ಸುಂದರ-ಮಂತ್ರಸದೃಶವಾದ ದಾಸರ ಕೃತಿ-ಗಳಿಂದ ಕನ್ನಡ ಸಾಹಿತ್ಯ ಖಜಾನೆಯನ್ನು ಸಿಂಗರಿಸಿದ ಸಿರಿವಂತೆ. ಆಕೆಯ ಪತಿಯು ಮದುವೆಯಾದ ಕೆಲವೇ ದಿನಗಳಲ್ಲಿ ಅಸ್ತಂಗತನಾದಾಗ ಆಕೆಗೆ ಕೇವಲ ೧೨ ವರ್ಷ.

ಗಂಡ ಮೃತನಾದ ದಿನದಿಂದಲೇ ಶ್ರೀನರಸಿಂಹದೇವರಿಂದ ಸಾಕ್ಷಾತ್ ಅಂಕಿತ ಪ್ರದಾನ. ಅಂದಿನಿಂದ ಇಂದಿನವರೆಗೆ ಹರಿಯುತ್ತಿದೆ ಭಗವಂತನ ಭಕ್ತಿ-ಸ್ತುತಿಯ ಪ್ರವಾಹ. ಮಡಿವಂತ ಮುಖವಾಡದವರಿಂದ ಆದ ಕಿರುಕುಳ 'ಕುಂಭಕೋಣ'ದ ಕಲ್ಲು ಕಲ್ಲಿಗೆ ಗೊತ್ತು.

ಪಂಢರಾಪುರದ ಶ್ರೀಪಾಂಡುರಂಗನನ್ನು ಎಡಬಿಡದೆ ಸೇವಿಸಿ ದೇವಸ್ಥಾನದ ಏಕಾಂತ ಸೇವೆಯನ್ನು ೧೨ ವರ್ಷಗಳ ಕಾಲ ಮಾಡಿದ ಇತ್ತೀಚಿನ ಶತಮಾನಗಳ ಅಪರೂಪದ ಮಹಿಳಾ ''ದಾಸಶ್ರೇಷ್ಠ ಶಿರೋಮಣಿ'' ''ದಕ್ಷಿಣಭಾರತದ ಸಕ್ಕೂಬಾಯಿ''.

೬೦ ಕ್ಯಾಮರಾಗಳು, ೧೦೦ಕ್ಕೂ ಹೆಚ್ಚು ನೋಟ್ ಪುಸ್ತಕಗಳನ್ನು ಹಿಡಿದಿರುವ ಮಹಿಳೆಯರು ಮತ್ತು ಪುರುಷರು, ೨೦೦ ಕ್ಕೂ ಅಧಿಕ ಧ್ವನಿಮುದ್ರಿಕೆಗಳು ಓರ್ವ ವ್ಯಕ್ತಿಯ ಮುಂದೆ ಅವರ ಧ್ವನಿ, ಕಂಡುಬರುವ ಚಲನವಲನಕ್ಕಾಗಿ ಕಾಯುತ್ತಿವೆ. ನೀವಂದುಕೊಂಡಂತೆ ಇದು ವರ್ಲ್ಡ್‌ಕಪ್ ನ ವಿಜೇತರ ತಂಡದ ಕ್ಯಾಪ್ಟನ್ ಆಗಲಿ, ಅಮೇರಿಕೆಯ ಪ್ರೆಸಿಡೆಂಟ್ ರ ಪತ್ರಿಕಾಗೋಷ್ಠಿಯಾಗಲಿ ಅಲ್ಲ. ಅದೊಂದು ಸುಂದರ ಕ್ಷೇತ್ರ. ಕುಂಭಕೋಣದ ಜನಸಾಮಾನ್ಯರ ಚಿಕ್ಕ ಮನೆಯಲ್ಲಿ ೧೦೦ ವರ್ಷ ತುಂಬಿದ ಮಹಿಳಾಮಣಿಯೋರ್ವಳ - ಬೇರೆಯವರಿಂದ ಸಾಧ್ಯವಿಲ್ಲದ, ಸಹಜವಾಗಿ ಸೃಷ್ಟಿ-ಯಾಗುವ ದಾಸಸಾಹಿತ್ಯದ ಗಾನದ ಝರಿಗಾಗಿ ಭಕ್ತಿಯ ಸಿರಿಯ ವೀಕ್ಷಣೆ ಮತ್ತು ಶ್ರವಣಕ್ಕಾಗಿ ಎಂದರೆ ನಂಬುತ್ತೀರಾ!



ಆಕೆಯಾದರೂ ಹೇಳುವುದು ಅಚ್ಚ ವೈಷ್ಣವ ಗೀತೆಗಳನ್ನು, ಆಚಾರ್ಯ ಮಧ್ವತತ್ತ್ವಗಳ ಎಲ್ಲೆ ಮೀರದೆ ಭಕ್ತಿಯ ಎಲ್ಲೆ ಮೀರಿ, ಮತಗಳ ಎಲ್ಲೆ ಮೀರಿ ಹರಿಯ ನಾಮಸ್ಮರಣೆಯ ಸವಿಯನ್ನು ಉಣಬಡಿಸುತ್ತಿದ್ದಾಳೆ. ಹ್ಞಾಂ, ಮೇಲ್ಕಂಡ ಎಲ್ಲ ವೀಕ್ಷಕರು ಮಾಧ್ವರಿಂದ ಭಿನ್ನರಾದ ಅದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳು. ಅಂಥಹಾ ಚುಂಬಕಶಕ್ತಿ, ಶತಮಾನದ ಕೌತುಕ ಯಾರಿರಬಹುದು ?

ಆಕೆ **''ಅಮ್ಮಾಳ್''**.

ಎಷ್ಟೋ ಜನ ಪೀಠಾಧಿಪತಿಗಳು, ಪಂಡಿತಾಗ್ರಣಿಗಳು ಸಹ ಮೂಕವಿಸ್ಮಿತರಾಗಿ ಸ್ತುತಿಸಿಹೋದ ಅದ್ಭುತ ಜೀವ.

ಮೊನ್ನೆ ಕುಂಭಕೋಣದಲ್ಲಿ ಶ್ರೀವಿಜಯೀಂದ್ರರ ಆರಾಧನೆಯ ಸಮಯ-ದಲ್ಲಿ ಅಮ್ಮಾಳ್ ಅಪೇಕ್ಷೆಯಂತೆ ಶ್ರೀಸುಶಮೀಂದ್ರತೀರ್ಥ ಶ್ರೀಪಾದರು ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದರು ಅವರ ಮನೆಯಲ್ಲಿ ಶ್ರೀಮೂಲರಾಮನ ಪೂಜೆ ಮಾಡಿದುದು ಇತಿಹಾಸವೇ ಸರಿ. ಇದೇ ಸಂದರ್ಭದಲ್ಲಿ ಕೀಬೋರ್ಡ್ ನುಡಿಸುತ್ತಾ ಮಂತ್ರಸದೃಶವಾದ ಹಾಡುಗಳು ಅವರ ಬಾಯಿಯಿಂದ ಹೊರಟಾಗ ಶ್ರೀಶ್ರೀಪಾದಂಗಳವರು ಶ್ರೀಮೂಲರಾಮದೇವರನ್ನು ಪೆಟ್ಟಿಗೆಯಿಂದ ತೆಗೆಯುತ್ತಿದ್ದ ದೃಶ್ಯ ಅವಿಸ್ಮರಣೀಯ. ನೆರೆದಿದ್ದವರೆಲ್ಲರೂ ಉದ್ಗಾರಮಾಡಿದಾಗ ಇದರ ಯಾವ ಪರಿವೂ ಇಲ್ಲದೆ ಅಮ್ಮಾಳ್ ಹಾಡು ಮುಂದುವರೆಸಿದ್ದರು. ಪೂಜಾನಂತರ ಶ್ರೀಪಾದರು ಅಮ್ಮಾಳ್‌ರವರಿಗೆ ಮೊದಲ ತೀರ್ಥ ನೀಡಿ ಗೌರವಿಸಿದರು. ಸಂಜೆ ನಡೆದ ಭಜನೆಯಲ್ಲಿ ಶ್ರೀಸುಶಮೀಂದ್ರತೀರ್ಥರು ಬಂದು ಸುಮಾರು ೨ ಗಂಟೆಗಳ ಕಾಲ ಭಜನೆಯನ್ನು ಆಲಿಸಿ ಅಂದದ್ದೇನು ಗೊತ್ತೆ ? **''ನಿಮ್ಮನ್ನು ನೋಡಿದರೆ ನಮಗೆ ನಮ್ಮ ಪೂರ್ವಾಶ್ರಮದ ಅಮ್ಮ ನೆನಪಿಗೆ ಬರುತ್ತಾಳೆ.** ಎರಡು ಘಂಟೆಗಳ ಕಾಲ ಕುಳಿತು ಅದನ್ನು ಬಾರಿಸುತ್ತಾ ಇದ್ದೀರಲ್ಲ. ನಿಮಗೆ ಆಯಾಸವಾಗಲಿಲ್ಲವೇ ?'' ಎಂದಾಗ ಅಮ್ಮಾಳ್ ಅವರು ''ನಿಮಗೆ ನನ್ನಿಂದ ತೊಂದರೆಯಾಯಿತು. ನಿಮ್ಮನ್ನು ತುಂಬಾ ಹೊತ್ತು ಕೂರಿಸಿಕೊಂಡೆ'' ಎಂದರು. ಉಭಯರು ತಮ್ಮ-ತಮ್ಮ ಜೀವನದ ಅಮೂಲ್ಯ ಸನ್ನಿವೇಶಗಳ ವಿನಿಮಯ ಮಾಡಿ-ಕೊಳ್ಳುತ್ತಿದ್ದರು. (ಕೆಲವು ಗೌಪ್ಯ ಸಾಧನಾ ವಿಷಯಗಳನ್ನು ಇಲ್ಲಿ ಸೆನ್ಸಾರ್ ಮಾಡಲಾಗಿದೆ). ಹೀಗೆ ಅವರೊಂದು ಮಾತು ಇವರೊಂದು ಮಾತು ಆಡುತ್ತಿದ್ದಾಗ ಇದೊಂದು ಅಪರೋಕ್ಷ ಜ್ಞಾನಿಗಳ ಸಮಾಗಮವೆಂದು ನೆರೆದವರು ಉದ್ಗಾರ ತೆಗೆದರು.

ಶ್ರೀರಾಯರ ಮಠದ ಪ್ರತಿಷ್ಠಿತ ಪ್ರಶಸ್ತಿಯಾದ **'ವಿಜಯೀಂದ್ರರಾಮ'** ಎಂಬ ನೂತನ ಪ್ರಶಸ್ತಿಯನ್ನು ಮೊದಲ ಬಾರಿಗೆ **ಒಂದು ಲಕ್ಷ ರೂಪಾಯಿ**ಗಳೊಂದಿಗೆ ಶ್ರೀಮಠದ ಪ್ರತಿನಿಧಿಗಳೂ ಆಪ್ತಕಾರ್ಯದರ್ಶಿಗಳೂ ಆದ ಶ್ರೀ ರಾಜಾ. ಎಸ್. ರಾಜಗೋಪಾಲಾಚಾರ್ಯರು, ಶ್ರೀಗುರುಸಾರ್ವಭೌಮ ಮಾಸಪತ್ರಿಕೆ ತಮಿಳು ಆವೃತ್ತಿಯ ಸಂಪಾದಕರು ಹಾಗೂ ಆನಂದವಿಠಲಾಂಕಿತರಾದ ಶ್ರೀ ಸಿ.ಕೆ. ವೆಂಕಟೇಶ್ ಅವರು ಸಮರ್ಪಿಸಿದಾಗ, ಪ್ರಶಸ್ತಿ ಹಣವನ್ನು ಸ್ವೀಕರಿಸಲು ಸರ್ವಥಾ ಒಪ್ಪಲಿಲ್ಲ. ಮಂತ್ರಾಲಯದ ಉಭಯ ಶ್ರೀಪಾದಂಗಳವರು ಕಳುಹಿಸಿದ ರಾಯರ ಮಂತ್ರಾಕ್ಷತೆ-ಯೊಂದಿಗೆ ಒಂದು ರೀತಿಯಲ್ಲಿ ಬಲವಂತವಾಗಿ ಅರ್ಪಿಸಲಾಯಿತು. ಹಣಕ್ಕೂ ಮಣ್ಣಿಗೂ ವ್ಯತ್ಯಾಸ ಗೊತ್ತಿಲ್ಲದ, ಇತಿಹಾಸದಲ್ಲಿ ಮಾತ್ರ ಓದಿರುವಂಥ ವ್ಯಕ್ತಿ - ಅದು ಅಮ್ಮಾಳ್. ತೆರೆ-ಮರೆಯಲ್ಲಿರುವ ಆ ಚೇತನ ಕುಂಭಕೋಣ ಕ್ಷೇತ್ರದಲ್ಲಿ ಸದ್ದುಗದ್ದಲ-ವಿಲ್ಲದೆ ಮಾಧವ-ಮಧ್ವರ ಸೇವೆಯನ್ನು ಮಾಡುತ್ತಾ ಕಲಿಯುಗದ ದೊಡ್ಡ ಪ್ರಶ್ನಾರ್ಥಕವಾಗಿ ಗೋಚರಿಸಿದ್ದಾರೆ.

❑❑


## ಶ್ರೀನವರತ್ನ ಸುದರ್ಶನಾಚಾರ್ಯರಿಂದ ಪ್ರಾಯೋಜಿತವಾದ ಮಾನವೀಯ ಕಳಕಳಿಯ ನೂತನ ಯೋಜನೆ

"ಜಾತಸ್ಯ ಹಿ ಧ್ರುವಂ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ"

ಎಂಬ ಗೀತಾಚಾರ್ಯನ ವಾಕ್ಯದಂತೆ ಈ ಮಾನವ ಶರೀರವು ಅನಿತ್ಯ. ಈ ಚರಾಚರ ಜಗತ್ತಿನಲ್ಲಿ ಹುಟ್ಟು-ಸಾವುಗಳು ಸತ್ಯ. ಈ ಕಾರಣದಿಂದಾಗಿ ಈ ಶರೀರವನ್ನು ಹೊಂದಿದ ಜೀವಿಗೆ ಈ ಜಗತ್ತಿನಲ್ಲಿ ಇರುವ ತನಕ ಶುಭಕರ್ಮಗಳೂ, ಮೃತಿ ಹೊಂದಿದ ನಂತರ ಅಪರಕರ್ಮಗಳು ಶಾಸ್ತ್ರೋಕ್ತವಾಗಿ ನಡೆಯಬೇಕೆಂದು ಸೃಷ್ಟಿ ನಿಯಮ.

ನಮ್ಮ ಸಮಾಜದಲ್ಲಿ ಬಹಳ ಜನರು ಇತರರಿಗೆ ಇರುವಂತೆ ಬಂಧು-ಬಾಂಧವರನ್ನು ಹೊಂದಿರುವುದಿಲ್ಲ. ವಯಸ್ಸಾದ ನಂತರದಲ್ಲಿ ಆ ವ್ಯಕ್ತಿಯ ಮನಸ್ಸಿನಲ್ಲಿ ''ನಾನು ಮೃತಿ ಹೊಂದಿದ ಮೇಲೆ ನನ್ನ ಅಪರಕರ್ಮಗಳನ್ನು ಮಾಡುವವರು ಯಾರೂ ಇಲ್ಲ'' ಎಂಬ ಚಿಂತೆಯು ಬಹಳವಾಗಿ ಕಾಡುತ್ತಿರುತ್ತದೆ. ಈ ರೀತಿಯಾಗಿ ಏಕಾಂಗಿಗಳಾದ ಜೀವಿಗಳಿಗೆ ಅವರ ಚಿಂತೆಯನ್ನು ದೂರಮಾಡಿ, ಅವರ ನಿಧನದ ನಂತರದಲ್ಲಿ ಶಾಸ್ತ್ರೋಕ್ತವಾಗಿ ಅವರ ಅಪರಕರ್ಮಗಳನ್ನು ಮಾಡುವ ಒಂದು ಅತ್ಯಂತ ಪವಿತ್ರವಾದ ಮಾನವೀಯ ಅನುಕಂಪದ ಯೋಜನೆಯನ್ನು ಅಪರಕರ್ಮ ಧುರೀಣರಾದ ಶ್ರೀನವರತ್ನ ಸುದರ್ಶನಾಚಾರ್ಯರು ರೂಪಿಸಿರುತ್ತಾರೆ. ಈ ಯೋಜನೆಯ ಅನ್ವಯ ಬಂಧು-ಬಾಂಧವರಿಲ್ಲದ ಏಕಾಂಗಿ ವ್ಯಕ್ತಿಗಳು ಈ ಯೋಜನೆಯಲ್ಲಿ ತಮ್ಮ ಹೆಸರು - ವಿಳಾಸಗಳನ್ನು ನೋಂದಾಯಿಸಿ ನಿಶ್ಚಿಂತರಾಗಿ ತಮ್ಮ ಸ್ವಸ್ವಯೋಗ್ಯ ಕರ್ಮನಿರತರಾಗಿ ಸಾಧನೆ ಮಾಡಿಕೊಳ್ಳಬಹುದು. ಈ ಒಂದು ಸಾಮಾಜಿಕ ಕಳಕಳಿಯ ಯೋಜನೆಗೆ ಆಸಕ್ತಿಯುಳ್ಳ ಉದಾರ ಹೃದಯಿಗಳು ದೇಣಿಗೆಯನ್ನು ನೀಡಲು ಅವಕಾಶವಿರುತ್ತದೆ. ಈ ಯೋಜನೆಯ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ

**ಶ್ರೀನವರತ್ನ ಸುದರ್ಶನಾಚಾರ್ಯ**

ಶ್ರೀಪವಮಾನ ಮಂದಿರ ಧಾರ್ಮಿಕ ಕೇಂದ್ರ, ಶ್ರೀಗುರು ರಾಘವೇಂದ್ರ ಸೇವಾ ಸಮಿತಿ (ರಿ.)
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ ಸಂಖ್ಯೆ : 080-26766711, 26768662, 55391173, ಮೊಬೈಲ್ ಸಂಖ್ಯೆ : 98801-10281






# ಹರಿದಾಸರು ರಾಯರಿಗೆ ಅರ್ಪಿಸಿದ 'ಗುರುಪದಹಾರ'


■ **ಶ್ರೀ ವಸಂತರಾವ. ಕೃ. ಕೊರ್ತಿ**

ಶಿವಾಜಿ ಬೀದಿ, ಡಾ. ಕನ್ನೂರ ದವಾಖಾನೆ ಹತ್ತಿರ, ಆನೇ ಕ್ರಾಸ್, ವಿಜಾಪೂರ - ೫೮೬ ೧೦೧


**ಕ**ಲಿಯುಗದ ಕಾಮಧೇನು, ಕಲ್ಪವೃಕ್ಷ ಎಂದು ಎಲ್ಲ ಭಕ್ತರಿಂದ ಸ್ತುತಿಸಲ್ಪಡು-ತ್ತಿರುವ ಶ್ರೀರಾಘವೇಂದ್ರಸ್ವಾಮಿಗಳ ಮಹಿಮೆ ಅಪಾರ. ಕರ್ನಾಟಕದ ಪ್ರತಿಯೊಂದು ನಗರ, ಪಟ್ಟಣಗಳಲ್ಲಿ ೨ - ೩ ಮೃತ್ತಿಕಾ ವೃಂದಾವನಗಳು ಸ್ಥಾಪಿತಗೊಂಡು ಎಲ್ಲ ವೃಂದಾವನಗಳಲ್ಲೂ ಪ್ರತಿನಿತ್ಯ ಅನೇಕ ಸೇವೆಗಳು ಸಾಂಗವಾಗಿ ಸಾಗುತ್ತಿವೆ. ''ದೇವರೆಂದರೆ ತಿರುಪತಿ ತಿಮ್ಮಪ್ಪ - ಗುರುಗಳೆಂದರೆ ಮಂಚಾಲೆ ರಾಘಪ್ಪ'' ಎಂಬುದು ಪ್ರಸಿದ್ಧ ವಾಣಿಯಾಗಿದೆ. ರಾಯರು ಮಂತ್ರಾಲಯದಲ್ಲಿ ಸಜೀವ ವೃಂದಾವನಸ್ಥರಾಗಿ ೩೩೬ ವರುಷಗಳು ಕಳೆದರೂ ದಿನದಿನಕ್ಕೂ ಅವರ ಭಕ್ತವೃಂದ ಹೆಚ್ಚುತ್ತಲಿದೆ. ಇಂಥಹಾ ಮಹಾಮಹಿಮ ಗುರುಗಳನ್ನು ಅನೇಕ ಅಪರೋಕ್ಷಜ್ಞಾನಿಗಳಾದ ಹರಿದಾಸರು ಹಾಡಿ ಹೊಗಳಿದ್ದಾರೆ. ಹರಿದಾಸರು ಪ್ರತ್ಯಕ್ಷವಾಗಿ ಮಂತ್ರಾಲಯದ ವೃಂದಾವನದಲ್ಲಿ ರಾಯರನ್ನು ಕಂಡಿದ್ದಾರೆ. ಸಂತೋಷಮದದಿಂದ ಕುಣಿದಾಡಿದ್ದಾರೆ. ರಾಯರ ಮೇಲೆ ಸಾವಿರಾರು ಪದಗಳು ರಚಿತವಾಗಿವೆ. ಯಾವ ಯತಿಗೂ ಇವರಿಗೆ ದೊರೆತಂತಹ ಸೌಭಾಗ್ಯ ದೊರೆತಿಲ್ಲ. ಕೆಲ ದಾಸರು ರಾಯರ ಮೇಲೆ ರಚಿಸಿದ ಪದಗಳನ್ನು ಇಲ್ಲಿ ಯಥಾಮತಿ ತಿಳಿಸುವ ಪ್ರಯತ್ನಮಾಡುವೆ.

ಶ್ರೀಜಗನ್ನಾಥದಾಸರು ರಾಯರನ್ನು ಕರೆಯುವ ಈ ಪದವನ್ನು ಅವಲೋಕಿಸೋಣ.

ಬಾರೋ ರಾಘವೇಂದ್ರ ಬಾರೋ ಕಾರುಣ್ಯವಾರಿಧಿಯೇ ಬಾರೋ ।
ಆರಾಧಿಪ ಭಕ್ತರಭೀಷ್ಟ ಪೂರೈಸುವ ಪ್ರಭುವೇ ಬಾರೋ ॥ ಪ ॥

ರಾಜವಂಶೋದ್ಭವನ ಪಾದ । ರಾಜೀವ ಭೃಂಗನೆ ಬಾರೋ ।
ರಾಜಾಧಿರಾಜರೊಳು ವಿ । ರಾಜಿಸುವ ಚೆಲುವ ಬಾರೋ ॥ ೧ ॥

ವ್ಯಾಸರಾಯನೆನಿಸಿ ನೃಪನ । ಕ್ಲೇಶ ಕಳೆದವನೆ ಬಾರೋ ।
ಸನ್ಯಾಸ ಕುಲದೀಪ ಬಾರೋ । ಮಾನ್ಯ ಜಗನ್ನಾಥವಿಠ್ಠಲ ಪ್ರಸನ
ಜನರ ಪ್ರೀಯ ಬಾರೋ ॥ ೨ ॥

ಈ ಪುಟ್ಟ ಪದ್ಯದಲ್ಲಿ ಶ್ರೀಜಗನ್ನಾಥದಾಸರು ರಾಯರ ಪ್ರಹ್ಲಾದ, ವ್ಯಾಸ ಅವತಾರಗಳನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ರಾಯರನ್ನು ಅತ್ಯಂತ ಶ್ರದ್ಧೆಯಿಂದ ಕರೆದಿದ್ದಾರೆ.

ಬಾರೋ ರಾಘವೇಂದ್ರ ಬಾರಯ್ಯ ಬಾ ಬಾ ।
ಬಾರೋ ಗುರು ರಾಘವೇಂದ್ರ ।
ಹಿಂದು ಮುಂದೆಲ್ಲೆನಗೆ ನೀ ಗತಿ ಎಂದು ಪೊಂದಿದೆ ನಿನ್ನ ಪಾದವ ।
ಬಂಧನವ ಬಿಡಿಸೆನ್ನ ಕರಪಿಡಿ ನಂದ ಕಂದ ಮುಕುಂದ ಬಂಧೋ ॥ ಪ ॥

ಸೇವಕನೆಲೋ ನಾನು । ಧಾವಿಸಿ ಬಂದೆನು ಸೇವೆಯ ನೀಡು ನೀನು ।
ಸೇವಕನ ಸೇವಿಸಿ ಸೇವ್ಯ ಸೇವಕ ಭಾವವೀಯುತ ಠಾವುಗಾಣಿಸಿ ಪೊರೆಯೋ ।
ಧರೆಯೊಳು ಪಾವನಾತ್ಮಕ ಕಾಯ್ವ ಕರುಣಿ ॥ ೧ ॥

ನರಹರಿ ಪ್ರೀಯನೆ ಬಾ ಗುರು ಶ್ರೀಶವಿಠಲನ ಕರುಣ ಪಾವನೆ ಬೇಗನೆ ಬಾ ॥
ಗುರುವರನೆ ಪರಿಪೋಷಿಸೆನ್ನನು ಮರೆಯದಲೆ ತವ ಚರಣಕೋಟಿಯಲಿರಿಸಿ ।
ಚರಣಾಂಬುಜವ ತೋರುವ ತ್ವರಿತದಲಿ ಓಡೋಡಿ ಬಾ ಬಾ ॥ ೨ ॥

ನರಹರಿ ಪ್ರೀಯನೆ ಬಾ, ಗುರು ಶ್ರೀಶವಿಠಲನ ಕರುಣ ಪಾತ್ರನೆ ಬಾ ।
ಗುರುವರನೆ ಪರಿಪೋಷಿಸೆನ್ನನು ಮರೆಯದಲೆ ತವಚರಣಕೋಟಿಯಲಿರಿಸಿ ।
ಚರಣಾಂಬುಜವ ತೋರುತ ತ್ವರಿತದಲಿ ಓಡೋಡಿ ಬಾ ಬಾ ॥ ೩ ॥

ಶ್ರೀಶವಿಠ್ಠಲದಾಸರು ಈ ಪದ್ಯದಲ್ಲಿ ರಾಯರನ್ನು ಬೇಗನೆ ಬಂದು ಸಂಸಾರ ಬಂಧನ ದೂರಮಾಡಿರೆಂದು ಪ್ರಾರ್ಥಿಸಿದ್ದಾರೆ ಮತ್ತು ಸೇವಕನ ಸೇವೆಯನ್ನು ಸ್ವೀಕರಿಸಿ ಯಾವಾಗಲೂ ಸೇವ್ಯ, ಸೇವಕ ಭಾವನೆ ಬರಲೆಂದು ಬೇಡಿಕೊಂಡಿದ್ದಾರೆ. ರಾಯರ ಪಾದಾರವಿಂದಗಳಲ್ಲಿ ಅನನ್ಯ ಭಕ್ತಿ ಇರುವಂತೆ ಚರಣಕಮಲಗಳನ್ನು ತೋರಿಸುತ್ತಾ ಬೇಗನೆ ಓಡೋಡಿ ಬಾ ಎಂದು ಬೇಡಿಕೊಂಡಿದ್ದಾರೆ.

ದಾಸಚತುಷ್ಟಯರಲ್ಲಿ ಒಬ್ಬರಾದ ಶ್ರೀಗೋಪಾಲದಾಸರು ರಾಯರ ಚರಣಕಮಲ ಸ್ಮರಿಸುವುದರಿಂದ ದೊರಕುವ ಫಲವನ್ನು ಈ ಕೆಳಗಿನ ಪದದಲ್ಲಿ ವರ್ಣಿಸಿದ್ದಾರೆ.

ಗುರುರಾಘವೇಂದ್ರರ ಚರಣಕಮಲವನ್ನು ।
ಸ್ಮರಿಸುವ ಮನುಜರಿಗೆ ॥ ಪ ॥

ಕರೆಕರೆಗೊಳಿಸುವ ದುರಿತ - ದುಷ್ಕೃತವೆಲ್ಲ ।
ಕರಿಯು ಸಿಂಹನ ಕಂಡ ತೆರನಾಗುವುದಯ್ಯಾ ॥ ಅ.ಪ. ॥

'ರಾ' ಯೆನ್ನೆ ರಾಶಿ ದೋಷಗಳೆಲ್ಲ ದಹಿಸುವ ।
'ಘ' ಯೆನ್ನೆ ಘನ ಜ್ಞಾನ ಭಕ್ತಿಯೀವ ॥
'ವೇಂ' ಯೆನ್ನೆ ವೇಗದಿ ಜನನ ಮರಣ ದೂರ ।
'ದ್ರ' ಯೆನ್ನೆ ದ್ರವಿಣಾರ್ಥ ಶ್ರುತಿಪಾದ್ಯನ ಕಾಂಬ ॥ ೧ ॥



ಅಂಧಕರಿಗೆ ಚಕ್ಷು ವಂಧ್ಯೆಯರಿಗೆ ಸುತರು ।
ಬಂದ ಬಂದವರಿಗಭೀಷ್ಟವ ಕೊಡುತ ॥
ಒಂದಾರುನೂರು ವತ್ಸರ ಬೃಂದಾವನದಲ್ಲಿ ।
ಚೆಂದಾಗಿ ನಿಂದು ಮೆರೆವ ಕೃಪಾಸಿಂಧು ॥ ೨ ॥

ದೇವಾಂಶರಾಗಿ ತುಂಗಾತೀರದಿ ನಿಂದು ।
ಸೇವೆ ಭೂಸರರಿಂದ ಬಹುಕೊಳುತ ॥
ಭಾವಜನಯ್ಯ **ಶ್ರೀಗೋಪಾಲವಿಠಲ**ನ ।
ಸೇವಿಸುತಿಹ ಯತಿಕುಲಶಿಖಾಮಣಿಯಾದ ॥ ೩ ॥

ಈ ಸುಂದರ ಪದದಲ್ಲಿ ಶ್ರೀಗೋಪಾಲದಾಸರು ರಾಯರ ಚರಣಸ್ಮರಣೆಯಿಂದ ದುರಿತರಾಶಿಗಳು ಆನೆಗಳಂತಿದ್ದರೂ, ಸಿಂಹನ ಕಂಡು ಓಡಿಹೋಗುವಂತೆ ಕರಗಿ ಹೋಗುವವು ಎಂದು ಹೇಳಿದ್ದಾರೆ. 'ರಾಘವೇಂದ್ರ' ಸ್ವಾಮಿಗಳ ಹೆಸರಿನ ಪ್ರತಿಯೊಂದು ಅಕ್ಷರದ ಉಚ್ಚಾರದಿಂದ ಆಗುವ ಲಾಭವನ್ನು ಹೇಳಿದ್ದಾರೆ. ಕುರುಡರಿಗೆ ದಿವ್ಯದೃಷ್ಟಿ, ಬಂಜೆಯರಿಗೆ ಮಕ್ಕಳನ್ನು ಮತ್ತು ಅವರ ಬಳಿಗೆ ಬರುವ ಎಲ್ಲ ಭಕ್ತರ ಸಕಲ ಮನೋಭೀಷ್ಟ ಪೂರೈಸುವರೆಂದೂ ಮತ್ತು ಏಳುನೂರು ವರುಷಗಳವರೆಗೆ ಮಂತ್ರಾಲಯದ ವೃಂದಾವನದಲ್ಲಿ ನೆಲೆಸಿ ಭಕ್ತರನ್ನು ಕಾಪಾಡುವರೆಂದು ಹೊಗಳಿದ್ದಾರೆ. ಕೊನೆಗೆ ದಾಸರು ರಾಯರು ದೇವಾಂಶರೆಂದೂ ಮತ್ತು ಯಾವಾಗಲೂ ಪರಮಾತ್ಮನ ಪಾದಾರಾಧಕರೆಂದೂ ಹೊಗಳಿದ್ದಾರೆ.

ಈ ಚಿಕ್ಕ ಪದದಲ್ಲಿ ಶ್ರೀಜಗನ್ನಾಥದಾಸರು ರಾಯರನ್ನು ಪ್ರತ್ಯಕ್ಷವಾಗಿ ವೃಂದಾವನದಲ್ಲಿ ಕಂಡು ಹೀಗೆ ಹಾಡಿದ್ದಾರೆ.

ಎದ್ದು ಬರುವಾರೆ ನೋಡೆ ಗುರುಗಳು ।
ಮುದ್ದು ವೃಂದಾವನ ಮಧ್ಯದೊಳಗಿದ್ದು ॥
ತಿದ್ದಿ ಹಚ್ಚಿದ ನಾಮಮುದ್ರೆಗಳೊಪ್ಪುತಲಿ ॥ ಪ ॥

ಹೃದಯಸದನದಲಿ ಪದುಮನಾಭನ ಭಜಿಸಿ ।
ಮುದಮನದಿಂದಲಿ ಸದಮುರೂಪತಾಳಿ ॥
ಗಳದೊಳು ಶ್ರೀತುಳಸಿನಳೀನಾಕ್ಷಿ ಮಾಲೆಯು ।
ಚಲುವ ಮುಖದೊಳು ಪೊಳೆವ ದಂತಗಳಿಂದ ॥
ದಾತಗುರು ಜಗನ್ನಾಥವಿಠಲನ ।
ಪ್ರಿತೀಯಪಡಿಸುತ ದೂವರ ಪೊರೆವುತ ॥ ೧ ॥

ರಾಯರು ದಾಸರಿಗೆ ವೃಂದಾವನದಲ್ಲಿ ಪ್ರತ್ಯಕ್ಷವಾಗಿ ನಾಮ, ಮುದ್ರೆಗಳಿಂದ ಭೂಷಿತರಾಗಿದ್ದನ್ನು ಕಂಡಿದ್ದಾರೆ. ಹೃದಯಕಮಲದಲ್ಲಿ ಯಾವಾಗಲೂ ಪರಮಾತ್ಮ-

ನನ್ನು ಸ್ಮರಿಸುತ್ತಾ ಅತ್ಯಂತ ಸಂತೋಷದಿಂದ ಈ ಅವತಾರ ತಾಳಿದ್ದಾರೆಂದು ವರ್ಣಿಸಿದ್ದಾರೆ. ಕೊರಳಲ್ಲಿ ತುಳಸೀಹಾರ ಧರಿಸಿ, ಅತ್ಯಂತ ಸುಂದರವಾದ ರಾಯರ ಹೊಳೆವ ದಂತಗಳನ್ನೂ ಸಹ ದಾಸರು ವರ್ಣಿಸಿದ್ದಾರೆ. ಯಾವಾಗಲೂ ಹರಿಯನ್ನು ಕೊಂಡಾಡುತ್ತಾ ಅವನ ಅನುಗ್ರಹದಿಂದಲೇ ತಮ್ಮಲ್ಲಿ ಬರುವ ಸಕಲ ಭಕ್ತರನ್ನು ಸಲಹುವರೆಂದು ಸಾರಿದ್ದಾರೆ.

ಶ್ರೀಗೋಪಾಲದಾಸರ ಸುಳಾದಿಯಲ್ಲಿ ಮಂತ್ರಾಲಯದ ಪೂರ್ಣವಿವರ ಹೀಗೆ ವರ್ಣಿಸಿದ್ದಾರೆ -

ಧರೆಯೊಳಗೆ ನಮ್ಮ ಗುರುರಾಘವೇಂದ್ರರಿನ್ನು । ಇರುತಿಪ್ಪ ವಿವರವ ಅರಿತಷ್ಟು ವರ್ಣಿಸುವೆ । ಸ್ಥಿರವಾಗಿ ಮಂತ್ರಾಲಯಪುರ ತುಂಗಾತೀರದಿ ॥ ಹರಿಭಕ್ತ ಪ್ರಹ್ಲಾದ ವರಯಾಗ ಮಾಡಿ ಇಲ್ಲಿ । ಸುರರಿಗಮೃತ ಉಣಿಸಿ ಪರಿ ಪರಿ ಕ್ರಿಯೆ ಮಾಡಿ । ಪರಿಶುದ್ಧನಾದನೆಂದು ಅರಿತು ಈ ಸ್ಥಳದಲ್ಲಿ । ಗುರುರಾಘವೇಂದ್ರರಾಯ ಶರೀರ ಪೋಗಾಡಿಸಿಲ್ಲಿ । ಪರಲೋಕ ಸಾಧನ ಪರಿಪೋತ ಮಾಡಿಕೊಂಡು । ಶಿರಿಕೃಷ್ಣನ ಚರಣಕ್ಕೆರಗಿ ಸಂತೋಷದಲ್ಲಿ । ॥ ೧ ॥

ನರಹರಿ ಶ್ರೀಕೃಷ್ಣ ರಾಮ ವೇದವ್ಯಾಸ । ಎರಡೆರಡು ನಾಲ್ಕು ಹರಿಮೂರುತಿಗಳು । ಪರಿವಾರ ಸಹಿತವಾಗಿ ಸಿರಿ ಸಹಿತನಿಂದು । ಸುರುಗುರು ಮಧ್ವಾಚಾರ್ಯರೇ ಮೊದಲಾಗಿ । ತರುವಾಯದಲಿನ್ನು ತಾರತಮ್ಯಾನುಸಾರ । ಪರಿಪರಿ ಯತಿಗಳು ಇರುತಿಪಲ್ಲಿ । ಗರುಡವಾಹನ ರಂಗ ಗೋಪಾಲವಿಠ್ಠಲ ತನ್ನ । ಶರಣರ ಪರಿಪಾಲಿಸುತಿರುತಿಪ್ಪನಿಲ್ಲಿ । ॥ ೨ ॥

ನರಹರಿರೂಪಕನಾಗಿ ವಾಸವಾಗಿ ಇಲ್ಲಿ । ದುರಿತ ದುಷ್ಕೃತ ಬ್ರಹ್ಮಹತ್ಯೆಗಳ ದೂರೋಡಿಸುವ । ಸಿರಿರಾಮನಾಗಿ ವಾಸವಾಗಿ ಪರಿ । ಪರಿಯಲಿ ದೇಶಾಂತರದಲಿ ಭಿನ್ನ ಕಳಕೊಂಡು । ನರರಿಲ್ಲಿ ಬಂದರೆ ಸ್ಥಿರಗಟ್ಟುವ ಪುತ್ರೋತ್ಸವ । ಮದುವೆ ಮುಂಜಿ ಹರಿಕೆಗಳ ಕೈಗೊಂಡು ಹರುಷ ಪಡೆವ । ವರವೇದ ಅವರ ಕುಶಾಸ್ತ್ರವ । ಹರಿಸರ್ವೋತ್ತಮನೆಂದು ಇರುವಿನಲ್ಲಿ ತೋರಿ । ಶರಣ ಜನಕೆ ಇನ್ನು ವರ ಜ್ಞಾನವ ಸುಧೆಯ । ಗರೆದು ಕೊಡುತಲಿ ಇರುತಿಪ್ಪನಿಲ್ಲಿ । ಸಿರಿವಂದಿತನಾದ ಗೋಪಾಲವಿಠ್ಠಲ । ಪರಿ ಪರಿ ಇಲ್ಲಿ ವಾಲಗಗೊಳುತಿಪ್ಪ ॥ ೩ ॥

ದಿನದಿನಕಿಲ್ಲಿ ನೂತನ ಪೂಜೆಗಳಾಗುವವು । ದಿನವು ದಿನಕಿಲ್ಲಿ ನೂತನ ವಾರ್ತೆ-ಗಳಾಗುವುವು । ದಿನದಿನಕಿಲ್ಲಿ ನೂತನ ಕೀರ್ತಿಗಳಾಗುತಿಹವು । ಜನಸಂದಣಿ ಪ್ರತಿದಿನ ಪ್ರತಿಜನರಿಸುತಿಂಬುವರು । ಜನುಮ ಸಫಲ ತಮ್ಮ ಜನುಮವ ನೀಗುವರು । ದಿನಸಪ್ತ ಶತವರ್ಷ ಪರಿಯಂತವಾಗಿ ॥ ದಿನಕರ ಶತತೇಜ ಜನನಾಥ ತಾನಿಲ್ಲಿ । ಅನುವಾತ ತಾ ನಿಂದು ಜನ ಪಾಲಿಪುದಕ್ಕನುಮಾನ ಸಲ್ಲದು, ಗುಣಗಣಪರಿ । ಪೂರ್ಣ ಗೋಪಾಲವಿಠ್ಠಲ ಅಣೋ । ರಣಿಯೋ ಎಂಬವಗೆ ಎಣೆಯಾರು ಜಗದೊಳಗೆ ॥ ೪ ॥

ಮಂತ್ರಸಿದ್ಧಿಯ ಕ್ಷೇತ್ರ ಇದು ಕೋವಿದರು । ಮಂತ್ರ ಪ್ರತಿಪಾದ್ಯ ಗೋಪಾಲವಿಠ್ಠಲನಿಂದ ॥ ೫ ॥



ಈ ಸುದೀರ್ಘ ಸುಳಾದಿಯಲ್ಲಿ ಶ್ರೀಗೋಪಾಲದಾಸರು ಮಂತ್ರಾಲಯ ಕ್ಷೇತ್ರದ ಮಹಿಮೆಯನ್ನು ಹೇಳಿದ್ದಾರೆ. ಹಿಂದೆ ರಾಯರು ಪ್ರಹ್ಲಾದರಾಜರಾಗಿದ್ದಾಗ ಅನೇಕ ಯಾಗ ಮಾಡಿ ದೇವತೆಗಳಿಗೆ ಅಮೃತ ಉಣಿಸಿದ ಪರಮಪವಿತ್ರ ಭೂಮಿಯೇ ಮಂತ್ರಾಲಯವೆಂದು ಹೇಳಿದ್ದಾರೆ.

ಮಂತ್ರಾಲಯದಲ್ಲಿ ಶ್ರೀಹರಿಯು ಕೃಷ್ಣ, ರಾಮ, ವೇದವ್ಯಾಸ, ನರಹರಿ ಹೀಗೆ ನಾಲ್ಕು ರೂಪಗಳಿಂದ ಪರಿವಾರ ಸಹಿತನಾಗಿ ನೆಲೆಸಿದ್ದಾನೆಂದೂ, ಸಾಕ್ಷಾತ್ ಶ್ರೀಮಧ್ವಾಚಾರ್ಯರು ವೃಂದಾವನದಲ್ಲಿ ಎಲ್ಲ ಯತಿಗಳ ಸಹಿತ ಇರುವರೆಂದೂ ಸಾರಿದ್ದಾರೆ ಮತ್ತು ಶ್ರೀಹರಿಯು ನರಸಿಂಹ ರೂಪದಿಂದ ದುರಿತ - ದುಷ್ಕೃತ್ಯ - ಬ್ರಹ್ಮಹತ್ಯೆಗಳನ್ನು ದೂರಮಾಡುವನೆಂದೂ, ರಾಮನಾಗಿ ಬಂದ ದರಿದ್ರರಿಗೆ ಅನ್ನ - ವಸತಿ ಕಲ್ಪಿಸುವನೆಂದೂ, ಶ್ರೀಕೃಷ್ಣನಾಗಿ ಮದುವೆ - ಮುಂಜಿ ಮಾಡಿಸುವ ಅಪುತ್ರರಿಗೆ ಪುತ್ರರನ್ನು ಕೊಡುವನೆಂದೂ ಹೇಳಿದ್ದಾರೆ. ವೇದವ್ಯಾಸರೂಪದಿಂದ ನಿಂತು ದುರ್ವಾದಿ-ಗಳನ್ನು ದೂರ ಓಡಿಸುವನೆಂದೂ, ಹರಿಸರ್ವೋತ್ತಮನೆಂಬ ಸ್ಥಿರಜ್ಞಾನವನ್ನು ಎಲ್ಲರಿಗೂ ನೀಡುವನೆಂದು ಹೊಗಳಿದ್ದಾರೆ ಮತ್ತು ಕೊನೆಯ ಪದದಲ್ಲಿ ಮಂತ್ರಾಲಯದಲ್ಲಿ ದಿನದಿನಕೆ ಉತ್ಸವಗಳಾಗುವವು. ದಿನವೂ ಜನಸಂದಣಿ ಹೆಚ್ಚಾಗುವುದು. ಏಳುನೂರು ವರುಷಗಳವರೆಗೆ ಶ್ರೀರಾಯರು ಮಂತ್ರಾಲಯದ ವೃಂದಾವನದಲ್ಲಿ ಸ್ಥಿರವಾಗಿ ಗೋಪಾಲ-ವಿಠ್ಠಲನ ಸಹಿತವಾಗಿ ಇರುವರೆಂದೂ ಸಾರಿದ್ದಾರೆ. ಕೊನೆಗೆ ಮಂತ್ರಾಲಯವು ಮಂತ್ರಸಿದ್ಧಿಯ ಕ್ಷೇತ್ರ. ಕಾರಣ, ಇಲ್ಲಿ ಮಂತ್ರಪ್ರತಿಪಾದ್ಯ ಗೋಪಾಲವಿಠ್ಠಲನೆಂದು ಹೇಳಿದ್ದಾರೆ.

ಅತ್ಯಂತ ಸರಳವಾಗಿ ಕನ್ನಡದಲ್ಲಿ ಹರಿದಾಸರು ರಾಯರ ಮಹಿಮೆ, ಮಂತ್ರಾಲಯ ಕ್ಷೇತ್ರ ಮಹಾತ್ಮೆಯನ್ನು ವೃಂದಾವನದಲ್ಲಿ ಪರಮಾತ್ಮ ಯಾವ ರೂಪಗಳಿಂದ ನೆಲೆಸಿದ್ದಾನೆಂದೂ ಪಾಮರರ ಉದ್ಧಾರಕ್ಕಾಗಿ ಹೇಳಿದ್ದಾರೆ. ಇಂತಹ ಸುಲಿದ ಬಾಳೆಯ ಹಣ್ಣಿನಂತಿರುವ ಈ ಹರಿದಾಸರ ರಾಯರ ಪದಗಳನ್ನು ದಿನಾಲೂ ಹಾಡುತ್ತಾ ಜೀವನ ಸಾಫಲ್ಯಗೊಳಿಸೋಣ.

❑❑

## ಪ್ರಕಟಣೆ

**ಸುಭದ್ರಾ** .............. (ಸರ್ ನೇಮ್ ಇದೆ) ಎನ್ನುವವರು ಎಂ.ಓ. ಮಾಡಿದ ರೂ. ೨೫೦-೦೦ ದಿನಾಂಕ ೦೩-೦೯-೨೦೦೭ ರಂದು ನಮಗೆ ತಲುಪಿದೆ. ವಿಳಾಸ ಸರಿಯಿರದ ಕಾರಣ, ಅವರ ಹೆಸರಿನಲ್ಲಿ ರಸೀದಿ ಹಾಕಿಲ್ಲ. ದಯವಿಟ್ಟು ಇವರು ಕೂಡಲೇ ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ನಮ್ಮ ಬೆಂಗಳೂರು ಕಛೇರಿಗೆ ಕಳುಹಿಸಲು ಕೋರುತ್ತೇವೆ.

- ಸಂ.

# ಮಂತ್ರಾಲಯ ಪ್ರಭುಗಳ ಪ್ರಮಾಣ ಪದ್ಧತಿ ವ್ಯಾಖ್ಯಾನ ವೈಶಿಷ್ಟ್ಯ

■ ವಿದ್ವಾನ್ ನರಸಿಂಹಾಚಾರ್ಯ ಪುರೋಹಿತ್
ಮಂತ್ರಾಲಯ

**“ಮಾ**ನಾಧೀನಾ ಮೇಯ ಸಿದ್ಧಿಃ’’ ಎಂಬ ವಚನಾನುಸಾರವಾಗಿ ಯಾವುದಾದರೊಂದು ಪ್ರಮೇಯ ಸಿದ್ಧಿಸಬೇಕಾದರೆ ಅದಕ್ಕೆ ಪ್ರಮಾಣವೇನು ? ಎಂಬ ಪ್ರಮಾಣದ ಜಿಜ್ಞಾಸೆಯು ಮೂಡುವುದು ಸಹಜ. ಬೇರೆ ಬೇರೆ ದಾರ್ಶನಿಕರಿಂದ ಪ್ರಮಾಣ ನಿರೂಪಣೆಯ ವಿಷಯದಲ್ಲಿ ಮನಬಂದಂತೆ ವರ್ತಿಸಿದ್ದನ್ನು ಕಾಣುತ್ತೇವೆ. ಚಾರ್ವಾಕರು ಪ್ರತ್ಯಕ್ಷವೊಂದೇ ಪ್ರಮಾಣವೆಂದರೆ ಕೆಲವು ದಾರ್ಶನಿಕರು ಪ್ರತ್ಯಕ್ಷ ಅನುಮಾನ ಎರಡೇ ಪ್ರಮಾಣಗಳೆಂದು ಮತ್ತು ಕೆಲವರು ಪ್ರತ್ಯಕ್ಷ - ಅನುಮಾನ - ಆಗಮ ಪ್ರಮಾಣಗಳೆಂದು, ನೈಯಾಯಿಕಾದಿಗಳು ಉಪಮಾನವನ್ನು ಸೇರಿಸಿ ನಾಲ್ಕು ಪ್ರಮಾಣಗಳೆಂತಲೂ, ಮೀಮಾಂಸಕರು ಅರ್ಥಾಪತ್ತಿ - ಅನುಪಲಬ್ಧಿ ಎಂಬೆರಡನ್ನೂ ಸೇರಿಸಿ ಆರು ಪ್ರಮಾಣಗಳೆಂತಲೂ ಹೇಳಿರುವರು.

ಶ್ರೀಮನ್ಮಧ್ವಾಚಾರ್ಯರು ಮಾತ್ರ ಅವೆಲ್ಲವುಗಳನ್ನು ವಿಮರ್ಶಿಸಿ, ಕೇವಲಪ್ರಮಾಣ - ಅನುಪ್ರಮಾಣಗಳೆಂದು ಎರಡು ವಿಭಾಗ ಮಾಡಿ, ಅನುಪ್ರಮಾಣಗಳು ಪ್ರತ್ಯಕ್ಷ - ಅನುಮಾನ - ಆಗಮಗಳೆಂದು ಮೂರು ವಿಧವಾಗಿ ವಿಂಗಡಿಸಿ ಯಥಾರ್ಥ ಜ್ಞಾನಕ್ಕೆ ಕೇವಲ ಪ್ರಮಾಣವೆಂತಲೂ, ಪ್ರತ್ಯಕ್ಷಾದಿಗಳಿಗೆ ಅನುಪ್ರಮಾಣವೆಂತಲೂ ಕರೆದಿರುವರು. ಅಧಿಕ ಪ್ರಮಾಣಗಳನ್ನು ಇವುಗಳಲ್ಲೇ ಯಥಾಯೋಗ್ಯವಾಗಿ ಅಂತರ್ಭಾವವನ್ನು ತೋರಿಸಿ ಸಾರಸ್ವತ ಪ್ರಪಂಚಕ್ಕೆ ಅತ್ಯಪೂರ್ವವಾದ ಪ್ರಮಾಣ ವಿಮರ್ಶೆಯನ್ನು ಮಾಡಿರುವರು. ಅದನ್ನು ಅವರ ‘‘ಪ್ರಮಾಣಲಕ್ಷಣ’’ ಗ್ರಂಥದಲ್ಲಿ ಕಾಣುತ್ತೇವೆ. ಇದಕ್ಕೆ ಶ್ರೀಮಜ್ಜಯತೀರ್ಥರು ಟೀಕಾವನ್ನು ಬರೆದದ್ದಲ್ಲದೆ ಸ್ವತಂತ್ರವಾಗಿ ‘‘ಪ್ರಮಾಣಪದ್ಧತಿ’’ ಎಂಬ ಗ್ರಂಥವನ್ನು ರಚಿಸಿದರು. ಇದಕ್ಕೆ ಅನೇಕ ಮಹನೀಯರು ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶ್ರೀರಾಘವೇಂದ್ರಗುರುಸಾರ್ವಭೌಮರ ವ್ಯಾಖ್ಯಾನವು ತನ್ನದೇ ಆದ ವೈಶಿಷ್ಟ್ಯಗಳಿಂದೊಡಗೂಡಿದೆ.

ಶ್ರೀಗುರುರಾಜರ ಈ ವ್ಯಾಖ್ಯಾನವು ಟೀಕಾ ಗಾಂಭೀರ್ಯವನ್ನು ಹೊರಹಾಕುವುದರಲ್ಲಿ ಅತ್ಯಂತ ಸಮರ್ಥವಾಗಿದ್ದು ಮಂದರಿಗೂ ಅರ್ಥವಾಗುವಂತೆ ವ್ಯಾಖ್ಯಾನಿಸುವ



ಶೈಲಿ ಶ್ರೀಗುರುರಾಜರಿಗೆ ಕರಗತವಾಗಿದೆ. ಅವರ ವ್ಯಾಖ್ಯಾನ ವೈಭವವನ್ನು ಎಂತು ವರ್ಣಿಸುವುದು ?

ವ್ಯಾಖ್ಯೇಯ ಗ್ರಂಥದ ಸರಳವಾದ ಅರ್ಥವನ್ನು ಬಿಡಿಸುವುದು, ವ್ಯಾಕರಣದ ಪರಿಷ್ಕಾರಗಳಿಂದ ಮೂಲಗ್ರಂಥದ ಸಾಧುತ್ವವನ್ನು ಸಮರ್ಥಿಸುವುದು, ಪೌನರುಕ್ತ್ಯಾದಿಗಳನ್ನು ಆಶಂಕಿಸಿ ಪರಿಹರಿಸುವುದು, ಪೂರ್ವೋತ್ತರಗಳ ವಾಕ್ಯ ಸಂದರ್ಭಗಳನ್ನು ವಿವರಿಸಿ ಅನ್ವಯಿಸುವ ಸುಂದರ ಕ್ರಮ, ಮೂಲಗ್ರಂಥಕ್ಕೆ ಪೋಷಕವಾಗಿ ವ್ಯಾಸತ್ರಯಗಳಲ್ಲಿ ಬರುವ ಸಿದ್ಧಾಂತ ರಹಸ್ಯಗಳನ್ನುಲ್ಲೇಖಿಸಿ ಪುಷ್ಟೀಕರಿಸುವ ರೀತಿ ಮತ್ತು ಅಲ್ಲಲ್ಲಿ ಬರುವ ಸಿದ್ಧಾಂತ ಪ್ರಮೇಯಗಳನ್ನು ಸಾಧಿಸಿ ಹೆಚ್ಚಿನ ವಿವರಗಳಿಗೆ ಬೇರೆ ಬೇರೆ ಗ್ರಂಥಗಳ ನಾಮಪ್ರಘಟ್ಟಕಗಳ ಉಲ್ಲೇಖ ಇತ್ಯಾದಿ ವ್ಯಾಖ್ಯಾನ ತಂತ್ರಗಳನ್ನು ಬಳಸಿ ಪ್ರಮಾಣಪದ್ಧತಿಯನ್ನು ವ್ಯಾಖ್ಯಾನಿಸುವ ಶ್ರೀಮನ್ಮಂತ್ರಾಲಯ ಪ್ರಭುಗಳ ಈ ವ್ಯಾಖ್ಯಾನ ಅನ್ಯೂನಾನತಿ ಪುಸ್ತಕವಾದ ದಿಟ್ಟ ಹಾಗೂ ಅದ್ಭುತ ಚಾಕಚಕ್ಯತೆಯಿಂದ ಕೂಡಿದೆ ಎಂಬುದು ಅವರ ವ್ಯಾಖ್ಯಾನ ದರ್ಶನದಿಂದ ವೇದ್ಯವಾಗುತ್ತದೆ.

ಇದಕ್ಕನುಗುಣವಾಗಿ ಈ ವ್ಯಾಖ್ಯಾನದ ಕೆಲವೊಂದು ವೈಶಿಷ್ಟ್ಯಗಳನ್ನು ಮಾತ್ರ ನಿರೂಪಿಸಲು ಪ್ರಯತ್ನಿಸುತ್ತಿದ್ದೇನೆ.

೧) ‘‘ಯೋ ಧರ್ಮೋ ಲಕ್ಷ್ಯೇ ವ್ಯಾಪ್ತ್ಯಾ ವರ್ತತೇ ನ ವರ್ತತೇ ಚಾನ್ಯತ್ರ ಸಃ ಧರ್ಮೋ ಲಕ್ಷಣಂ’’ ಎಂದು ಪ್ರಮಾಣಪದ್ಧತಿಯ ವಾಕ್ಯದಿಂದ ‘‘ಯಾವ ಧರ್ಮವು ಸಕಲ ಲಕ್ಷ್ಯಗಳಲ್ಲಿ ಇರುವುದೋ ಮತ್ತು ಅಲಕ್ಷ್ಯದಲ್ಲಿರುವುದಿಲ್ಲವೋ ಅಂಥಹದ್ದು ಲಕ್ಷಣದ ಲಕ್ಷಣ’’ ಎಂದು ಹೇಳಿದರು. ಇದಕ್ಕೆ ಶ್ರೀಗುರುರಾಜರ ವ್ಯಾಖ್ಯಾನ ಹೀಗಿದೆ -

ಒಂದೇ ಧರ್ಮವು ಎಲ್ಲ ಕಡೆಗೆ ಇರುವುದಿಲ್ಲ. ಏಕೆಂದರೆ,

**“ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥಾಃ ನಿಖಿಲಾಃ ಅಮೀ**
**ನರತ್ವಾದಿಕಮಪ್ಯೇತೇ ತತ್ತದ್ಧರ್ಮತಯೇಷ್ಯತೇ !**
**ನ ಸರ್ವಧರ್ಮೋ ಏಕೋಽಸ್ತಿ ಸಮುದಾಯಸ್ತು ಭಿನ್ನಗಃ”**

ಎಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಒಂದೇ ಧರ್ಮ ಎಲ್ಲ ಕಡೆಗೆ ಇರುವುದಿಲ್ಲ. ಹೀಗಿರುವಾಗ ಸಕಲ ಲಕ್ಷ್ಯಗಳಲ್ಲಿ ಇರುವುದು ಹೇಗೆ ಕೂಡುವುದೆಂದರೆ ‘‘ಯೋ ದರ್ಮಃ ಎಂಬುದಕ್ಕೆ ಯತ್ಸದೃಶೋ ಧರ್ಮಃ’’ ಎಂದು ಅರ್ಥೈಸಿರುವರು. ಉದಾ : ಸಾಸ್ನಾದಿಮತ್ವವೆಂಬ ಧರ್ಮವು ಎಲ್ಲ ಗೋವುಗಳಲ್ಲಿದ್ದರೂ ಒಂದು ಗೋವಿನಲ್ಲಿರುವ ಸಾಸ್ನಾದಿಮತ್ವಸದೃಶವಾದ ಸಾಸ್ನಾದಿಮತ್ವವು ಇನ್ನೊಂದು ಗೋವಿನಲ್ಲಿ ಇದೆ ಎಂಬುದು ಸಿದ್ಧಾಂತ ರಹಸ್ಯ.

೨) ಶ್ರೀಜಯತೀರ್ಥರು ''ಯಥಾರ್ಥಂ ಪ್ರಮಾಣಂ'' ಎಂದು ಹೇಳಿ ''ಯಥಾವಸ್ಥಿತಜ್ಞೇಯವಿಷಯೀಕಾರಿತ್ವಂ ಪ್ರಮಾಣಸಾಮಾನ್ಯ ಲಕ್ಷಣಂ'' ಎಂದು ಹೇಳಿದ್ದಾರೆ. ಈ ಅರ್ಥವು ಹೇಗೆ ಬರುವುದು ? ಎಂದಲ್ಲಿ ಶ್ರೀಗುರುರಾಜರು ಅದರ ವಿವರಣೆಯನ್ನು ಚೆನ್ನಾಗಿ ಕೊಟ್ಟಿದ್ದಾರೆ. ''ಯಥಾ'' ಶಬ್ದಕ್ಕೆ ಅನತಿಕ್ರಮವೆಂದು ಅರ್ಥ, ಅದರಲ್ಲಿ ಅನತಿ ಎಂಬ ಅಂಶದಿಂದ ''ಯಥಾವಸ್ಥಿತಮೇವ'' ಎಂಬುದು ಲಬ್ಧವಾಗಿದೆ. ಅರ್ಥಪದಾರ್ಥದಿಂದ ಜ್ಞೇಯ ಎಂಬುದು ಲಬ್ಧವಾಗಿದೆ. ''ಕ್ರಮಣ'' ಎಂಬ ಅಂಶದಿಂದ ''ವಿಷಯೀಕಾರಿತ್ವ''ವೆಂಬ ಅರ್ಥವು ಲಬ್ಧವಾಗಿದೆ ಎಂಬುದಾಗಿ ಹೇಳಿ ಈ ಮೇಲೆ ನಿರೂಪಿಸಿದ ಪ್ರಮಾಣ ಸಾಮಾನ್ಯ ಲಕ್ಷಣವು ''ಯಥಾರ್ಥಂ'' ಎಂಬ ಪದದಿಂದ ಬಂದಿದೆ ಎಂದು ತೋರಿಸಿರುವುದು ಅತ್ಯಂತ ಗಮನಾರ್ಹ ಅಂಶ.

೩) ''ಸಾಕ್ಷಾತ್ ಯಥಾವಸ್ಥಿತಜ್ಞೇಯ ವಿಷಯೀಕಾರಿತ್ವ''ವು ಕೇವಲಪ್ರಮಾಣದಲ್ಲಿ ಇದ್ದರೆ ಅನುಪ್ರಮಾಣದಲ್ಲಿ ಇರುವುದಿಲ್ಲ. ''ಯಥಾವಸ್ಥಿತ ಜ್ಞೇಯವಿಷಯೀಕಾರಿಸಾಧನತ್ವವು'' ಅನುಪ್ರಮಾಣದಲ್ಲಿದ್ದರೂ ಕೇವಲಪ್ರಮಾಣದಲ್ಲಿ ಇರುವುದಿಲ್ಲವಾದ್ದರಿಂದ ಯಥಾರ್ಥಜ್ಞಾನ ಮತ್ತು ಕರಣಗಳಿಗೆ ಅನನುಗಮದೋಷವು ಅಪರಿಹಾರ್ಯವೆಂದರೆ ಶ್ರೀಗುರುರಾಜರು ಅದನ್ನು ಹೀಗೆ ನಿವಾರಿಸುತ್ತಾರೆ.

ಯಥಾರ್ಥಜ್ಞಾನವು ಯಾವ ರೀತಿ ಸಾಕ್ಷಾತ್ ಅನ್ಯ ಅವ್ಯವಧಾನವಾಗಿ ಅರ್ಥ ವಿಷಯಕವೋ ಅದರಂತೆಯೇ ತತ್ಸಾಧನಗಳಾದ ಇಂದ್ರಿಯ - ಲಿಂಗ - ಶಬ್ದಪ್ರಮಾಣಗಳು ಅನ್ಯ ಅವ್ಯವಧಾನದಿಂದ ಸಾಕ್ಷಾತ್ತಾಗಿ ಅರ್ಥವಿಷಯಕಗಳು ಆಗಿವೆ. ಅರ್ಥವಿಷಯೀಕಾರಿತ್ವವು ಕೇವಲಪ್ರಮಾಣದಲ್ಲಿ ತತ್ಸಾಧನಗಳಾದ ಅನುಪ್ರಮಾಣಗಳಲ್ಲಿಯೂ ಏಕರೂಪವಾಗಿದೆ. ಜ್ಞೇಯತ್ವಾಂಶದಲ್ಲಿ ಅನ್ಯಾನಪೇಕ್ಷತ್ವ - ಅನ್ಯಾಪೇಕ್ಷತ್ವವೆಂಬ ಭೇದಮಾತ್ರದಿಂದ ಸಾಕ್ಷಾತ್ವ - ತತ್ಸಾಧನತ್ವ ವ್ಯವಹಾರವು ಕೂಡುತ್ತದೆ. ಇದನ್ನು ''ಜ್ಞಾನಾರ್ಥೇ ಜ್ಞೇಯತಾ ಮುಖ್ಯಾ'' ಇತ್ಯಾದಿ ಅನುವ್ಯಾಖ್ಯಾನದ ವಿವರಣೆಯನ್ನು ಕೊಡುವ ಸಂದರ್ಭದಲ್ಲಿ ಸುಧಾಕಾರರೂ ಸಹ ಮೇಲಿನಂತೆ ಆಶಂಕಿಸಿ ಪರಿಹಾರವನ್ನು ಕೊಟ್ಟಿದ್ದಾರೆ ಎಂಬ ವಿಚಾರವನ್ನು ಬಹುಸುಂದರವಾಗಿ ವಿವರಿಸಿದ್ದಾರೆ.

೪) ಪ್ರತ್ಯಕ್ಷದ ನಂತರ ಅನುಮಾನ ನಿರೂಪಣೆ, ತದನಂತರ ಶಬ್ದದ ನಿರೂಪಣೆ. ಈ ಕ್ರಮವೇ ಏಕೆ? ವ್ಯತ್ಯಾಸ ಮಾಡಬಹುದಲ್ಲವೆ ಎಂಬುದಕ್ಕೆ ಶ್ರೀರಾಯರ ವಿವರಣೆ ಹೀಗಿದೆ-

**"ಸರ್ವತಃ ಪ್ರಾಬಲ್ಯಾತ್ ಪ್ರತ್ಯಕ್ಷಸ್ಯ ಪೂರ್ವಂ ನಿರ್ದೇಶಃ ।**
**ತದುಪಜೀವಿನೋ ಅನುಮಾನಸ್ಯ ಪಶ್ಚಾನ್ನಿರ್ದೇಶಃ ॥**



**ಅವಶಿಷ್ಟಸ್ಯ ಆಗಮಸ್ಯ ಅಂತೇ ನಿರ್ದೇಶಃ ।**
**ಕ್ವಚಿದನುಮಾನಸ್ಯಾಗಮ ಮೂಲತ್ವೇಪಿ ಪ್ರಾಯೇಣ ॥**
**ಪ್ರತ್ಯಕ್ಷೋಪಜೀವಿತ್ವಾದಂತತಃ ಪ್ರತ್ಯಕ್ಷಮೂಲತ್ವಾಚ್ಚ ।**
**ಪ್ರತ್ಯಕ್ಷಾನಂತರಮನುಮಾನಸ್ಯ ನಿರ್ದೇಶೋ ಯುಕ್ತ ಏವೇತಿ ಜ್ಞೇಯಮ್ ॥"**

ಎಂಬುದಾಗಿದೆ.

೫) ತಮ್ಮ ವ್ಯಾಖ್ಯಾನದ ಕೊನೆಯಲ್ಲಿ ಶ್ರೀಮಂತ್ರಾಲಯ ಪ್ರಭುಗಳು ಕೊಟ್ಟಿರುವ ಪ್ರಮಾಣಪದ್ಧತಿಯ ಅಧ್ಯಯನಾದಿಗಳಿಂದ ಆಗುವ ಲಾಭದ ಬಹು ರಮಣೀಯವಾಗಿರುವ ವಿವರಣೆ ಈ ಕೆಳಗಿನಂತಿದೆ.

ಅರ್ಥದಿಂದ ಅವ್ಯಭಿಚರಿತವಾದ, ಚೆನ್ನಾಗಿ ಪರೀಕ್ಷಿತವಾದ, ಕೇವಲ ಹಾಗೂ ಅನುಪ್ರಮಾಣಗಳಿಂದ ನಿತ್ಯಾನಿತ್ಯ ವಸ್ತುಗಳ ವಿವೇಕ, ಸಾರಾಸರ ಜ್ಞಾನ, ಪರಮ ಪುರುಷಾರ್ಥತ್ವ - ತದಭಾವ ಇವುಗಳ ನಿಶ್ಚಯವಾಗಿ ಅನಿತ್ಯ ಹಾಗೂ ಅಸಾರವಾದ ಪದಾರ್ಥಗಳಲ್ಲಿ ವೈರಾಗ್ಯವನ್ನು ಹೊಂದಿ ಶಮ (ಭಗವನ್ನಿಷ್ಠತಾ ಬುದ್ಧಿಃ) ದಮ (ಇಂದ್ರಿಯನಿಗ್ರಹ) ಶಾಂತ-ಸಹನಶೀಲತೆ ಈ ಗುಣಗಳೆಲ್ಲವನ್ನು ಅಳವಡಿಸಿಕೊಂಡು ಪರಮಾತ್ಮೈಕಶರಣರಾಗಿ ಭಗವಂತನ ವಿಷಯಕವಾದ, ಗುರೂಪದೇಶಜನ್ಯವಾದ ವಾಕ್ಯಾರ್ಥ ಜ್ಞಾನರೂಪವಾದ ಶ್ರವಣವನ್ನು ಮಾಡಿ, ಗುರೂಪದೇಶದಿಂದ ತಿಳಿದ ವಿಷಯಗಳಲ್ಲಿ ಯುಕ್ತಿಚಿಂತನೆಯನ್ನು ಮಾಡಿ ಶ್ರವಣ-ಮನನಗಳಿಂದ ಉತ್ಪನ್ನವಾದ ಯಾವ ತತ್ವನಿಶ್ಚಯವುಂಟೋ ಅದರಿಂದ ಹುಟ್ಟಿದ ಸಂಸ್ಕಾರ ಪರಿಣಾಮರೂಪವಾದ ಭಗವಂತನ ವಿಗ್ರಹವನ್ನು ನಿರಂತರ ನೋಡುವಿಕೆ ಎಂಬ ನಿಧಿಧ್ಯಾಸನವನ್ನು ಮಾಡಿ, ಸ್ನೇಹವಿಶೇಷರೂಪವಾದ ಆದರ ಹಾಗೂ ಅವಿಚ್ಛನ್ನತಾರೂಪವಾದ ನೈರಂತರ್ಯಗಳಿಂದ ಎಲ್ಲ ಕಾಲಗಳಲ್ಲಿಯೂ ಭಗವದುಪಾಸನೆಯನ್ನು ಮಾಡಿ ಭಗವತ್ಸಾಕ್ಷಾತ್ಕಾರವನ್ನು ಹೊಂದಿದ ನಂತರದಲ್ಲಿ ಅತ್ಯುದ್ರಿಕ್ತವಾದ ಭಕ್ತಿಯನ್ನು ಮಾಡಿ ಭಗವಂತನ ಅತ್ಯರ್ಥಪ್ರಸಾದವನ್ನು ಹೊಂದಿದಂಥವರಾಗಿ ಸಕಲಾನಿಷ್ಟನಿವೃತ್ತಿಪೂರ್ವಕ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಹೊಂದುವರು ಎಂಬುದಾಗಿ ಪ್ರಮಾಣಗಳ ಉತ್ಕೃಷ್ಟಜ್ಞಾನದಿಂದ ಆಗುವ ಪರಂಪರಾರೂಪವಾದ ಮೋಕ್ಷಪ್ರಯೋಜನವನ್ನು ವಿವರಿಸಿದ್ದಾರೆ. ಹೀಗೆ ಇರುವ ಗುರುಸಾರ್ವಭೌಮರ ವ್ಯಾಖ್ಯಾನ ವೈಭವವನ್ನು ವಿವರಿಸಲು ಅಶಕ್ತನಾದ, ಮಂದನಾದ ನನ್ನಿಂದ ಸಾಧ್ಯವಿಲ್ಲವೆಂಬುದನ್ನರಿತು ಸುಜನರು ನನ್ನ ಮೇಲೆ ಕೃಪೆಮಾಡಬೇಕೆಂದು ಪ್ರಾರ್ಥಿಸುವೆ.

❑❑

ಲೇಖನಾಂಕ

# ಋಗ್ವೇದಕಾಲೀನ ದೇವತೆಗಳು

## (ಆಧುನಿಕ ವಿದ್ವಾಂಸರ ದೃಷ್ಟಿಯಲ್ಲಿ)

### ಭಾಗ – ೫ : ಉಷಸ್‌ದೇವತೆ

■ ಡಾ. ಕೊರಟಗೆರೆ ವಾಸುದೇವಾಚಾರ್ಯ

ನಂ. ೧೪, ಶ್ರೀನಿವಾಸ ಕೃಪ, ದೇವನೂರು ರಸ್ತೆ, ತುಮಕೂರು - ೫೭೨ ೧೦೨

ಹಿಂದಿನ ಸಂಚಿಕೆಯಿಂದ.......

**ಮಂತ್ರ ೨ : 'ಅಸ್ತುರು ಚಿತ್ರಾ.......................... ಪಾವಕಾಃ ।'**

ಅರ್ಥ : ಯಾಗಗಳಲ್ಲಿ ಯೂಪಸ್ತಂಭಗಳನ್ನು ನೆಟ್ಟಿರುತ್ತಾರೆ. ಅದರಂತೆ ಪ್ರಕಾಶಯುತರೂ, ಶೋಧನೆ ಮಾಡುವವರೂ ಆದ ಉಷಸ್ಸುಗಳು ಕತ್ತಲೆಯ ಆವಕರದ ಎರಡು ಬಾಗಿಲನ್ನು ತೆರೆದಿದ್ದಾರೆ.

**ಮಂತ್ರ ೩ : 'ಉಛಂತೀದ್ಯ............................. ವಿಮಧ್ಯೇ ।'**

ಪ್ರಕಾಶಿಸುತ್ತಾ ಬರುವ ಔದಾರ್ಯಪೂರ್ಣ ಉಷಸ್ಸುಗಳು ದ್ರವ್ಯದಾನದ ಉದ್ದೇಶದಿಂದ ಉದಾರಿಗಳನ್ನು ಪ್ರೇರಿಸಲಿ. ಜಿಪುಣರು ಕತ್ತಲೆಯ ಮಧ್ಯೆ ಎಚ್ಚರ-ಗೊಳ್ಳದೆ ಅಪ್ರಸಿದ್ಧಿಯಲ್ಲಿಯೇ ನಿದ್ರಿಸಲಿ.

(ಸಾಯಣಭಾಷ್ಯ : 'ರಾಧ' ಶಬ್ದಕ್ಕೆ ಹಣ ಅಥವಾ ದ್ರವ್ಯ ಎಂದರ್ಥ. ಆದರೆ ಇಲ್ಲಿ 'ರಾಧೋದೇಯ' ಎಂದರೆ 'ಸೋಮಾದಿ ಧನ ದಾನಾಯ' (ಸೋಮರಸ ರೂಪ ಹಣವನ್ನು ದಾನಮಾಡುವಂತೆ ಪ್ರೇರಿಸಲಿ ಎಂದರ್ಥ) ('ರಾಧೋ ವಿಶ್ವಾಯ ಸೌಭಗಮ್'- ಋಗ್ವೇದ).

(ಸದ್ದದಾದದಸುಶಂಸನ ನಿಂದಾಕಾರಿಸೂಕ್ತಗತಮರ್ಥಮುಪೇತ್ಯ = ದಾನ ಮಾಡುವವರನ್ನು ಹೊಗಳುವ, ದಾನಮಾಡದವರನ್ನು ತೆಗಳುವ 'ದಾನಸೂಕ್ತ'ದ ಅರ್ಥವನ್ನು ಆಚಾರ್ಯರು ತಿಳಿಸಿದರು - ಸುಮಧ್ವವಿಜಯ, ಸರ್ಗ - ೬)

**ಮಂತ್ರ ೪ : 'ಕುವಿತ್ಸದೇವೀಃ................. ರೇವತೀ ರೇವದೂಷ ॥'**

ಎಲೈ ದಿವ್ಯ ಉಷಸ್ಸುಗಳೇ ಈ ಹಳೆಯ ಮಾರ್ಗವೇ ನಿಮಗೆ ಹೊಸದಾಗಿವೆ. ನೀವು ಧನವತಿಯರು. ನೀವು ನವಗ್ವ, ಅಂಗಿರ ಮತ್ತು ಸಪ್ತಮುಖದ ದಶಗ್ವ



ಎಂಬುವವರಲ್ಲಿ ಐಶ್ವರ್ಯ ಲಾಭಾನುಗುಣವಾಗಿ ಪ್ರಕಾಶಗೊಳಿಸಿದಿರಿ. (ಇದರ ಒಟ್ಟು ತಾತ್ಪರ್ಯ - ಉಷಸ್ಸು ಹಿಂದಿನಂತೆ ಈಗಲೂ ಐಶ್ವರ್ಯವನ್ನು ತರಬಲ್ಲಳು ಎಂದು).

(ಟಿಪ್ಪಣಿ : ನವಗ್ವ, ಅಂಗಿರಸ ಹಾಗೂ ದಶಗ್ವ - ಇವರು ಋಷಿಸಮೂಹಗಳು. ಇಂದ್ರನು ಪಣಿಗಳು, ವೃತ್ರ ಮುಂತಾದ ರಾಕ್ಷಸರೊಡನೆ ಹೋರಾಡುವಾಗ ಇವರು ಅವನಿಗೆ ಸಹಾಯಕರಾಗಿದ್ದರಂತೆ).

'ಸಪ್ತಾಸ್ಯ' ಎಂದರೆ ಇದು ಸಾಮಾನ್ಯವಾಗಿ ಅಗ್ನಿಯಲ್ಲಿ ಪ್ರಸಿದ್ಧವಾದ ನಾಮ.

(ಋಗ್ವೇದ - ಅಗ್ನಿಧ್ಯಾನದಲ್ಲಿ 'ಚತ್ವಾರಿ ಶೃಂಗಾ' ಮಂತ್ರದಲ್ಲಿ 'ಸಪ್ತಹಸ್ತಃ' 'ಸಪ್ತಜಿಹ್ವಃ' 'ಸಪ್ತಾಸ್ಯೋ ಅಸ್ಯ' ಎಂದಿದೆ. ಆದರೆ ಇಲ್ಲಿ ಸಪ್ತಾಸ್ಯ ಎಂಬುದನ್ನು ಮ್ಯಾಗ್ಡೊನಲ್ ಎಂಬುವರು 'ಬೃಹಸ್ಪತಿ' ಎಂದು ತಿಳಿಸಿದ್ದಾರೆ).

(ಮುಂದುವರೆಯುವುದು)

## ನ್ಯಾಯಸುಧೆಯ ಸೀಮೋಲ್ಲಂಘನ

ಶ್ರೀಮಠದ ಪ್ರತಿಷ್ಠಿತ ಪ್ರಕಾಶನಗಳಲ್ಲೊಂದಾದ 'ಶ್ರೀಮನ್ನ್ಯಾಯಸುಧಾಗ್ರಂಥ' ವನ್ನು ೨೫ ಟಿಪ್ಪಣಿಗಳೊಡನೆ ಸಂಪುಟ ೧೧ ರಿಂದ ೧೫ ರವರೆಗೆ ಮಂತ್ರಾಲಯ ಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಶ್ರೀಸುಯತೀಂದ್ರ ತೀರ್ಥಶ್ರೀಪಾದಂಗಳವರು ತಮ್ಮ ಚಾತುರ್ಮಾಸ್ಯದ ಸೀಮೋಲ್ಲಂಘನ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು. ಈ ಹಿಂದೆ ಶ್ರೀಮಠದಿಂದ ಸಂಪುಟ ೧ ರಿಂದ ಸಂಪುಟ ೧೦ ರವರೆಗೆ ಬಿಡುಗಡೆಗೊಳಿಸಲಾಗಿತ್ತು. ಇದೇ ಸಂದರ್ಭದಲ್ಲಿ ಮಾತನಾಡಿದ ಶ್ರೀಗುರುಸಾರ್ವಭೌಮ ವಿದ್ಯಾಪೀಠದ ಅಧ್ಯಾಪಕರಾದ ವಿದ್ವಾನ್. ಹಯವದನ ಪುರಾಣಿಕ್‌ರವರು ''ಇಂದು ಶ್ರೀಪಾದಂಗಳವರು ಸೀಮೋಲ್ಲಂಘನ ಮಾಡುವುದರ ಜೊತೆಗೆ ಶ್ರೀಮನ್ನ್ಯಾಯಸುಧಾ ಗ್ರಂಥದ ಸೀಮೋಲ್ಲಂಘನವನ್ನೂ ಮಾಡಿಸಿದ್ದಾರೆ. ಅಂದರೆ ಇದರ ಅಧ್ಯಯನ ಮತ್ತು ಅಧ್ಯಾಪನ ಮಾಡಬಯಸುವವರಿಗೆ ಸುಲಭವಾಗಿ ಮತ್ತು ಉಚಿತವಾಗಿ ಉಪಲಬ್ಧ- ವಾಗುವ ವ್ಯವಸ್ಥೆ ಕಲ್ಪಿಸಿದ್ದಾರೆ'' ಎಂದು ನುಡಿದರು. ''ಇದರ ಉಪಯೋಗವನ್ನು ವಿದ್ಯಾರ್ಥಿಗಳು ಹಾಗೂ ಸುಧಾ ಅಭ್ಯಸಿಸುವವರು ಪಡೆದುಕೊಳ್ಳಬಹುದು'' ಎಂದು ಶ್ರೀಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳಾದ ರಾಜಾ.ಎಸ್.ರಾಜಗೋಪಾಲಾಚಾರ್ಯರು ತಿಳಿಸಿದರು.

**ಲೇಖನಾಂಕ**

# ತಮಿಳುನಾಡಿನ ನವಗ್ರಹ ದೇವಾಲಯಗಳು - ೭

■ ಸಂಗ್ರಹ : **ಸೂರೀಂದ್ರ**
ಬೆಂಗಳೂರು

**ಗ್ರ**ಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ''ತಮಿಳುನಾಡಿನ ನವಗ್ರಹ ದೇವಸ್ಥಾನಗಳು'' ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳ ಬಗ್ಗೆ, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ - ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448.**

## 7. ಕೇತು

ಕೇತು ದೇವಾಲಯವು ಕುಂಭಕೋಣದಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿದ್ದು, ಧರ್ಮಕುಲಂ ಮಾರ್ಗವಾಗಿ ಮೈಲಾದುತಾವರೈ ಮುಖಾಂತರ ಹೋಗಬಹುದು. ಈ ಊರನ್ನು ಪೆರಂಪಳ್ಳಂ ಎಂದು ಕರೆಯುವುದು ವಾಡಿಕೆ. ಈ ಊರಿಗೆ



ಒಲುಂಪುರಂ ಎಂದು ಮತ್ತೊಂದು ಹೆಸರಿದೆ. ಕೇತು ದೇವಾಲಯವು ಪೂರ್ವ ದಿಕ್ಕಿನಲ್ಲಿದ್ದು, ನಾಲ್ಕು ಎತ್ತರವಾದ ಗೋಡೆಗಳನ್ನು ಸುತ್ತಲೂ ಹೊಂದಿದೆ. ನಾಗೇಶ್ವರ ಎಂಬ ಪವಿತ್ರ ಕೊಳವೂ ಉಂಟು. ದೇವಸ್ಥಾನದ ಪಶ್ಚಿಮ ದ್ವಾರದಲ್ಲಿ ವಿನಾಯಕನ ವಿಗ್ರಹ ಹಾಗೂ ಲಕ್ಷ್ಮೀನಾರಾಯಣ ವಿಗ್ರಹವನ್ನು ಕಾಣಬಹುದು. ವಿನಾಯಕ ದೇವಸ್ಥಾನದ ಉತ್ತರ ಪೂರ್ವದಲ್ಲಿ ಪಶ್ಚಿಮಕ್ಕೆ ಮುಖ ಮಾಡಿ ಕೇತು ದೇವಾಲಯವಿದೆ. ಆತನ ತಲೆಯು ಐದು ಹೆಡೆಯ ಸರ್ಪಾಕಾರದಲ್ಲಿದ್ದು, ಕೈಗಳು ಪೂಜೆ ಮಾಡುತ್ತಿರುವ ಭಂಗಿಯಲ್ಲಿದೆ. ಇಲ್ಲಿ ನಂದಿಯನ್ನು ಪೂಜಿಸಿದ ಬಳಿಕ ನಾಗಾನಂದಸ್ವಾಮಿಯ ಬೆಳ್ಳಿಯ ವಿಗ್ರಹವನ್ನು ಪೂಜಿಸುವುದು ವಾಡಿಕೆ. ಈ ಜಾಗದಲ್ಲಿ ಬುಧನು ಪದವಿಗೆ ಬರಲು ಪ್ರಾರ್ಥಿಸಿದನೆಂದು ಸ್ಥಳಪುರಾಣ ಹೇಳುತ್ತದೆ.

### ಕೇತುದೋಷ ಪರಿಹಾರ

ಕೇತುವಿನ ಅವಧಿಯು (ದೆಶೆಯು) ಏಳು ವರ್ಷಗಳು. ಕೇತುದೋಷ ಪರಿಹಾರಕ್ಕೆ ವೈಢೂರ್ಯದ ಹರಳನ್ನು ದಾನ ಮಾಡಬೇಕು ಮತ್ತು ಕೇತುಗ್ರಹಕ್ಕೆ ಪೂಜೆಯನ್ನು ಸಲ್ಲಿಸಬೇಕು. ಈ ಕ್ಷೇತ್ರಕ್ಕೆ ಭೇಟಿ ನೀಡಿ ಕೇತುವನ್ನು ಸಂದರ್ಶಿಸಿ ಪೂಜೆಗೈದಲ್ಲಿ ಕೇತುದೋಷ ಪರಿಹಾರವಾಗುತ್ತದೆ.

❑❑

**ಮಂತ್ರಾಲಯದಲ್ಲಿ ಶ್ರೀಮನ್ನ್ಯಾಯಸುಧಾ ಪಾಠದ ವ್ಯವಸ್ಥೆ**

ವಿದ್ಯಾಮಠವೆಂದು ಖ್ಯಾತವಾದ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರ ಮತ್ತು ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ ಆದೇಶದ ಮೇರೆಗೆ ಮಂತ್ರಾಲಯ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳಿಗೆ ವಿದ್ವಾನ್. ಹಯವದನಪುರಾಣಿಕ್, ವಿದ್ವಾನ್. ಪುರಾಣಿಕ ಸುಬ್ರಹ್ಮಣ್ಯಾಚಾರ್ಯ, ವಿದ್ವಾನ್ ಕನಕಾಚಲ ಒಡೆಯರ್‌ರವರಿಂದ ಶ್ರೀಮನ್ನ್ಯಾಯಸುಧಾ ಪಾಠದ ವ್ಯವಸ್ಥೆಯನ್ನು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ- ಯನ್ನು ಮಂತ್ರಾಲಯದಲ್ಲಿ ಮಾಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ವಿದ್ಯಾಪೀಠದ ಪ್ರಾಂಶುಪಾಲರನ್ನು ಸಂಪರ್ಕಿಸಬಹುದಾಗಿದೆ.

**ಪ್ರಾಂಶುಪಾಲರು**
ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ
ದೂರವಾಣಿ : ೦೮೫೧೨-೨೭೯೪೯೬

ಲೇಖನಾಂಕ

# ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಃಷಷ್ಠಿಕಲಾವಿದ್ಯೆಗಳು

■ ವಿದ್ವಾನ್. ಕೆ.ಎಲ್. ಪುಷ್ಕರಾಚಾರ್ಯ
ಕ್ಯಾತಸಂದ್ರ, ಹಳೇ ಪೋಸ್ಟ್ ಆಫೀಸ್ ರಸ್ತೆ, ತುಮಕೂರು - ೫೭೨ ೧೦೪

**ಆಷಾಢಮಾಸದ ಸಂಚಿಕೆಯಿಂದ.......**

## ಯೋಗಸಿದ್ಧಿಗಳು ೬೪ ಕಲಾವಿದ್ಯೆಗಳ ವಿವರಣೆ

ಋಗ್-ಯಜುಃಸಾಮಾಥರ್ವವೇದಗಳು ಹಾಗೂ ಅವುಗಳಿಗೆ ಷಡಂಗಗಳಾದ ಶಿಕ್ಷಾ-ವ್ಯಾಕರಣ-ಛಂದಸ್ಸು-ನಿರುಕ್ತ-ಜ್ಯೋತಿಷ-ಕಲ್ಪಗಳ ಯಥಾಮತಿ ಅಧ್ಯಯನವನ್ನು ಮಾಡಬೇಕು. ತರ್ಕ-ಮೀಮಾಂಸ-ಧರ್ಮಶಾಸ್ತ್ರಗಳ ಸಹಾಯ ಪಡೆದು ಸದಾಚಾರ ಕರ್ಮಾಚರಣೆಯಿಂದ ವೇದಾಂತವೆನಿಸುವ ಪಕ್ವಜ್ಞಾನವನ್ನು ಸ್ಥಿರವಾಗಿ ಸಂಪಾದಿಸಿದರೆ ಯೋಗಮಾರ್ಗಕ್ಕೆ ನಾಂದಿಯಾದಂತೆ ಎಂದು ಶಾಸ್ತ್ರವು ತಿಳಿಸುತ್ತದೆ. ಇವುಗಳ ಅಧ್ಯಯನವಿಲ್ಲದೆ ಈ ಮಾರ್ಗವು ದುಸ್ತರವೆಂದೂ ತಿಳಿಸುತ್ತದೆ. ನಂತರ ಆಸನ - ಪ್ರಾಣಾಯಾಮ - ಧ್ಯಾನ - ಧಾರಣ - ಪ್ರತ್ಯಾಹಾರ ಸಮಾಧಿಗಳೆಂಬ ಕ್ರಮದಿಂದ ಹಂತ ಹಂತವಾಗಿ ಲಬ್ಧವಾಗುವ ಸಿದ್ಧಿಗಳು ಈ ಕೆಳಕಂಡಂತಿವೆ. ಈ ಯೋಗಮಾರ್ಗಸಿದ್ಧಿ ಇಲ್ಲದವನಿಗೆ ಮೇಲಿನ ಲೋಕಗಳಲ್ಲಿ ಕೊನೆಯ ಮೂರು ಲೋಕಗಳ ಪ್ರಾಪ್ತಿ ಇಲ್ಲವೆಂದು ಶ್ರೀಮದಾಚಾರ್ಯರು ತಿಳಿಸಿದ್ದಾರೆ.

೧) **ರಸೋಲ್ಲಾಸಸಿದ್ಧಿ :** ಶ್ರೀವಾಯುದೇವರ ಅನುಗ್ರಹಕ್ಕೆ ಪಾತ್ರನಾಗಿ ಸಗರ್ಭ ರೀತಿಯ ಪ್ರಾಣಾಯಾಮ ಸಿದ್ಧಿ ಹೊಂದಿದ ಯೋಗಿಯು, ತನ್ನ ಶಿರದ ಮೇಲೆ ಚಂದ್ರನು ಅಮೃತವನ್ನು ಸ್ರವಿಸುವಂತೆ, ತತ್ಸದೃಶ ಆನಂದವನ್ನು ಏಕಾಂತದಲ್ಲಿ ಅನುಭವಿಸುವಿಕೆಗೆ ಈ ಹೆಸರು.

೨) **ಮಿಥುನೋತ್ಪತ್ತಿಸಿದ್ಧಿ :** ಭೋಗಸಾಧನವಾದ ಸ್ತ್ರೀವ್ಯಕ್ತಿಯೇ ಇಲ್ಲದೆ ವಿಷಯಾನಂದಾನುಭವ ಹೊಂದುವುದಕ್ಕೆ ಹಾಗೂ ಅಪರಿಮಿತವಾದ ಆನಂದವನ್ನು (ಸ್ತ್ರೀಭೋಗದಲ್ಲಿ) ಸ್ತ್ರೀಗೆ ಕೊಡುವಂತಹ ಸ್ತ್ರೀಸುಖದ ತತ್ವಕ್ಕೂ ಈ ಹೆಸರು.

೩) **ಸಂಕಲ್ಪಸಿದ್ಧಿ :** ಇಚ್ಛಿಸಿದ ಮಾತ್ರದಿಂದಲೇ ಸಕಲ ಕಾಮನೆಗಳೂ ತನ್ನ ವಶವಾಗುವಿಕೆಗೆ ಮತ್ತು ಮತ್ತೊಬ್ಬರು ಇಚ್ಛಿಸಿದ ಕಾಮನೆಗಳನ್ನು ತಕ್ಷಣದಲ್ಲಿ ಪೂರ್ಣಮಾಡುವಿಕೆಗೂ ಈ ಹೆಸರು.



೪) **ಸಕೃದ್ವೃಷ್ಟಿಮಯಸಿದ್ಧಿ :** ಒಮ್ಮೆ ಮಳೆ ಬಂದಿತೆಂದರೆ ಸಕಲ ಸಸ್ಯಗಳನ್ನೂ ಸಂವೃದ್ಧಿಯಾಗಿ ಫಲಿಸುವಂತೆ ಮಾಡುವುದು ಮತ್ತು ಜೊಳ್ಳಾದ ಧಾನ್ಯಗಳಲ್ಲಿ ರಸ ತುಂಬುವಂತೆ ಮಾಡುವಿಕೆಗೂ ಈ ಹೆಸರು.

೫) **ಗೃಹವೃಕ್ಷಾತ್ಮಕಸಿದ್ಧಿ :** ತನಗೆ ಬೇಕಾದ ಕಡೆ ತನ್ನ ಮನಸ್ಸಿಗೆ ಇಷ್ಟವಿದ್ದಂತೆ ಮನೆ, ಮಠ, ಪರ್ಣಕುಟೀರಗಳು, ಆಲಯಾದಿಗಳ ಆವರಣ ಮುಂತಾದವುಗಳನ್ನು ಇಚ್ಛೆಯಿಂದಲೇ ನಿರ್ಮಿಸಿಕೊಳ್ಳುವಿಕೆಗೆ ಹಾಗೂ ಇತರರಿಗೂ ನಿರ್ಮಿಸಿ ಕೊಡುವ ಶಕ್ತಿಗೆ ಈ ಹೆಸರು.

೬) **ಪ್ರಕಾಮವೃಷ್ಟಿಸಿದ್ಧಿ :** ಅವಶ್ಯವಿದ್ದಾಗ ಲೋಕಕಲ್ಯಾಣಕ್ಕಾಗಿ ಸಂವೃದ್ಧಿಯಾಗಿ ಮಳೆ ಸುರಿಸುವಿಕೆಗೆ ಹಾಗೂ ಆರ್ಭಟ ಅಕಾಲಿಕ ಮಳೆಯನ್ನು ತಡೆಗಟ್ಟುವ ಕ್ರಿಯೆಗೂ ಈ ಹೆಸರು.

೭) **ಕಲ್ಪವೃಕ್ಷಾತ್ಮಕಸಿದ್ಧಿ :** ಸ್ವರ್ಗಸೌಖ್ಯಕ್ಕೂ ಮಿಗಿಲೆನಿಸಿದ ರೀತಿಯಲ್ಲಿ ಶ್ರೀಹರಿ ಭಕ್ತರ ಬಯಕೆಗಳನ್ನು ಪೂರ್ತಿಮಾಡುವಿಕೆಗೆ ಮತ್ತು ದುಷ್ಟಸಂಬಂಧ ಸೌಖ್ಯಗಳನ್ನು ತಡೆಗೊಳಿಸುವಿಕೆಗೂ ಈ ಹೆಸರು.

೮) **ಅಕೃಷ್ಟಪಚ್ಯುಸಿದ್ಧಿ :** ನೆಲವನ್ನು ಉತ್ತದೇ ಬೀಜವನ್ನು ಬಿತ್ತದೇ ಬೇಕಾದ ಧಾನ್ಯಗಳನ್ನು ಭೂಮಿಯಿಂದ ಪಡೆಯುವಿಕೆಗೆ ಹಾಗೂ ನೆಲದಲ್ಲಿ ಬೆಳೆದ ಧಾನ್ಯಗಳನ್ನು ನೀರಸವನ್ನಾಗಿ ಮಾಡುವಿಕೆಗೂ ಈ ಹೆಸರು.

೯) **ಊಹಾಸಿದ್ಧಿ :** ಗ್ರಂಥಾಧ್ಯಯನ ಮಾಡದಲೇ ಯೋಗ್ಯ ಗುರೂಪದೇಶ ಮಾತ್ರದಿಂದಲೇ ಶಾಸ್ತ್ರಗ್ರಂಥಗಳ ವಾಸ್ತವಾರ್ಥಗಳನ್ನು ಗ್ರಹಿಸುವಿಕೆಗೆ ಮತ್ತು ಲೋಕಾಂತರ ಗ್ರಂಥಗಳ ವಿಷಯವನ್ನು ತಿಳಿಯುವಿಕೆಗೂ ಈ ಹೆಸರು.

೧೦) **ಶಬ್ದಸಿದ್ಧಿ :** ಯಾವುದೊಂದು ಪ್ರಸಂಗದಿಂದ ಅಥವಾ ಲೋಕ ಮರ್ಯಾದೆಯಿಂದ ಉತ್ಪನ್ನವಾದ ಶಬ್ದಗಳಿಂದ ಅರ್ಥಜ್ಞಾನ ಲಾಭವನ್ನು ಹೊಂದುವಿಕೆಗೆ ಮತ್ತು ಶಬ್ದಗಳ ದ್ವಾರಾ ಅರ್ಥವನ್ನು ಗೂಢವಾಗಿ ತಮಗೆ ಬೇಕಾದವರಿಗೆ ತಿಳಿಸಿಕೊಡುವುದಕ್ಕೂ ಈ ಹೆಸರು.

೧೧) **ಅಧ್ಯಯನಸಿದ್ಧಿ :** ಗುರುಮುಖದಿಂದ ಒಮ್ಮೆ ಶ್ರವಣಮಾಡಿದ ಮಾತ್ರದಿಂದಲೇ ಅಧ್ಯಯನ ಮಾಡಿದ ಜ್ಞಾನಕ್ಕಿಂತಲೂ ಅತಿಶಯ ಜ್ಞಾನಲಾಭ ಹೊಂದುವಿಕೆಗೆ ಈ ಹೆಸರು. ಒಮ್ಮೆ ಗುರುವು ಒಂದು ಶ್ಲೋಕವನ್ನು ಹೇಳಿ,

ಎಲ್ಲವನ್ನೂ ನೀನು ಅಧ್ಯಯನ ಮಾಡಿಕೋ ಎಂದು ಅನುಗ್ರಹಿಸುವುದಕ್ಕೂ ಈ ಹೆಸರು.

೧೨) **ಮೋದಸಿದ್ಧಿ :** ಆಯುರ್ವೇದದ ಮೂಲಕ ಅಥವಾ ಯೋಗ ಮೂಲಕ ಮುಪ್ಪು, ಹಸಿವು, ನೀರಡಿಕೆ, ರೋಗಾದಿ ಉಪದ್ರವ ಮುಂತಾದವುಗಳನ್ನು ದೀರ್ಘಕಾಲ ಜಯಿಸುವಿಕೆಗೆ ಈ ಹೆಸರು.

೧೩) **ಪ್ರಮುದಿತಸಿದ್ಧಿ :** ಅತಿವೃಷ್ಟಿ, ಬಿರುಗಾಳಿ, ಅತಿಬಿಸಿಲು, ಚಂದ್ರಶೀತಲ, ಅತಿ ಛಳಿ ಛಂಡಮಾರುತ, ಸಿಡಿಲು, ಮರಳುಗಾಡಿನ ಹವಾಮಾನ ಮುಂತಾದವು-ಗಳನ್ನು ಸಹಿಸುವ ಶಕ್ತಿಗೆ ಮತ್ತು ಇವುಗಳನ್ನು ತಡೆಗಟ್ಟುವಿಕೆಗೆ ಈ ಹೆಸರು.

೧೪) **ಮೋದಮಾನಸಿದ್ಧಿ :** ದುಷ್ಟವಾದ ಶಾಂತಿಕರ್ಮಗಳಿಂದ, ಅಮಂಗಳ ಶಾಸ್ತ್ರಶ್ರವಣ, ದುಷ್ಟದಾನಾದಿಗಳಿಂದ ಲಬ್ಧವಾಗುವ ಅನಿಷ್ಟ ಫಲಗಳನ್ನು ದೂರಮಾಡಿಕೊಳ್ಳುವಿಕೆಗೆ ಈ ಹೆಸರು.

೧೫) **ದಾನಸಿದ್ಧಿ :** ತಪಸ್ವಿಗಳು, ಜ್ಞಾನಿಗಳು, ಗುರು-ಹಿರಿಯರು ಮೊದಲಾದವರ ಶುಶ್ರೂಷೆಯಿಂದ ಲಭಿಸುವ ಸಿದ್ಧಿ.

೧೬) **ಸುಹೃತ್ಪ್ರಾರ್ಥಿತಾರ್ಥಸಿದ್ಧಿ :** ಸ್ನೇಹಿತರು, ಆಪ್ತರು, ಬಂಧುಗಳು (ಹರಿಭಕ್ತ-ರಾಗಿರಬೇಕು) ಮೊದಲಾದವರಿಂದ ಅವರಿಗೆ ಅರಿವಿಲ್ಲದೆ ಪ್ರಯೋಜನವನ್ನು ಪಡೆದು, ಹರಿಲೋಕವನ್ನು ಪಡೆಯುವಂತೆ ಮಾಡುವಿಕೆಗೆ ಈ ಹೆಸರು.

೧೭) **ಅಣಿಮಾಘರಿಮಾಸಿದ್ಧಿ :** ಅಗತ್ಯವಿದ್ದಾಗ ಬಹುಭಾರವಾಗುವಿಕೆ ಹಾಗೆಯೇ ಹಗುರವಾಗುವಿಕೆಗೆ ಮತ್ತು ಮತ್ತೊಬ್ಬರನ್ನು ಸ್ಪರ್ಶಿಸುತ್ತಾ ಈ ವಿಧ ಕ್ರಿಯೆಯನ್ನು ಅವರಲ್ಲೂ ಆರೋಪವಾಗುವಂತೆ ಮಾಡುವಿಕೆಗೂ ಈ ಹೆಸರು. (ಪಂಚಭೂತತತ್ವಗಳ ವ್ಯತ್ಯಾಸದ ಸಿದ್ಧಿ ಎಂದೂ ಕರೆಯುವರು).

೧೮) **ಜ್ಞಾನಸಿದ್ಧಿ :** ಜ್ಞಾನಾಸನದಲ್ಲಿ ಕುಳಿತು ತನ್ನ ಮನದಲ್ಲಿ ಶ್ರೀಹರಿಯನ್ನು ಧ್ಯಾನಿಸುತ್ತಾ, ಸಕಲಗ್ರಂಥಸ್ಥ ವಿಚಾರವನ್ನು ಮನಃಪಟದಲ್ಲಿ ತಿಳಿಯುವಿಕೆಗೆ ಈ ಹೆಸರು.

೧೯) **ಕಾಲಸಿದ್ಧಿ :** ತ್ರಿಕಾಲದಲ್ಲಿ ನಡೆದ ಘಟನೆಗಳ ಬಗ್ಗೆ ಸ್ಮೃತಿ ಇರುವಿಕೆಗೆ ಈ ಹೆಸರು ಅಥವಾ ಕಾಲಾಪರೋಕ್ಷ ಎಂದೂ ಕರೆಯುವರು.

**(ಮುಂದುವರೆಯುವುದು)**



॥ಶ್ರೀಹರಿ ಸರ್ವೋತ್ತಮ॥ ॥ಹರೇ ಶ್ರೀನಿವಾಸ॥ ॥ವಾಯುಜೀವೋತ್ತಮ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

॥ ಸರ್ವೇ ಜನಾಃ ಸುಖಿನೋ ಭವಂತು ॥

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗು-ತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳ-ಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

# ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ಪುರೋಹಿತರು**

ನಂ. 149, 'ಕಾನೀನ ನಿಲಯ', 5ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ
ಪದ್ಮನಾಭನಗರ, ಬೆಂಗಳೂರು

**ದೂರವಾಣಿ : 080-65351688, ಮೊಬೈಲ್ : 98444 75429**

ಲೇಖನಾಂಕ

# ಯೋಗದರ್ಶನ

■ ವಿದ್ವಾನ್. ಟಿ.ವಿ. ಸತ್ಯನಾರಾಯಣ

ಹಿರಿಯ ಸಹಾಯಕ ಸಂಶೋಧಕ - ಶ್ರೇಣಿ ೧, ಪ್ರಾಚ್ಯ ವಿದ್ಯಾ ಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು - ೫೭೦ ೦೦೫

ಆರು ದರ್ಶನಗಳಲ್ಲಿ ಪ್ರಕೃತ ಲೇಖಕರು ಯೋಗದರ್ಶನಾನುಸಾರ ಅದರ ತತ್ತ್ವವನ್ನು ವಿವರಿಸಿದ್ದಾರೆ - ಸಂ.

ಹಿಂದಿನ ಸಂಚಿಕೆಯಿಂದ.......

**ಚಿ**ತ್ತವೃತ್ತಿಗಳು ಸಾತ್ವಿಕ, ರಾಜಸ, ತಾಮಸಗಳಾಗಿರುತ್ತವೆ. **'ಪುರುಷನು ಅಂದರೆ ಈಶ್ವರನು'** ಇವುಗಳಲ್ಲಿ ಪ್ರತಿಬಿಂಬಿಸಿ, ಕ್ರಮವಾಗಿ ತಾನು 'ಸುಖೀ' ಎಂದೂ, 'ದುಃಖೀ' ಎಂದೂ, ಮೂಢ ಎಂದು ತಿಳಿಯುವನು. ನಿಜವಾಗಿಯೂ ಈಶ್ವರನಲ್ಲಿ ಯಾವ ಗುಣವೂ ಇಲ್ಲ. ಚಿತ್ತವೃತ್ತಿಗಳು ಅಭ್ಯಾಸ ಮತ್ತು ವೈರಾಗ್ಯಗಳಿಂದ ನಿರೋಧಿಸಲ್ಪಡುತ್ತವೆ. ಸಚ್ಚಿದಾನಂದರೂಪನಾದ ಈಶ್ವರನಲ್ಲಿ ಏಕಾಗ್ರತೆಯನ್ನು ಹೊಂದಲು ತಡೆಯಿಲ್ಲದೆ ಸತತವಾಗಿ ಪ್ರಯತ್ನಪಡುವುದು ಅಭ್ಯಾಸ. ಈ ಅಭ್ಯಾಸವು ಉತ್ಸಾಹ, ಸಾಹಸ, ಧೈರ್ಯ, ಆತ್ಮವಿದ್ಯೆಯನ್ನು ಅಧ್ಯಯನಮಾಡುವುದು, ದೊಡ್ಡವರ ಸೇವೆ ಮಾಡುವುದು, ಯಮ, ನಿಯಮ, ಮುಂತಾದವುಗಳನ್ನು ಆಚರಿಸುವುದರಿಂದ ಉಂಟಾಗುತ್ತದೆ.

ವೈರಾಗ್ಯವೆಂದರೆ ತಿನ್ನುವುದು, ಕುಡಿಯುವುದು, ಸುಖಪಡುವುದು ಮೊದಲಾದ ಲೌಕಿಕ ಸುಖಗಳಲ್ಲಿಯೂ, ವೈದಿಕಕರ್ಮಗಳನ್ನು ಮಾಡಿ ಸ್ವರ್ಗಸುಖವನ್ನು ಹೊಂದಬೇಕು ಎಂದು ಬಯಸುವುದು ಮುಂತಾದ ಯಾವ ಆಸೆ-ಆಕಾಂಕ್ಷೆಗಳಿಲ್ಲದಿರುವುದು.

## ಯೋಗದ ವಿಘ್ನಗಳು

ಯೋಗಕ್ಕೆ ವ್ಯಾಧಿ, ಸ್ತ್ಯಾನ, ಸಂಶಯ, ಪ್ರಮಾದ, ಆಲಸ್ಯ, ಅವಿರತಿ, ಭ್ರಾಂತಿ ದರ್ಶನ, ಅಲಬ್ಧಭೂಮಿಕತ್ವ ಮತ್ತು ಅನವಸ್ಥಿತತ್ವ ಎಂದು ಒಂಭತ್ತು ರೀತಿಯ ವಿಘ್ನಗಳು ಒದಗುತ್ತವೆ. ವಾತ, ಪಿತ್ತ, ಶ್ಲೇಷ್ಮ ಮುಂತಾದ ಧಾತುಗಳ ವೈಷಮ್ಯಕ್ಕೆ ವ್ಯಾಧಿ ಎಂದು ಹೆಸರು, ರೋಗ ಎಂದರ್ಥ. ಯಾವುದೇ ಕಾರ್ಯವನ್ನು ಮಾಡುವ ಯೋಗ್ಯತೆ ಇಲ್ಲದಿದ್ದರೆ ಅದು ಸ್ತ್ಯಾನ. ಈ ಕಾರ್ಯವನ್ನು ಮಾಡಿದರೆ ನನಗೆ ಸಿದ್ಧಿ-



ಯಾಗುತ್ತದೆಯೋ ಇಲ್ಲವೋ ಎಂದು ಯೋಚಿಸುವುದಕ್ಕೆ 'ಸಂಶಯ'ವೆಂದು ಹೆಸರು. ಯೋಗಕ್ಕೆ ಬೇಕಾದ ಅಂಗಗಳನ್ನು ಅನುಸರಿಸದಿರುವುದಕ್ಕೆ 'ಪ್ರಮಾದ' ಎಂದು ಹೆಸರು. ಚಿತ್ತವು ಭಾರವಾದಾಗ ಯಾವುದನ್ನು ಮಾಡಲೂ ಮನಸ್ಸಿಲ್ಲದೆ ಸುಮ್ಮನೆ ಇರುವುದು 'ಆಲಸ್ಯ'. ಯಾವುದೇ ವಿಷಯದಲ್ಲಿ ತೃಪ್ತಿ ಇಲ್ಲದಿರುವುದಕ್ಕೆ 'ಅವಿರತಿ' ಎಂದು ಹೆಸರು. ತಿಳಿಯಬೇಕಾದ ವಿಷಯವನ್ನು ಆರೂಪದಲ್ಲಿ ತಿಳಿಯದೇ ವಿಪರೀತವಾಗಿ ತಿಳಿಯುವುದು 'ಭ್ರಾಂತಿದರ್ಶನ'. ಸಮಾಧಿಯನ್ನು ಹೊಂದಲು ಅನುಕೂಲವಾದ ಜಾಗವಿಲ್ಲದಿರುವುದು 'ಅಲಬ್ಧಭೂಮಿಕತ್ವ'. ಚಿತ್ತವು ಸ್ಥಿರವಾಗಿಲ್ಲದಿರುವಿಕೆಯೇ 'ಅನವಸ್ಥಿತತ್ವ'.

ಈ ಎಲ್ಲ ದುಃಖಗಳೂ ಯೋಗಕ್ಕೆ ತಡೆಯನ್ನು ಒಡ್ಡುತ್ತವೆ. ಈಶ್ವರನ ಧ್ಯಾನದಿಂದ ಅಂದರೆ ನಿರಂತರ ಚಿಂತನೆಯಿಂದ ಈ ಒಂಭತ್ತು ದೋಷಗಳು ದೂರವಾಗುತ್ತವೆ. ಸುಖಿಗಳಾದವರಲ್ಲಿ ಸ್ನೇಹಭಾವವನ್ನು ತೋರಿಸುವುದರಿಂದಲೂ, ದುಃಖಿತರಾದವರಲ್ಲಿ ದಯೆ ತೋರುವುದರಿಂದಲೂ, ಪುಣ್ಯಕಾರ್ಯಗಳಲ್ಲಿ ಸಂತೋಷವನ್ನು ತೋರಿಸುವುದರಿಂದಲೂ, ಪಾಪಕಾರ್ಯಗಳಲ್ಲಿ ಉದಾಸೀನಭಾವವನ್ನು ತೋರಿಸುವುದರಿಂದಲೂ ಈ ವಿಘ್ನಗಳು ದೂರವಾಗುತ್ತವೆ. ಈ ವಿಘ್ನಗಳು ಹೊರಹೋದ ನಂತರ ಚಿತ್ತವು ದೃಢವಾದ ಸ್ಥಿತಿಯನ್ನು ಪಡೆಯಲು ಯೋಗ್ಯವಾಗುವುದು.

## ಚಿತ್ತವನ್ನು ಬಲಪಡಿಸುವ ಕ್ರಮ

ಚಿತ್ತವನ್ನು ಬಲಪಡಿಸಲು ಪೂರಕ, ಕುಂಭಕ, ರೇಚಕ ಎಂಬುದಾಗಿ ಮೂರು ಕ್ರಮಗಳಿವೆ. ನಾಸಿಕಾಪುಟಗಳಿಂದ (ಮೂಗಿನ ರಂಧ್ರಗಳಿಂದ) ಪ್ರಾಣವಾಯುವನ್ನು ತೆಗೆದುಕೊಳ್ಳುವುದಕ್ಕೆ ಪೂರಕ ಎಂದು ಹೆಸರು. ಪ್ರಾಣವಾಯುವನ್ನು ಒಳಗೆ ಕೋಶದಲ್ಲಿಯೇ ನಿಲ್ಲಿಸುವುದಕ್ಕೆ ಕುಂಭಕ ಎಂದು ಹೆಸರು. ಮತ್ತೆ ಒಳಗೆ ತೆಗೆದುಕೊಂಡ ಪ್ರಾಣವಾಯುವನ್ನು ಹೊರಗೆ ಬಿಡುವುದಕ್ಕೆ ರೇಚಕ ಎಂದು ಹೆಸರು. ಇವುಗಳ ಸಹಾಯದಿಂದ ಚಿತ್ತವನ್ನು ಒಂದು ಲಕ್ಷ್ಯದಲ್ಲಿ (ಗುರಿಯಲ್ಲಿ) ಇಡಬಹುದು. **ಪ್ರಾಣವಾಯುವನ್ನು ಗೆಲ್ಲುವುದರಿಂದ ಚಿತ್ತವನ್ನು ಗೆಲ್ಲಬಹುದು. ಪ್ರಾಣವಾಯುವನ್ನು ಜಯಿಸುವ ಕ್ರಮಕ್ಕೆ 'ಪ್ರಾಣಾಯಾಮ' ಎಂದು ಹೆಸರು.** ಇದರಿಂದ ಎಲ್ಲ ಪಾಪಗಳೂ ನಿವೃತ್ತವಾಗುತ್ತವೆ.

## ಚಿತ್ತವನ್ನು ತಡೆಹಿಡಿಯುವ ಬಗೆ ಮತ್ತು ಅದರ ಉಪಯೋಗ

**ಚಿತ್ತವೃತ್ತಿಯನ್ನು ತಡೆಯಲು "ಚಿತ್ತಶುದ್ಧಿ"ಯನ್ನು ಸಂಪಾದಿಸಬೇಕು.** ಚಿತ್ತದ ಶುದ್ಧಿಯು ಬ್ರಹ್ಮಚರ್ಯ, ಗುರುಸೇವೆ, ಸತ್ಯವನ್ನು ಹೇಳುವುದು, ಸರಳತೆ, ಶುದ್ಧತೆ

ಮುಂತಾದ ತಪಸ್ಸಿನಿಂದಲೂ, ಓಂಕಾರ ಮುಂತಾದ ಪವಿತ್ರ ಮಂತ್ರಗಳನ್ನು ಜಪಿಸುವುದರಿಂದಲೂ, ಮಾಡಿದ ಕರ್ಮವನ್ನು ಫಲವನ್ನು ಬಯಸದೆ ಈಶ್ವರನಲ್ಲಿ ಅರ್ಪಿಸುವುದರಿಂದಲೂ ಆಗುತ್ತದೆ. ಚಿತ್ತಶುದ್ಧಿಯಿಂದ ಅವಿದ್ಯೆ, ಅಹಂಕಾರ, ರಾಗ, ದ್ವೇಷ, ಅಭಿನಿವೇಶ ಎಂಬ ಕ್ಲೇಶಗಳು ದೂರವಾಗುತ್ತವೆ. **ಈ ಕ್ಲೇಶಗಳೇ ಜನ್ಮಕ್ಕೆ (ಹುಟ್ಟಿಗೆ) ಕಾರಣಗಳು.** ಇವು ಹೇಯವಾದವುಗಳು. ಪ್ರಕೃತಿ-ಪುರುಷರ ಸಂಯೋಗವೇ ಅಂದರೆ ಇವೆರಡಕ್ಕೂ ಅಭೇದವಿದೆ ಎಂಬ ಭ್ರಮೆಯೇ ಈ ಹೇಯವಸ್ತುಗಳ ಮೂಲಕಾರಣ. ಪ್ರಕೃತಿ-ಪುರುಷರ ಭೇದಜ್ಞಾನವು ಈ ಹೇಯಪದಾರ್ಥಗಳನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ. ಹೀಗೆ ಯೋಗದ ಅನುಷ್ಠಾನದಿಂದ ಚಿತ್ತದ ಅಂದರೆ ಮನಸ್ಸಿನ ಶುದ್ಧಿಯಾಗಿ ಪ್ರಕೃತಿ-ಪುರುಷರ ವಿವೇಕ ಜ್ಞಾನವನ್ನು ಹುಟ್ಟಿಸಿ ಕ್ಲೇಶನಿವೃತ್ತಿರೂಪವಾದ ಮೋಕ್ಷವನ್ನು ನೀಡುತ್ತದೆ.

## ಯೋಗದ ಅಂಗಗಳು

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಇವು ಎಂಟು ಯೋಗದ ಅಂಗಗಳು. ಇವುಗಳನ್ನು ಅಷ್ಟಾಂಗಯೋಗವೆಂದು ಕರೆದಿದ್ದಾರೆ. ಅಹಿಂಸೆ (ಶಾರೀರಿಕವಾಗಿ - ಮಾನಸಿಕವಾಗಿ ಯಾರನ್ನೂ ಹಿಂಸೆ ಮಾಡದಿರುವುದು). ಸತ್ಯ, ಅಸ್ತೇಯ (ಯಾರ ವಸ್ತುವನ್ನೂ ಕದಿಯದಿರುವುದು), ಅಪರಿಗ್ರಹ (ಯಾರ ಪದಾರ್ಥವನ್ನೂ ತೆಗೆದುಕೊಳ್ಳಬೇಕೆಂದು ಬಯಸದಿರುವುದು) ಇವು ಯಮಗಳು. ಶೌಚ (ಬಾಹ್ಯ - ಆಭ್ಯಂತರ ನಿರ್ಮಲತೆ), ಸಂತೋಷ, ತಪಸ್ಸು (ಚಿಂತನೆ), ಸ್ವಾಧ್ಯಾಯ (ಓದಬೇಕಾದುದನ್ನು ಓದುವುದು - ತಿಳಿಯಬೇಕಾದುದನ್ನು ತಿಳಿಯುವುದು), ಈಶ್ವರಪೂಜೆ (ಅನಿರ್ವಚನೀಯವಾದ ಚೈತನ್ಯಶಕ್ತಿಯಲ್ಲಿ ಭಕ್ತಿಯ ಉಪಾಸನೆ) ಇವು ನಿಯಮಗಳು. ಅಹಿಂಸೆಯಿಂದ ಪ್ರಾಣಿಗಳಲ್ಲಿರುವ ದ್ವೇಷವು ದೂರವಾಗುತ್ತದೆ. ಸತ್ಯದಿಂದ ನಮ್ಮ ಮಾತು ಶುದ್ಧವಾಗುತ್ತದೆ, ಸಾರ್ಥಕವಾಗುತ್ತದೆ. ಅಸ್ತೇಯದಿಂದ ಎಲ್ಲೆಡೆ ಇರುವ ಐಶ್ವರ್ಯವು ಮನುಷ್ಯನಿಗೆ ತಾನಾಗಿಯೇ ಒದಗಿ ಬರುವುದು. ಬ್ರಹ್ಮಚರ್ಯದಿಂದ (ನಮ್ಮ ಇಂದ್ರಿಯ, ಮನಸ್ಸುಗಳಿಗೆ ಸೋಲದೇ ನಿಯಮಬದ್ಧವಾದ ಪ್ರಾಮಾಣಿಕ ಜೀವನ ನಡೆಸುವುದರಿಂದ), ವೀರ್ಯವೃದ್ಧಿಯಾಗುವುದು. ಅಂದರೆ ಶಾರೀರಿಕವಾದ - ಮಾನಸಿಕವಾದ ದೃಢತೆ - ಸ್ಥೈರ್ಯಗಳು ಹೆಚ್ಚುತ್ತವೆ. ಅಪರಿಗ್ರಹದಿಂದ ಆತ್ಮಸ್ವರೂಪದ ವಿಷಯದಲ್ಲಿ ಜಿಜ್ಞಾಸೆಯು (ತಿಳಿಯಬೇಕೆಂಬ ಅಪೇಕ್ಷೆಯು) ಹುಟ್ಟುವುದು. ಶೌಚದಿಂದ ತನ್ನ ಅಂಗಗಳಲ್ಲಿ ಜುಗುಪ್ಸೆಯೂ, ಇತರರ ಜೊತೆ ಅನವಶ್ಯಕವಾಗಿ ಸೇರದಿರುವುದೂ ಉಂಟಾಗುವುವು. ಇದಕ್ಕೆ



ಸತ್ತ್ವಶುದ್ಧಿ, ಸೌಮನಸ್ಯ (ಒಳ್ಳೆಯ ಮನಸ್ಸು), ಏಕಾಗ್ರತೆ, ಇಂದ್ರಿಯ ಜಯ ಮುಂತಾದ ಅನೇಕ ಫಲಗಳೂ ಇವೆ.

**ಆಸನವೆಂದರೆ** - ಶರೀರಕ್ಕೆ ದೃಢವಾಗಿ ಸುಖವನ್ನುಂಟುಮಾಡುವುದು. ಚೇಲ (ರೇಷ್ಮೆಯ ಬಟ್ಟೆ), ಅಜಿನ (ಜಿಂಕೆಯ ಚರ್ಮ ಮುಂತಾದವು), ಕುಶ (ದರ್ಭೆ, ಹುಲ್ಲು ಮುಂತಾದ ಅರಣ್ಯಜನ್ಯ ವಸ್ತುಗಳಿಂದ ಮಾಡಿದ ಚಾಪೆ ಮೊದಲಾದವು) ಇತ್ಯಾದಿಗಳು ಬಾಹ್ಯವಾದ ಆಸನಗಳು. ಪದ್ಮಾಸನ, ಶೀರ್ಷಾಸನ, ಧನುರಾಸನ ಮೊದಲಾದವು ದೇಹಕ್ಕೆ ಸಂಬಂಧಿಸಿದ ಆಸನಗಳು. ಆಸನಗಳನ್ನು ಗೆದ್ದವನಿಗೆ ಶೀತೋಷ್ಣಗಳ (ಚಳಿ-ಬಿಸಿಲುಗಳ) ಹೆದರಿಕೆಯಲ್ಲಿ ಇವನಿಗೂ ಪ್ರಾಣಾಯಾಮವು ಸಂಭವಿಸುವುದು. ಪ್ರಾಣಾಯಾಮವು ಬಾಹ್ಯವೃತ್ತಿ, ಅಭ್ಯಂತರವೃತ್ತಿ ಸ್ತಂಭವೃತ್ತಿ ಮತ್ತು ತುರೀಯವೃತ್ತಿ ಎಂದು ನಾಲ್ಕು ಬಗೆ. ರೇಚನದಿಂದ ಹೊರಬಂದ ವಾಯುವನ್ನು ಹೊರಗೇ ನಿಲ್ಲಿಸುವುದಕ್ಕೆ ಬಾಹ್ಯವೃತ್ತಿ ಎಂದು ಹೆಸರು. ಪೂರಕದಿಂದ ಒಳಗೆ ಬಂದ ವಾಯುವನ್ನು ಒಳಗೇ ನಿಲ್ಲಿಸುವುದಕ್ಕೆ ಆಭ್ಯಂತರವೃತ್ತಿಯೆಂದು ಹೆಸರು. ರೇಚಕ-ಪೂರಕಗಳಿಲ್ಲದೆ ವಾಯುವಿನ ಗತಿಯನ್ನು ನಿಲ್ಲಿಸುವುದಕ್ಕೆ ಸ್ತಂಭವೃತ್ತಿ ಎಂದು ಹೆಸರು. ಹೊರಗಿನ ಸ್ಥಳವನ್ನೂ, ಒಳಗಿನ ಹೃದಯಪ್ರದೇಶವನ್ನೂ ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡುವವನಿಗೆ ತುರೀಯ ವೃತ್ತಿಯು ಸಂಭವಿಸುವುದು. ಪ್ರಾಣಾಯಾಮದಿಂದ ಪಾಪಗಳು ಪರಿಹಾರವಾಗುತ್ತವೆ. ಮನಸ್ಸಿಗೆ ಸೂಕ್ಷ್ಮವಿಷಯವನ್ನೂ ಗ್ರಹಿಸುವ ಶಕ್ತಿಯು ಸಿದ್ಧಿಸುತ್ತದೆ. ಈ ರೀತಿ ಚಿತ್ತಪಾಕವುಳ್ಳವನಿಗೆ ಅಂದರೆ ಪರಿಪಕ್ವವಾದ ಮನಸ್ಸುಳ್ಳವನಿಗೆ ಪ್ರತ್ಯಾಹಾರವು ಉಂಟಾಗುತ್ತದೆ. **ಕಣ್ಣು-ಕಿವಿ-ಮೂಗು-ನಾಲಿಗೆ-ಚರ್ಮಗಳೆಂಬ ಐದು ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಾದ ರೂಪ-ಶಬ್ದ-ವಾಸನೆ-ರುಚಿ-ಸ್ಪರ್ಶಗಳನ್ನು ಗ್ರಹಿಸದೆ, ತತ್ತ್ವವನ್ನು ತಿಳಿಯುವ ಕಡೆ ಹೋಗುವುದಕ್ಕೆ "ಪ್ರತ್ಯಾಹಾರ"ವೆಂದು ಹೆಸರು. ಪ್ರತ್ಯಾಹಾರದಿಂದ ಇಂದ್ರಿಯಗಳ ಗೆಲುವು ಸಿದ್ಧಿಸುತ್ತದೆ.**

ಧಾರಣೆಯಿಂದ ಚಿತ್ತಸ್ಥೈರ್ಯವು ಉಂಟಾಗುತ್ತದೆ. ನಾಭಿಚಕ್ರ, ಹೃದಯ, ನಾಸಾಗ್ರ (ಮೂಗಿನ ತುದಿ), ಎರಡು ಹುಬ್ಬುಗಳ ಮಧ್ಯಭಾಗ ಮೊದಲಾದ ಜಾಗಗಳಲ್ಲಿ ಸಂಪ್ರಜ್ಞಾತ ಸಮಾಧಿಯೋಗದ ಸಿದ್ಧಿಗಾಗಿ ಚಿತ್ತವನ್ನು ಸ್ಥಿರವಾಗಿ ನಿಲ್ಲುವಂತೆ ಮಾಡುವುದಕ್ಕೆ ಧಾರಣಾ ಎಂದು ಹೆಸರು. ಮೈತ್ರೀ (ಗೆಳೆತನ-ಸ್ನೇಹಭಾವ) ಮುಂತಾದ ಚಿತ್ತಪರಿಕರ್ಮದಿಂದ ವಾಸಿತವಾದ ಅಂತಃಕರಣವುಳ್ಳ, ಯಮನಿಯಮಗಳುಳ್ಳ, ಆಸನಜಯವುಳ್ಳ, ದೂರಮಾಡಲ್ಪಟ್ಟ ಪ್ರಾಣವಿಕ್ಷೇಪವುಳ್ಳ (ಪ್ರಾಣವಾಯು

ಸ್ಥಿರತೆ), ಪ್ರತ್ಯಾಹಾರ ಸಾಮರ್ಥ್ಯದಿಂದ ಕೂಡಿದ ಇಂದ್ರಿಯಗಳುಳ್ಳ, ತೊಂದರೆ ಇಲ್ಲದ ಪ್ರದೇಶದಲ್ಲಿ ಋಜುವಾದ ಶರೀರದ ಮೂಲಕ (ಸ್ವಾಭಾವಿಕವಾದ ದೇಹದ ಮೂಲಕ), ಸುಖ-ದುಃಖ, ಲಾಭ-ಅಲಾಭ, ದ್ವೇಷ-ಸ್ನೇಹ ಮೊದಲಾದ ದ್ವಂದ್ವಗಳಿಲ್ಲದ ಯೋಗಿಯು ಸಂಪ್ರಜ್ಞಾತ ಸಮಾಧಿಯನ್ನು ಅಭ್ಯಾಸಮಾಡುವುದಕ್ಕಾಗಿ ಚಿತ್ತದ ಸ್ಥಿರತೆಯನ್ನು ಮಾಡಬೇಕು. ಧಾರಣಾದಿಂದ ಧ್ಯಾನವು ಸಿದ್ಧಿಸುವುದು ಅಲ್ಲದೆ ಬೇರೆ ಬೇರೆ ಜಾತಿಯ ಚಿತ್ತವೃತ್ತಿಗಳು ಧಾರಣಾದಿಂದ ದೂರವಾಗಬೇಕಾದರೆ ಅದಕ್ಕೆ ಪ್ರಯತ್ನಬೇಕು. **ಯತ್ನವಿಲ್ಲದೆ ಚಿತ್ತವೃತ್ತಿಗಳು ಬೇರೆ ಬೇರೆ ಕಡೆ ಹರಿಯದೇ ಒಂದೇ ವಿಷಯದ ಕಡೆ ಹರಿದರೆ ಅದೇ "ಧ್ಯಾನ"** (ಒಂದೇ ವಿಷಯವನ್ನು ಅಚಲವಾಗಿ ಚಿಂತಿಸುವುದು ಧ್ಯಾನ). ಧಾರಣಾಕ್ಕೆ ಯಾವುದು ವಿಷಯವೋ ಅದೇ ಧ್ಯಾನಕ್ಕೂ ವಿಷಯ. ಧ್ಯಾನದಲ್ಲಿ ಚಿತ್ತವೃತ್ತಿ ಸತತವಾದ ಉತ್ಪತ್ತಿ ಇರುವುದು. ಧ್ಯಾನವೇ ಅತಿನಿರ್ಮಲವಾದ ಚಿತ್ತವೃತ್ತಿಯ ಪ್ರವಾಹರೂಪವಾಗಿ, ಕೇವಲ ಅರ್ಥರೂಪದಿಂದ ಚೆನ್ನಾಗಿ ಭಾಸಮಾನವಾದರೆ (ಹೊಳೆದರೆ) ಅದು ಸಮಾಧಿ ಎನಿಸುವುದು. ಅಂದರೆ **ನಾವು ಯಾವುದನ್ನು ಏಕಾಗ್ರತೆಯಿಂದ ನಿರಂತರವಾಗಿ ಚಿಂತಿಸುತ್ತೇವೆಯೋ ಆ ವಿಷಯವು ಅಥವಾ ಆ ವಸ್ತುವು ಪ್ರಕಾಶಮಾನವಾಗಿ ನಮಗೆ ಹೊಳೆದರೆ ಅದು "ಸಮಾಧಿ".** ಧಾರಣಾ, ಧ್ಯಾನ ಹಾಗೂ ಸಮಾಧಿಗಳು ಒಂದೇ ಬೆಳವಣಿಗೆಯ ಬೇರೆ ಬೇರೆ ಹಂತಗಳು. ವಿಜಾತೀಯ ವೃತ್ತಿಗಳಿಂದ ಕೂಡಿ ವಿಚ್ಛಿನ್ನವಾದುದು ಧಾರಣಾ. ಸಜಾತೀಯ ವೃತ್ತಿಗಳಿಂದ ಕೂಡಿ ಅವಿಚ್ಛಿನ್ನವಾದುದು ಧ್ಯೀನ. ಧ್ಯೇಯ (ಧ್ಯಾನಮಾನ ಮಾಡಬೇಕಾದ ವಿಷಯ), ಧ್ಯಾನ (ಧ್ಯೇಯವಸ್ತುವನ್ನು ತಿಳಿಯುವ ಸಾಧನ), ಧ್ಯಾತೃ (ಧ್ಯಾನಮಾಡುವ ವ್ಯಕ್ತಿ) ಇವುಗಳಲ್ಲಿ ಕೇವಲ ಧ್ಯೇಯ ಮಾತ್ರ ಸ್ಫೂರ್ತಿಯುಳ್ಳದ್ದು ಸಮಾಧಿ. ಈ ಸಮಾಧಿಯೇ ಬಹುಕಾಲ ಇರುವುದಾದರೆ ಅದು ''ಸಂಪ್ರಜ್ಞಾತಯೋಗ''ವೆನಿಸುವುದು.

**(ಮುಂದುವರೆಯುವುದು)**

**ಸದಸ್ಯರುಗಳು ತಮ್ಮ ಹಳೆಯ ವಿಳಾಸಗಳನ್ನು ಹಾಗೂ ಬದಲಾದ ವಿಳಾಸಗಳನ್ನು 099857-03033 ಈ ಸಂಖ್ಯೆಗೆ ಮಾತ್ರ ಎಸ್.ಎಂ.ಎಸ್. ಮೂಲಕ ಕಳುಹಿಸಬೇಕು. 93413-87714 ಸಂಖ್ಯೆಗೆ ಕಳುಹಿಸಬಾರದಾಗಿ ವಿನಂತಿ. ಈ ಸಂಖ್ಯೆಯಲ್ಲಿ ಕೇವಲ ಲೇಖನಗಳ ಹಾಗೂ ಪತ್ರಿಕೆಯ ತಪ್ಪು-ಒಪ್ಪುಗಳ ಬಗ್ಗೆ ಅಭಿಪ್ರಾಯಗಳನ್ನು ಮಾತ್ರ ಸ್ವೀಕರಿಸಲಾಗುವುದು.**






ನಿಮ್ಮ ತರ್ಕಕ್ಕಾಗಿ

ಸಮಾಜದಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಕುರಿತ ಲೇಖನಗಳ ಬಗೆಗಿನ ಒಂದು ಇಣುಕುನೋಟ ಇದಾಗಿದೆ. ಇದನ್ನು ವಿಮರ್ಶಿಸುವ, ಪರಾಂಬರಿಸುವ ಯುಕ್ತಿ ನಿಮ್ಮದಾಗಿದೆ. ಈ ಲೇಖನವು ದಿನಪತ್ರಿಕೆಗಳಲ್ಲಿ, ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳ ಆಧಾರಿತವಾಗಿದೆ.

– ಸಂ.

## ಸಂಸ್ಕೃತ ಉಳಿಸುವ ಸಂಸ್ಕೃತಿ ಎಲ್ಲಿ?

**ಕ**ನ್ನಡಕ್ಕೆ ಶಾಸ್ತ್ರೀಯ ಸ್ಥಾನ-ಮಾನ ಏಕೆ ಕೊಡಲಿಲ್ಲ? ''ಇದು ಕೇಂದ್ರದ ತಾರತಮ್ಯ''. ''ತಮಿಳುನಾಡಿನ ಕುತಂತ್ರ''. ಹೀಗೆ ಕನ್ನಡ ಪ್ರೇರಿತ ಆಕ್ರೋಷದ ಮಾತುಗಳನ್ನು ನಾವು ಕೇಳುತ್ತಿದ್ದೇವೆ. ಹೌದು ಎಲ್ಲವೂ ಸತ್ಯ. ಕನ್ನಡಕ್ಕೆ ಆ ಗೌರವ ನೀಡದೇ ಇರುವುದು ಅಕ್ಷಮ್ಯ. ಕಸ್ತೂರಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಪಟ್ಟವನ್ನು ಗಳಿಸುವ ಎಲ್ಲ ಅರ್ಹತೆ ಇದೆ ಎನ್ನುವುದೂ ವಾಸ್ತವ. ಇದರ ಜತೆಗೆ ನಾವು ಇಂದು ಯೋಚಿಸಬೇಕಾದುದು ಸಕಲ ಭಾಷೆಯ ಮಾತೃಸ್ಥಾನದಲ್ಲಿರುವ ಸಂಸ್ಕೃತದ ಸ್ಥಿತಿಯನ್ನು ಒಂದೆಡೆ ಕನ್ನಡವನ್ನು ಬೆಂಗಳೂರಲ್ಲೇ 'ಉಳಿಸಿ'ಕೊಳ್ಳುವ ಸ್ಥಿತಿ. ಇನ್ನೊಂದೆಡೆ ಶಾಸ್ತ್ರೀಯ ಸ್ಥಾನದ ಬೇಡಿಕೆ. ಇವೆಲ್ಲದರ ಮಧ್ಯೆ ಶಾಸ್ತ್ರೀಯ ಸ್ಥಾನ ಗಳಿಸಿಕೊಂಡ ಸಂಸ್ಕೃತದ ಉಳಿವು ಎಲ್ಲರಿಗೂ ಮರೆತು ಹೋದಂತಿದೆ. ''ಸಂಸ್ಕೃತ'' ಎಂದೊಡನೆ ಅದರ ಬಗ್ಗೆ ಪುರಾತನ ಭಾಷೆ ಎಂಬ ಹಿಡಿ ಭಕ್ತಿ, ಒಂದಷ್ಟು ಅನುಕಂಪ ಬಿಟ್ಟರೆ ಬೇರೇನೂ ಕಾಣುತ್ತಿಲ್ಲ. ಜಗಮಗಿಸುತ್ತಿರುವ ಐಟಿ ಯುಗದ ವೈಭವದ ಮಬ್ಬಿನಲ್ಲಿ ಭಾಷೆಗಳು ಕಳೆದುಹೋಗುತ್ತಿವೆ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೇಳುತ್ತಿರುವ ನಾವು ಈಗಾಗಲೇ ಆ ಪಟ್ಟವನ್ನು ಅಲಂಕರಿಸಿರುವ ಸಂಸ್ಕೃತ ಭಾಷೆಯ ತೆವಳಾಟವನ್ನು ಅವಲೋಕಿಸಬೇಕಿದೆ. **ಶಬ್ದ ಶ್ರೀಮಂತಿಕೆ – ಅರ್ಥ ಶ್ರೀಮಂತಿಕೆಯಲ್ಲಿ ಸಂಸ್ಕೃತವನ್ನು ಮೀರಿಸುವ ಬೇರೆ ಭಾಷೆ ಇಲ್ಲ.** ಭಾಷೆಯ ಕಲಿಕೆ ಜತೆಗೆ ಶಿಸ್ತು, ಜ್ಞಾನಸಂಪನ್ನತೆ ಜತೆಯಾಗುತ್ತದೆ. ಈ ಕಾರಣದಿಂದ ಸಂಸ್ಕೃತ ಪಂಡಿತರು ಬಹು ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು. ಈ ಶಿಕ್ಷಕ, ಉಪನ್ಯಾಸಕ, ಪ್ರಾಧ್ಯಾಪಕ ಮುಂತಾದ ಶಬ್ದಗಳು ಆಚಾರ್ಯ, ಪ್ರಾಚಾರ್ಯ, ಪ್ರಾಂಶುಪಾಲ ಎಂಬ ಸಂಸ್ಕೃತ ಪದಗಳಿಂದ ಆಗಿರುವುದು. ಐಟಿ, ಬಿಟಿಗಳ ಗೆಲುವಿನಿಂದ ಉಂಟಾಗಿರುವ ಇಂಗ್ಲೀಷ್

ಮಹತ್ವ ಪ್ರಾದೇಶಿಕ ಭಾಷೆಗಳಿಗೆ ಬೆದರಿಕೆ ಒಡ್ಡಿದೆ. ಈ ಸಾಲಿಗೆ ಸಂಸ್ಕೃತವನ್ನೂ ಸೇರಿಸಬಹುದು. ಇಂದು ಯಾವ ಪರಿಸ್ಥಿತಿ ಇದೆ ಎಂದರೆ, ಭಾಷೆ ಕಲಿಕೆಯಿಂದ ಪ್ರಯೋಜನ ಏನು? ಎಂದು ಪ್ರಶ್ನಿಸುವ ಮಟ್ಟಕ್ಕೆ ಹೋಗಿ ನಿಂತಿದ್ದೇವೆ. ಅಂದರೆ **ಒಂದು ಭಾಷೆಯ ಉಳಿವು, ಈ ಭಾಷೆಯು ಕಲಿತ ವ್ಯಕ್ತಿಯ ಜೀವನ ನಿರ್ವಹಣೆಗೆ ನೆರವಾಗುತ್ತದೆಯೇ ಎನ್ನುವುದರ ಮೇಲೆ ನಿಂತಿದೆ.** ಭಾಷೆಗೂ ಜವಾಬ್ದಾರಿ ಜಾಸ್ತಿಯಾಗಿದೆ. ಅದು ಸಂಪರ್ಕ ಭಾಷೆಯಾಗಿರದೆ ಹಣ ಗಳಿಸಿಕೊಡುವ ತಾಕತ್ತನ್ನು ಬೆಳೆಸಿಕೊಳ್ಳಬೇಕಾ ಎನ್ನುವ ಅನುಮಾನ-ಗಳು ಮೂಡಿವೆ. ಇದೊಂದೇ ಕಾರಣವಲ್ಲ ಇದರೊಂದಿಗೆ ಸರಕಾರದ ನಿರ್ಲಕ್ಷ್ಯ ಗುರುತಿಸ-ಬಹುದು. ೧೯೮೬ ರ ನಂತರ ಸರಕಾರ ಮಾಧ್ಯಮಿಕ ಶಾಲೆಗಳು, ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗೆ ಹೊರಡಿಸುತ್ತಿರುವ ಅಧಿಸೂಚನೆಗಳನ್ನು ಗಮನಿಸಿದರೆ ಸಂಸ್ಕೃತಕ್ಕೆ ಸರಕಾರ ಕೊಟ್ಟಿರುವ ಗೌರವ ತಿಳಿಯುತ್ತದೆ. ತಾಜಾ ಉದಾಹರಣೆ ಇಲ್ಲಿದೆ ನೋಡಿ; ೨೦೦೬ ರಲ್ಲಿ ಕೆಪಿಎಸ್‌ಸಿ ೧೦ ವಿಷಯಗಳಿಗೆ ಸಂಬಂಧಿಸಿದಂತೆ ೪೯೬ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿತ್ತು. ಅದರಲ್ಲಿ ಕನ್ನಡ ೭೦, ಇಂಗ್ಲೀಷ್ ೧೫೨, ಉರ್ದು ೧ ಹೀಗೆ ಮೀಸಲಿಟ್ಟಿತ್ತು. ಸಂಸ್ಕೃತ ಕಾಣೆಯಾಗಿತ್ತು. ಅದೇ ರೀತಿ ೨೦೦೭ ರಲ್ಲೂ ತನ್ನ ಆಯ್ಕೆ ಪಟ್ಟಿಯಲ್ಲಿ ಸಂಸ್ಕೃತವನ್ನು ನೂಕಾಚೆ ದೂರ ಅಂತ ದೂರ ಇಟ್ಟಿತ್ತು. ಕಾರಣ ಕೇಳುವವರು ಯಾರು? ಸಂಸ್ಕೃತ ಶಾಸ್ತ್ರೀಯ ಭಾಷೆ, ಪ್ರಾಚೀನ ಭಾಷೆ ಎಂಬ ಹೆಮ್ಮೆಯಿದೆ. ಇಂತಹ ಭಾಷಾ ರಕ್ಷಣೆಗೆ ಸರಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಹಕ್ಕಿಲ್ಲವೇ? ನಮ್ಮ ಪೂರ್ವಿಕರ ಇತಿಹಾಸವನ್ನು ತಿಳಿದುಕೊಳ್ಳಬೇಕಾದರೆ ಈ ಭಾಷೆಯ ನೆರವು ಬೇಕು. ಲಿಪಿ, ಶಾಸನಗಳನ್ನು ಗಣಕೀಕರಣ ಮಾಡುವ ಮಹೋದ್ದೇಶ್ಯವನ್ನು ಇಟ್ಟುಕೊಂಡಿರುವ ಸರಕಾರಕ್ಕೆ ಸಂಸ್ಕೃತ ಅಕ್ಷರಸ್ಥರ ನೆರವು ಬೇಕು. ಇಂದು ಆಯುರ್ವೇದ ಒಂದು ಪರಿಣಾಮ- ಕಾರಿಯುತ ವೈಜ್ಞಾನಿಕ ಪದ್ಧತಿ ಎಂದು ಎಲ್ಲರಿಗೂ ತಿಳಿದಿದೆ. ಇದರ ಸಂಪೂರ್ಣ ವಿವರ ಇರುವುದೆಲ್ಲಾ ಸಂಸ್ಕೃತದಲ್ಲೇ. ಇದು ವೈದ್ಯಯುಗದ ಎಲ್ಲ ಪ್ರಯತ್ನಗಳೂ ಬಹಳ ಹಿಂದೆಯೇ ನಡೆದಿತ್ತು ಎನ್ನುವುದರ ಅರಿವಿನ ಮಾಧ್ಯಮ ಈ ಸಂಸ್ಕೃತ ಭಾಷೆ. **ಆಯುರ್ವೇದ ಪೇಲವ ಎನಿಸಿದರೆ ಅದರ ಹಿಂದೆ ಆ ಶಾಸ್ತ್ರದ ಬಗೆಗಿನ ನಮ್ಮ ಅಜ್ಞಾನವೂ ಇದೆ.** ಶಾಸ್ತ್ರದ ಬಗ್ಗೆ ಸಂಪೂರ್ಣ ತಿಳುವಳಿಕೆ ಬೇಕಾದರೆ ಸಂಸ್ಕೃತದ ಅರಿವು ಬೇಕು. ಇದಕ್ಕೆ ಸಂಶೋಧನೆ ಅಗತ್ಯ ಕೂಡ. ಆದರೆ ಇಲ್ಲಿ ಭಾಷೆ ಬೆಳವಣಿಗೆ ಆಗದೇ ಇವೆಲ್ಲಾ ಹೇಗೆ ಸಾಧ್ಯ? ಸರಕಾರ ಈ ನಿಟ್ಟಿನಲ್ಲಿ ಭಾಷಾ ಉಳಿವಿಗೆ ಒಂದು ಅವಕಾಶ ಕೊಡಬಹುದಿತ್ತು.

ಈಗೇನು? ಸರಕಾರ ದಿವ್ಯ ನಿರ್ಲಕ್ಷ್ಯವಿದ್ದರೂ ಕೂಡ ಸಂಸ್ಕೃತ ಓದುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಧಾರವಾಡ, ಮೈಸೂರು, ಮಂಗಳೂರು, ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ನೂರಾರು ವಿದ್ಯಾರ್ಥಿ-ಗಳು ಸಂಸ್ಕೃತದಲ್ಲಿ ಸ್ನಾತಕೋತ್ತರ, ಎಂ.ಫಿಲ್., ಡಾಕ್ಟರೇಟ್ ಪದವಿಗಳನ್ನು ಪಡೆದು-



ಕೊಳ್ಳುತ್ತಿರುವುದು ನೆಮ್ಮದಿ ಸಂಗತಿ. ಇವರು ಒಂದು ಕಡೆ ಸಂಸ್ಕೃತ ಕಲಿಯುವ ಮೂಲಕ ಉಳಿಸುತ್ತಿದ್ದಾರೆ ಎಂದು ಹೆಮ್ಮೆಪಟ್ಟುಕೊಳ್ಳಬಹುದು. ಆದರೆ ಇದರಲ್ಲಿ ಎಷ್ಟೋ ಜನ ಖಾಲಿ ಕೈಯಲ್ಲಿ ಕುಳಿತಿದ್ದಾರೆ. ಇವರ ನಿರುದ್ಯೋಗ ಮುಂದಿನ ಪೀಳಿಗೆಗೆ ಸಂಸ್ಕೃತದ ಬಗ್ಗೆ ಅಸಡ್ಡೆಯನ್ನು ಮೂಡಿಸುವುದಂತೂ ದಿಟ.

''ಸಂಸ್ಕೃತ ಜೀವಂತವಾಗಿದೆ'' ಎನ್ನುವುದಕ್ಕೆ ತುಮಕೂರಿನ ಸಿದ್ಧಗಂಗಾ ಮಠ ಒಳ್ಳೆಯ ಉದಾಹರಣೆ. ಇಲ್ಲಿ ಪ್ರತಿವರ್ಷವೂ ೫ ಸಾವಿರದಿಂದ ೭ ಸಾವಿರದವರೆಗೆ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ.ವರೆಗೆ ಕಡ್ಡಾಯವಾಗಿ ಸಂಸ್ಕೃತವನ್ನು ಅಭ್ಯಸಿಸುತ್ತಾರೆ. ಇಲ್ಲಿ ಇಂತಹ ಶಿಸ್ತಿನ ಶಿಕ್ಷಣ ಪಡೆದವರು ನಾಡಿನ ಆಸ್ತಿಯಂತಾಗಿರುವುದು ಗೊತ್ತಿರುವ ವಿಚಾರ. ದುರಂತ ಎಂದರೆ ವಿದ್ಯಾಭ್ಯಾಸ ಮುಂದುವರೆಸಲು ಪದವಿಪೂರ್ವ ಶಿಕ್ಷಣಕ್ಕೆ ಶಿಕ್ಷಕರೇ ಇಲ್ಲ. ಇದರಿಂದ ಅಧ್ಯಯನದ ಉತ್ಸಾಹಕ್ಕೆ ತಣ್ಣೀರೆರಚಿದಂತೆ. ಸರಕಾರ ಇದಕ್ಕೆ ಕೊಡುವ ಕಾರಣ, ಅಗತ್ಯ ವಿದ್ಯಾರ್ಥಿಗಳಿಲ್ಲ, ಶಿಕ್ಷಕರಿಲ್ಲ. ಒಂದೇ - ಎರಡೇ. ಇನ್ನು ಕಷ್ಟಪಟ್ಟು ಸಂಸ್ಕೃತ ಅಕ್ಷರಸ್ಥರಾದವರ ಪಾಡು ಹೇಳತೀರದು.

ಉಪಾಧ್ಯಾಯರು ಅಲ್ಲೊಂದು, ಇಲ್ಲೊಂದು ಖಾಸಗೀ ಕಾಲೇಜುಗಳಲ್ಲಿ ೮೦೦, ೧೦೦೦, ೧೨೦೦, ೧೫೦೦ ರೂಪಾಯಿಗಳಿಗೆ ಬೋಧನೆ ಮಾಡುವ ಪರಿಪಾಠ ಇಟ್ಟುಕೊಂಡಿ-ದ್ದಾರೆ. ಇದನ್ನೇ ನಂಬಿ ಜೀವನ ನಡೆಸುವುದು ಕಷ್ಟ. ಫೀಜು ಜಾಸ್ತಿ ಎಂದು ಇಂಥ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಸರಕಾರಿ ಕಾಲೇಜುಗಳಲ್ಲಿ ಸಂಸ್ಕೃತ ಉಪನ್ಯಾಸಕರ ನೇಮಕಾತಿಯಿಲ್ಲ, ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಶಿಕ್ಷಕರೇ ಇಲ್ಲ ಎಂದಾದಲ್ಲಿ ಭಾಷೆ ಉಳಿಯುವುದಾದರೂ ಹೇಗೆ?

ದಿನಪತ್ರಿಕೆಗಳಲ್ಲಿ ಬರುವ ಸುಭಾಷಿತ, ಅಮರವಾಣಿ, ದಿನಚರಿಗಳನ್ನು ನೋಡಿದಾಗ ಮರುಭೂಮಿಯಲ್ಲಿ ಓಯಸಿಸ್ ಕಂಡಂತಾಗುತ್ತದೆ. ಶೃಂಗೇರಿ, ಮೇಲುಕೋಟೆ, ಸಂಸ್ಕೃತದ ಗ್ರಾಮ ಮದ್ದೂರು, ಇವೆಲ್ಲ ಕರ್ನಾಟಕದ ಹಿರಿಮೆಯನ್ನೇ ಎತ್ತಿಹಿಡಿದಿದೆ. ಸಂಸ್ಕೃತ ಭಾಷೆಯ ಮೂಲ ಬೇರುಗಳು ಜೀವಂತವಾಗಿರಲು ನೆರವಾಗಿವೆ. ಭಾರತೀಯ ಸಂವಿಧಾನದ ೨೯-೩೦ ನೇ ಪರಿಚ್ಛೇದಗಳು ಸಂವಿಧಾನಬದ್ಧವಾದ ಯಾವುದೇ ಭಾಷೆಯ ಅಧ್ಯಯನ ಮಾಡುವ ಹಕ್ಕನ್ನು ಭಾರತೀಯ ಪ್ರಜೆಗೆ ನೀಡಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಸಂಸ್ಕೃತ ಭಾರತೀಯ ಪ್ರಜೆಗೆ ನೀಡಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಸಂಸ್ಕೃತ ಭಾರತೀಯ ಸಂವಿಧಾನ-ದಿಂದ ಅಂಗೀಕೃತವಾದ ಭಾಷೆಯಾಗಿದ್ದು, ಇದನ್ನು ಸರಕಾರಿ ಶಾಲಾ-ಕಾಲೇಜುಗಳಲ್ಲಿ ಅಳವಡಿಸದಿರುವುದರಿಂದ ಅನೇಕ ವಿದ್ಯಾರ್ಥಿಗಳು ಮೂಲಭೂತ ಹಕ್ಕಿನಿಂದ ವಂಚಿತ-ರಾಗಿದ್ದಾರೆ.

ರಾಜ್ಯದಲ್ಲಿ ಸಂಸ್ಕೃತಕ್ಕೊಂದು ನಿರ್ದೇಶನಾಲಯವಿಲ್ಲ. ಸಲಹಾಮಂಡಳಿ ಇಲ್ಲ. ಅಧ್ಯಯನಕ್ಕೆ ಮುಂದಾದರೆ ಪಠ್ಯಪುಸ್ತಕಗಳು ಸಕಾಲದಲ್ಲಿ ಲಭ್ಯವಿಲ್ಲ. ಸಂಸ್ಕೃತ ಅಕಾಡೆಮಿ ಇಲ್ಲ. ಕಾಲೇಜುಗಳಲ್ಲಿ ಇದ್ದವರು ಸತ್ತರೆ, ವರ್ಗಾವಣೆಯಾದರೆ ವಿಭಾಗವನ್ನೇ ಮುಚ್ಚ-

ಲಾಗುತ್ತಿದೆ. ೧೫ ವರ್ಷದ ಹಿಂದೆ ಎಸ್.ಎಸ್.ಎಲ್.ಸಿ. ಗೆ ೮ ಲಕ್ಷ ೨೦ ಸಾವಿರವಿದ್ದ ಪ್ರಥಮ ಭಾಷಾ ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ ಇಂದು ೧೩,೫೦೦ ಕ್ಕೆ ಇಳಿದಿದೆ. ಪದವಿಪೂರ್ವ ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ ೧ ಲಕ್ಷದಿಂದ ೧೮ ಸಾವಿರಕ್ಕೆ ಇಳಿದಿದೆ. ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿನ ಸಂಸ್ಕೃತ ವಿದ್ಯಾರ್ಥಿಗಳ ಸಂಖ್ಯೆ ೮ ಸಾವಿರದಿಂದ ೩೦೦ ಕ್ಕೆ ಇಳಿದಿದೆ. ಹೊಸ ಕಾಲೇಜುಗಳ ಸ್ಥಾಪನೆಗೆ ಕೋಟ್ಯಂತರ ರೂಪಾಯಿ ಸುರಿಯುವ ಸರಕಾರಕ್ಕೆ ಸಂಸ್ಕೃತ ಕಣ್ಣಿಗೆ ಬಿದ್ದಿಲ್ಲ. ಇಷ್ಟು ದಿನ ರಾಜ್ಯದ, ಸಂಸ್ಕೃತಿಯ ಜತೆಯಲ್ಲಿ ಬದುಕಿರುವ ಈ ಭಾಷೆಗೆ ತೋರುವ ಗೌರವ ಇದೇನಾ ?

ಇಷ್ಟೆಲ್ಲಾ ಆತ್ಮಾವಲೋಕನ ಏಕೆಂದರೆ, ಕನ್ನಡದ ಈಗಿನ ಸ್ಥಿತಿ ನೋಡಿದರೆ ಮುಂದೆ ಒಂದು ದಿನ ಸಂಸ್ಕೃತದ ಹಾದಿ ಹಿಡಿದರೆ ಗತಿ ಏನು? ಕನ್ನಡ ಭಾಷೆಯ ಬೆಳವಣಿಗೆ ಹೆಜ್ಜೆಗಳನ್ನು ಗಮನಿಸಿದರೆ, ಅದನ್ನು ಉಳಿಸುವ ಮಾತುಗಳನ್ನು ಕೇಳುತ್ತಿದ್ದರೆ ಈ ಅನುಮಾನ ಹುಟ್ಟುತ್ತದೆ. **ಶಾಸ್ತ್ರೀಯ ಸ್ಥಾನಮಾನ ಬೇಕು ಎಂದು ಕೇಳಹೊರಟಿರುವ ನಾವು ಆ ಸ್ಥಾನದಲ್ಲಿರುವ ಸಂಸ್ಕೃತ ಭಾಷೆಯ ಅಸ್ಥಿತ್ವದ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ.**

ಕೃಪೆ : ಅರವಿಂದ ಶ್ಯಾನಭಾಗ, ವಿಜಯಕರ್ನಾಟಕ

## " ಇಂದಿನಿಂದ ನಾವು ಅನಾಥರಲ್ಲ ! "

**"ನಾವು ಮಂತ್ರಾಲಯದ ಸಮೀಪದಲ್ಲಿದ್ದರೂ ಎಷ್ಟೋ ಬಾರಿ ರಾಯರ ದರ್ಶನಕ್ಕೆ ಬಂದಿದ್ದೇವೆ. ದೂರದಲ್ಲೆಲ್ಲೋ ನಿಂತು ರಾಯರ ದರ್ಶನಗೈದು ಹಿಂತಿರುಗುತ್ತಿದ್ದ ನಾವು ದೂರದಿಂದಲೇ ಶ್ರೀಗಳವರನ್ನು ಕಂಡು ನಮಸ್ಕರಿಸುತ್ತಿದ್ದೆವು. ಆದರೆ ಇಂದು ಪರಮಪೂಜ್ಯರು ನಮ್ಮನ್ನು ಬಳಿಗೆ ಕರೆದು, ನಮ್ಮನ್ನು ಗುರುತಿಸಿ, ನಮಗೆ ವಿಶೇಷವಾದ ಪುರಸ್ಕಾರ ನೀಡಿ ಮಕ್ಕಳಿಗೆಲ್ಲಾ ಸಂತೋಷವಾಗುವಂತೆ ಮಾಡಿದ್ದಾರೆ. ಶ್ರೀಪಾದಂಗಳವರ ಸಮೀಪದಲ್ಲಿ ಕುಳಿತು ಸಮಾರಂಭದಲ್ಲಿ ಭಾಗವಹಿಸುವ ಭಾಗ್ಯ ಇಂದು ನಮ್ಮದಾಗಿದೆ. ಇಂದಿನಿಂದ ನಾವು ಅನಾಥರಲ್ಲ. ನಮ್ಮ ಸಂಸ್ಥೆಯ ಅನಾಥಮಕ್ಕಳಿಗೆ ಶ್ರೀಸುಶಮೀಂದ್ರತೀರ್ಥರು ದಾರಿದೀಪವಾಗಿದ್ದಾರೆ. ಗುರುಗಳ ಮತ್ತು ರಾಯರ ಆಶೀರ್ವಾದ ಸದಾಕಾಲವೂ ನಮ್ಮ ಮೇಲಿರಲಿ. ನಮ್ಮಂಥವರನ್ನು ಗುರುತಿಸಿ ಪ್ರೋತ್ಸಾಹಿಸುವ ಶ್ರೀಮಠದ ಈ ಕೆಲಸ ಶ್ಲಾಘನೀಯ"** ಎಂದು ಮಂತ್ರಾಲಯದಿಂದ ೧೮ ಕಿ.ಮೀ. ದೂರದಲ್ಲಿರುವ 'ಜ್ಯೋತಿ ಅನಾಥಾಶ್ರಮ'ದ ಮುಖ್ಯಸ್ಥರಾದ ಶ್ರೀಮತಿ ಮುತ್ತುಲಕ್ಷ್ಮಿಯವರು ಶ್ರೀಸುಶಮೀಂದ್ರತೀರ್ಥರ ಮತ್ತು ಶ್ರೀಸುಯತೀಂದ್ರತೀರ್ಥರ ಚಾತುರ್ಮಾಸ್ಯ ಸೀಮೋಲ್ಲಂಘನದ ಸಂದರ್ಭದಲ್ಲಿ ಶ್ರೀಪಾದಂಗಳವರಿಂದ ವಿದ್ಯಾಪುರಸ್ಕಾರ ಪ್ರಶಸ್ತಿಯನ್ನು ಸ್ವೀಕರಿಸಿದ ಸಂದರ್ಭದಲ್ಲಿ ನುಡಿದರು.





### ಭಾರತಪುಷ್ಪ - ೧

# ಮಹಾಭಾರತದಲ್ಲಿ ಭೀಷ್ಮರ ಸ್ಥಾನ

■ ವಿದ್ವಾನ್ ಶ್ರೀ ವಿ. ರಮೇಶಾಚಾರ್ಯ

'ಗೌತಮ ಕೃಪ', ಆಚಾರ್ಯ ಸ್ಟ್ರೀಟ್, ತುಮಕೂರು - ೫೭೨ ೧೦೧

**ಹಿಂದಿನ ಸಂಚಿಕೆಯಿಂದ.......**

ಸ್ವಯಂ ಶ್ರೀಕೃಷ್ಣನೇ ನಿನ್ನಂತಹ ಉಪದೇಶಕರು ಯಾರಿದ್ದಾರೆ? ದೇವತೆಗಳನ್ನೂ ಮೀರಿಸಿದ ಉಪದೇಷ್ಟ್ರು ನೀನು ಎಂದಿದ್ದಾನೆ. ನಿನ್ನಂತಹ ಧರ್ಮಸಂಶಯಗಳನ್ನು ಛೇದನಮಾಡುವ ಪುರುಷ ಇನ್ನೊಬ್ಬನಿಲ್ಲವೆಂದಿದ್ದಾನೆ. ನಿನ್ನಂತಹ ಸಂಪ್ರದಾಯ ತಿಳಿದವರು ಇನ್ನೊಬ್ಬರಿಲ್ಲ ಎಂದಿದ್ದಾನೆ. ದೇವತೆಗಳಿಗೂ ನೀನು ಉಪದೇಶ ಮಾಡಲು ಸಮರ್ಥನೆಂದಿದ್ದಾನೆ ಶ್ರೀಕೃಷ್ಣ.

**ಉಪದೇಷ್ಟುಂ ಭವಾನ್ ಶಕ್ತೋ ದೇವಾನಾಮಪಿ ಭಾರತ ।**
**ವೇದೋಕ್ತೋ ಯಚ್ಚ ಶಿಷ್ಟೋಕ್ತಃ ಸದೈವ ವಿದಿತಸ್ತವ ॥**

**ಇತಿಹಾಸ ಪುರಾಣಾರ್ಥಾಃ ಕಾರ್ತ್ಸ್ನ್ಯೇನ ವಿದಿತಾಸ್ತವ ।**
**ಧರ್ಮಶಾಸ್ತ್ರಂ ಚ ಸಕಲಂ ನಿತ್ಯಂ ಮನಸಿ ತೇ ಸ್ಥಿತಮ್ ॥**

**ಯೇ ಚ ಕೇಚನ ಲೋಕೇ ಅಸ್ಮಿನ್ನರ್ಥಾಃ ಸಂಶಯಕಾರಕಾಃ ।**
**ತೇಷಾಂ ಛೇತ್ತಾ ನಾಸ್ತಿ ಲೋಕೇ ತ್ವದನ್ಯಃ ಪುರುಷರ್ಷಭ ॥**

ಹೀಗೆ ಕೃಷ್ಣನಿಂದಲೇ ಹೊಗಳಿಸಿಕೊಂಡು ಉಪದೇಶ ಮಾಡಿದವರು ಆಚಾರ್ಯರಲ್ಲವೇ ?

### ಆಚಾರ್ಯ ತರ್ಪಣ

ಬ್ರಾಹ್ಮಣರು ಪ್ರತಿನಿತ್ಯ ದೇವ, ಋಷಿ, ಆಚಾರ್ಯ, ಪಿತೃತರ್ಪಣಗಳನ್ನು ಕೊಡುವವರಷ್ಟೇ. ಹೀಗೆ ಕೊಡುವ ತರ್ಪಣಗಳಲ್ಲಿ ಆಚಾರ್ಯತರ್ಪಣದ ಸ್ಥಾನದಲ್ಲೇ ಭೀಷ್ಮರಿಗೆ ತರ್ಪಣಕೊಡುವ ಶಿಷ್ಟಾಚಾರ ಅದ್ಯಾಪಿ ಸರ್ವಮಾನ್ಯವಾಗಿ, ಸರ್ವರಿಂದಲೂ ಪಾಲಿಸಲ್ಪಡುತ್ತಿದೆಯಲ್ಲವೆ ? ಭೀಷ್ಮಾಷ್ಟಮಿಯಂದು ಸರ್ವರೂ (ಯತಿಗಳೂ ಕೂಡ) ಆಚಾರ್ಯರ ಸ್ಥಾನದಲ್ಲಿ ತರ್ಪಣ ಕೊಡುತ್ತಿಲ್ಲವೆ ?

**ಜಾತಿಯಲ್ಲಿ ತಮಗಿಂತ ಕನಿಷ್ಠರಾದ ಕ್ಷತ್ರಿಯ ಭೀಷ್ಮನಿಗೆ ಜಾತಿಶ್ರೇಷ್ಠರಾದ ಬ್ರಾಹ್ಮಣರು ತರ್ಪಣ ಕೊಡಬೇಕೆಂಬ ನಿಯಮ ಪುರಾಣ, ಧರ್ಮಶಾಸ್ತ್ರಗಳಲ್ಲಿ ಏಕೆ ಬಂತು?** ಭೀಷ್ಮರನ್ನು ಬಿಟ್ಟು ಅನ್ಯ ಕ್ಷತ್ರಿಯರಿಗೆ ತರ್ಪಣ ಕೊಡುತ್ತಿರುವ ಪ್ರಸಂಗವಿದೆಯೇ? ನಾವೇ ಆಚಾರ್ಯ ಸ್ಥಾನದಲ್ಲಿ ತರ್ಪಣ ಕೊಡುತ್ತಾ, ಆಚಾರ್ಯರೆಂದು ಗೌರವಿಸುತ್ತಾ (ಪ್ರತ್ಯಕ್ಷವನ್ನು ಅಪಲಾಪ ಮಾಡಿ) ಭೀಷ್ಮರಿಗೆ 'ಆಚಾರ್ಯ'ರೆಂಬ ಪ್ರಯೋಗ ಅಜ್ಞರೂಢಿ ಎಂದು ಹೇಳುವುದು 'ನನ್ನ ತಾಯಿ ಬಂಜೆ' ಎಂದಂತೆ ಆಗುವುದಿಲ್ಲವೆ?

### ಭೀಷ್ಮರಿಗೂ ನಮಗೂ ಇರುವ ಸಂಬಂಧ?

ಮಹಾಭಾರತ ತಿಳಿಸಿದಂತೆ ಭೀಷ್ಮರು ಅಷ್ಟವಸುಗಳಲ್ಲಿ ಒಬ್ಬರಾದ 'ದ್ಯು'ನಾಮಕ ವಸುವು. ಅಂದರೆ ಆಚಾರ್ಯರ ಸಿದ್ಧಾಂತದಂತೆ ೧೭ ನೇ ಕಕ್ಷದಲ್ಲಿ ಬರುವ, ಭಕ್ತಿಯೋಗಿಗಳೆಂಬ ಉತ್ತಮ ದರ್ಜೆಯ ದೇವತಾಸ್ವರೂಪಿ. ಇಂತಹ ಉತ್ತಮ ಸ್ವರೂಪವುಳ್ಳ ಈ ದೇವತೆಗಳಿಗೆ ಮನುಷ್ಯರ ಸಾಧನೆ ಮಾಡಿಸುವ ಜವಾಬ್ದಾರಿಯ ಸ್ಥಾನವನ್ನು ಕೊಟ್ಟಿದ್ದಾನೆ. ವಸು, ರುದ್ರ, ಆದಿತ್ಯ ಈ ಮೂವರೂ ದೇವತೆಗಳು ನಮ್ಮ ಆಯುಸ್ಸಿನ ಒಂದೊಂದು ಭಾಗದಲ್ಲಿದ್ದು ಸಾಧನೆ ಮಾಡಿಸಿ ನಮ್ಮ ಆಯುಸ್ಸನ್ನು ಸಾರ್ಥಕಗೊಳಿಸುವ ನಿಯಾಮಕರಾಗಿದ್ದಾರೆ. ಇದನ್ನೇ ಹರಿಕಥಾಮೃತಸಾರದಲ್ಲಿ (ನಾಡೀಪ್ರಕರಣಸಂಧಿ) ''ಕವಿಗಳಿಂದಲಿ ತಿಳಿದು ಪ್ರಾತಃ ಸವನ ಮಾಧ್ಯಂದಿನವು ಸಾಯಮ ಸವನಗಳು ವಸು ರುದ್ರ ಆದಿತ್ಯರೊಳು ರಾಜಿಸುವ ಷೋಡಶೋತ್ತರ ಶತವರುಷದಲಿ ಷೋಡಶೋತ್ತರ ಶತಸುರೂಪದಿ ಕ್ರೀಡಿಸುವ ವಸು ರುದ್ರ ಆದಿತ್ಯರೊಳು ಸತಿಸಹಿತ'' ಎಂಬುದಾಗಿ ಮಾನವನ ೧೧೬ ವರ್ಷದ ಜೀವನವೇ ಒಂದು ಯಜ್ಞ. ಪ್ರಾತಃ ಸವನ (೨೪ ವರ್ಷ - ವಸು), ಮಾಧ್ಯಂದಿನ ಸವನ (೪೪ ವರ್ಷ - ರುದ್ರ), ಸಾಯಂ ಸವನ (೪೮ ವರ್ಷ - ಆದಿತ್ಯ)ವೆಂಬ ಜೀವನಯಜ್ಞದ ಮೂರು ಭಾಗಗಳಲ್ಲಿ ವಸು, ರುದ್ರ, ಆದಿತ್ಯರು ನಮ್ಮಲ್ಲಿ ನಿಂತು ಕರ್ಮಗಳನ್ನು ಮಾಡಿಸಿ ವಾಸುದೇವ, ಪ್ರದ್ಯುಮ್ನ, ಸಂಕರ್ಷಣ ರೂಪಗಳಲ್ಲಿ ಸಮರ್ಪಿಸುತ್ತಾರೆ ಎಂದಿದ್ದಾರೆ. ವಸುವಿಗೂ ನಮಗೂ ನಿತ್ಯಸಂಬಂಧ.

ಮೂಲರೂಪ ದೇವತಾರೂಪವಾದರೂ ಅವತಾರರೂಪ ಮನುಷ್ಯನಾದ್ದರಿಂದ (ಭೀಷ್ಮ) ಅಷ್ಟೇನೂ ಮಹತ್ವ ಕೊಡಬೇಕಿಲ್ಲ ಎನ್ನುವ ಹಾಗಿಲ್ಲ. ಏಕೆಂದರೆ, ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ **"ದೇವೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ಉತ್ತಮಾ ಇತಿ ವಿಜ್ಞೇಯಾಃ"** ದೇವತೆಗಳು,



ಮುನಿಗಳು, ದೇವತಾಸ್ತ್ರೀಯರು ಮನುಷ್ಯ ಅಥವಾ ಕಪಿಯೇ ಮುಂತಾದ ಯೋನಿ-ಗಳಲ್ಲಿ ಹುಟ್ಟಿದರೂ ಉತ್ತಮ ದೇವತೆಗಳೆಂದು ತಿಳಿಯಬೇಕೆಂದಿದ್ದಾರೆ. ಅಂದಮೇಲೆ ಮೂಲರೂಪ ನಮಗೆ ಸಂಬಂಧ ಇದೆ. ಅವತಾರರೂಪದಲ್ಲಿ ಸಂಬಂಧ ಇಲ್ಲವಾದ್ದರಿಂದ ಬೆಲೆ ಕೊಡಬೇಕಾಗಿಲ್ಲ ಎನ್ನುವ ಹಾಗಿಲ್ಲ, ಗೌರವಿಸಲೇಬೇಕಾಗುತ್ತದೆ.

ಶ್ರಾದ್ಧದಲ್ಲೂ ಕೂಡ ವಸು, ರುದ್ರ, ಆದಿತ್ಯರ ಮುಖಾಂತರವೇ ಪಿತೃ, ಪಿತಾಮಹ, ಪ್ರಪಿತಾಮಹರಿಗೆ ನಮ್ಮ ಪಾಲಿನ ಅವಶ್ಯ ಕರ್ತವ್ಯವಾದ ಶ್ರಾದ್ಧಾದಿ-ಗಳನ್ನು ಮಾಡಿ ಪಿತೃತೃಪ್ತಿಯ ಮುಖಾಂತರ ಪಿತೃ ಅಂತರ್ಯಾಮಿ ಜನಾರ್ದನನ ಪೂಜೆಯನ್ನು ಮಾಡುತ್ತಿದ್ದೇವೆ. ಇಂತಹ ಪಿತೃಗಳಿಗೂ ನಿಯಾಮಕರು ವಸುಗಳು. ವಸುಗಳ, ಪಿತೃಗಳ ಆಶೀರ್ವಾದ, ಅನುಗ್ರಹ ಇಲ್ಲದೆ ನಮಗೆ ಪುತ್ರ-ಪೌತ್ರಾದಿ ಸಂಪತ್ತಾಗಲಿ, ಐಶ್ವರ್ಯವಾಗಲೀ, ಜ್ಞಾನವಾಗಲಿ, ಭಗವಂತನ ಅನುಗ್ರಹವಾಗಲಿ ಇಲ್ಲ. ಆದ್ದರಿಂದ ಅವಶ್ಯ ಅವರ ಅನುಗ್ರಹಪಡೆಯಲೇಬೇಕಾಗಿದೆ. **ಇಂತಹ ನಿತ್ಯ ಸಂಬಂಧವುಳ್ಳ ಒಬ್ಬ ದೊಡ್ಡ ದೇವತೆಯಾದ, ವಸುಸ್ಥಾನದಲ್ಲಿರುವ ಭೀಷ್ಮರನ್ನು ಅವರ ಅರ್ಹತೆಗಿಂತ ನೀಚರನ್ನಾಗಿ, ಗುಣಾಧಮರನ್ನಾಗಿ ತಿಳಿದುಕೊಳ್ಳುವುದು ಮಹಾಪರಾಧವಾಗುತ್ತದೆ.** ಸ್ವೋತ್ತಮ ದ್ರೋಹದಲ್ಲಿ ಪರ್ಯವಸಾನವಾಗುತ್ತದೆ. ಆದ್ದರಿಂದ ಮಹಾಭಾರತದಲ್ಲಿ ಸೂಚಿಸಿದಂತೆ, ಶ್ರೀಕೃಷ್ಣ ತಿಳಿಸಿದಂತೆ ಭೀಷ್ಮರನ್ನು ಕುರುಕುಲಕ್ಕೆ ಪಿತಾಮಹರೆಂದಲ್ಲ, ಮನುಷ್ಯಕುಲಕ್ಕೇ ಪಿತಾಮಹರೆಂದೂ, ಜ್ಞಾನಸೂರ್ಯ-ರೆಂದೂ, ಸಕಲಧರ್ಮವೇತ್ತರೆಂದೂ, ಶಿಷ್ಯಸಂಪ್ರದಾಯ ಪ್ರವರ್ತಕರೆಂದೂ, ಅವರಿಂದಲೇ ಇಂದಿನ ಧರ್ಮ ಉಳಿದಿದೆಯೆಂದೂ, ನಮ್ಮಿಂದ ಆಚಾರ್ಯರೆಂದು ಗೌರವಿಸಿಕೊಳ್ಳಲಿಕ್ಕೆ ಅರ್ಹರೆಂದೂ, ಸದ್ಗುಣಭರಿತರೆಂದೂ, ಭೀಷ್ಮರ ಆಚಾರ, ವಿಚಾರಗಳು ನಮ್ಮಿಂದ ಅನುಸರಿಸಲಿಕ್ಕೆ ಯೋಗ್ಯಮಾರ್ಗವೆಂದೂ ನಂಬೋಣ. 'ಮಹಾಜನೋ ಯೇನ ಗತಾಃ ಸ ಪಥಾಃ' ಯಾವ ಭೀಷ್ಮರು ತೋರಿಸಿದ ಧರ್ಮ ಮಾರ್ಗದಲ್ಲಿ ಧರ್ಮರಾಜಾದಿಗಳು ಸಾಗಿದರೋ ಅದೇ ಸನಾತನ ಧರ್ಮ. ಅಂತಹ ಮಾರ್ಗದಲ್ಲಿ ನಾವೂ ಸಾಗೋಣ. ಜನ್ಮಸಾರ್ಥಕಪಡಿಸಿಕೊಳ್ಳೋಣ. ಭೀಷ್ಮರನ್ನು ಕರ್ತವ್ಯಭ್ರಷ್ಟರೆಂದಾಗಲೀ, ಧರ್ಮಭ್ರಷ್ಟರೆಂದಾಗಲೀ ಎಂದೆಂದೂ ತಿಳಿಯುವ ಸಾಹಸಕ್ಕೆ ಹೋಗದಿರೋಣ. **ಭೀಷ್ಮರೇ ತಿಳಿಸಿದಂತೆ ಅಪಕ್ವಜನಗಳು ತಮ್ಮ ಕೀರ್ತಿಗೋಸ್ಕರ ಧರ್ಮವನ್ನು ಪರಿಹಾಸ್ಯಮಾಡುವ, ಶಾಸ್ತ್ರಗಳಲ್ಲೇ ದೋಷವನ್ನು ಹುಡುಕುವವರ ಬುದ್ಧಿವುಳ್ಳವರಾಗಿರುತ್ತಾರೆ.** ಇಂತಹ ಮಹಾಭಾರತದಲ್ಲೇ ಶ್ರೀಕೃಷ್ಣ-ನಿಂದಲೇ, ಸರ್ವಜ್ಞರಾದ ಮಧ್ವರಿಂದಲೇ ಸದ್ಗುಣಭರಿತರೆಂದು ಕರೆಯಲ್ಪಟ್ಟ ಭೀಷ್ಮರಲ್ಲಿ ದೋಷ ಕಾಣುವ ಜನ ಇನ್ನು ಶ್ರೀಮಧ್ವರ ಶಾಸ್ತ್ರಗಳಲ್ಲಿ, ಶ್ರೀಮಧ್ವರ

ಅನುಗ್ರಹಕ್ಕೆ ಪಾತ್ರರಾದ ಶ್ರೀಜಯತೀರ್ಥರ, ಶ್ರೀವಾದಿರಾಜರ, ಶ್ರೀರಾಘವೇಂದ್ರಾದಿ ಮಹಾಜ್ಞಾನಿಗಳ ಗ್ರಂಥಗಳಲ್ಲಿ ದೋಷಗಳನ್ನು ಎಣಿಸುವುದು ಸೋಜಿಗವೇನಲ್ಲ. ಇಂತಹವರ ಕೃತಿ, ಮಾತು, ಉಪದೇಶಗಳಿಂದ ದೂರವಿರುವುದೇ ಸಾಧಕರ ಲಕ್ಷಣವಲ್ಲವೆ? ಅಂತಹವರು ವಿಚಾರಧಾರೆಗಳಲ್ಲಿ ಎಚ್ಚರಿಕೆ ವಹಿಸದೇ ಹೋದರೆ ಆತ್ಮನಾಶಕ್ಕೆ ಕಾರಣವಾದೀತು. ಅಂತಹ ಮಾರ್ಗದಲ್ಲಿ ಎಂದೂ ನಮ್ಮ ಬುದ್ಧಿ ಹೋಗದಿರುವಂತೆ ನಮ್ಮ ಬುದ್ಧಿಪ್ರಚೋದಕರಾದ ಶ್ರೀರಾಘವೇಂದ್ರರ, ಶ್ರೀವಾದಿರಾಜಾದಿ ಗುರುಗಳ ಅಂತರ್ಯಾಮಿಯಾದ ಶ್ರೀಮೂಲರಾಮಚಂದ್ರ, ಶ್ರೀಲಕ್ಷ್ಮೀಹಯಗ್ರೀವನನ್ನು ಪ್ರಾರ್ಥಿಸೋಣ.

(ಮುಗಿದುದು)

---

ಮುಂದೆ ನಿರೀಕ್ಷಿಸಿ : 'ಮಹಾಭಾರತದಲ್ಲಿ ದ್ರೋಣರು'.

## • ಶ್ರದ್ಧಾಂಜಲಿ •

ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದೊಂದಿಗೆ ಅನನ್ಯವಾದ ಬಾಂಧವ್ಯ-ವನ್ನು ಹೊಂದಿದ್ದ ಶ್ರೀಸೋದೆಮಠದ ಶ್ರೀವಿಶ್ವೋತ್ತಮತೀರ್ಥ ಶ್ರೀಪಾದರು ೭೦ ಸಂವತ್ಸರಗಳ ಸಾರ್ಥಕ ಸನ್ಯಾಸ ದೀಕ್ಷೆಯನ್ನು ಪೂರೈಸಿ ದಿನಾಂಕ ೧೮-೦೮-೨೦೦೭ ರ ಅಪರಾಹ್ನ ಸುಮಾರು ೧.೩೦ ಕ್ಕೆ ಈ ಇಹಲೋಕದ ವ್ಯಾಪಾರವನ್ನು ಮುಗಿಸಿ ನಮ್ಮನ್ನಗಲಿದರೆಂದು ತಿಳಿಸಲು ವಿಷಾದವೆನಿಸುತ್ತದೆ.

೧೯೩೪ ನೇ ಇಸವಿಯಲ್ಲಿ ಉದ್ಯಾವರದಲ್ಲಿ ಜನಿಸಿ ಚಿಕ್ಕ ವಯಸ್ಸಿನಿಂದಲೇ ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಂಡು ತಮ್ಮ ಒಂಭತ್ತನೇ ವಯಸ್ಸಿನಲ್ಲಿ ಸೋದೆ ವಾದಿರಾಜ ಮಠದ ಮೂವತ್ತೈದನೇ ಯತಿಗಳಾಗಿ ಸನ್ಯಾಸಾಶ್ರಮ ಸ್ವೀಕಾರ ಮಾಡಿ ಕಾಣಿಯೂರು ಮಠದ ಶ್ರೀವಿದ್ಯಾಸಮುದ್ರತೀರ್ಥರಿಂದ ಶಾಸ್ತ್ರಾಧ್ಯಯನವನ್ನು ಪೂರೈಸಿ, ಹದಿನಾಲ್ಕನೆಯ ವಯಸ್ಸಿ-ನಲ್ಲಿಯೇ ಪ್ರಥಮ ಪರ್ಯಾಯ ಪೀಠಾರೋಹಣವನ್ನು ಪೂರೈಸಿದ ಕೀರ್ತಿ ಇವರದು. ಒಟ್ಟು ನಾಲ್ಕು ಪರ್ಯಾಯಗಳನ್ನು ಪೂರೈಸಿ ಎಂದಿಗೂ ಸಂಪ್ರದಾಯ-ಪದ್ಧತಿಗಳಿಗೆ ವಿಚ್ಛಿತಿ ಬರದಂತೆ ಯತ್ಯಾಶ್ರಮವನ್ನು ಆಚರಿಸಿದ ಯತಿಶ್ರೇಷ್ಠರೆನ್ನಬಹುದು. ಶ್ರೀವಾದಿರಾಜರ ಭಾವೀ ಸಮೀರತ್ವದಲ್ಲಿ ಅಚಲವಾದ ನಂಬಿಕೆಯನ್ನಿಟ್ಟು ಎಂಥಾ ಪರಿಸ್ಥಿತಿ ಬಂದರೂ ಕುಗ್ಗದ ವ್ಯಕ್ತಿತ್ವವುಳ್ಳ ಧೀಮಂತರು. ಪ್ರಾಚೀನಾಚಾರ್ಯರ ಅನೇಕ ಗ್ರಂಥಗಳನ್ನು ಸಂರಕ್ಷಿಸಿ ಅವುಗಳ ಪ್ರಕಾಶನಗಳನ್ನು ಮಾಡಿ, ಸೋಂದಾ ಕ್ಷೇತ್ರವನ್ನು ವಿಶೇಷವಾಗಿ ಅಭಿವೃದ್ಧಿ-ಗೊಳಿಸಿದ ಕೀರ್ತಿ ಇವರದು. ದಿನಾಂಕ ೧೮ ರಂದು ಸೋದೆಯಲ್ಲಿ ನೆರೆದ ಭಕ್ತರಿಗೆಲ್ಲಾ ಮಂತ್ರಾಕ್ಷತೆಯನ್ನು ನೀಡಿ ''ರಾಮ ರಾಮ'' ಎಂದು ಸ್ಮರಣೆ ಮಾಡುತ್ತಾ ನಮ್ಮನ್ನಗಲಿದ ಶ್ರೀವಿಶ್ವೋತ್ತಮತೀರ್ಥಶ್ರೀಪಾದರಿಗೆ ಶ್ರೀಮಠವು ಭಾವಪೂರ್ಣ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

- ಸಂ.




## ಶ್ರೀಸರಸ್ವತೀ ಟೂರ್ಸ್ ಅಂಡ್ ಟ್ರಾವೆಲ್ಸ್

ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059. **ದೂ. 044-22390890**

**(೨೦೦೭ ಮತ್ತು ೨೦೦೮ ರಲ್ಲಿ ಚೆನ್ನೈನಲ್ಲಿರುವ ಅತ್ಯುತ್ತಮ ಯಾತ್ರಾ ಪ್ರವಾಸೋದ್ಯಮವೆಂದು ಪ್ರಶಸ್ತಿ ಪಡೆದಿದೆ)**

**ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2 ಕ್ಕೆ ಅವರ ವಾಸಸ್ಥಳದಿಂದ ಹೋಗಿ ಬರುವ ರೈಲ್ವೇ II Sitting Class Ticket ವೆಚ್ಚವೂ ಸೇರಿದೆ. ಶ್ರೀಬದರೀನಾರಾಯಣನ ಅನುಗ್ರಹದೊಂದಿಗೆ, 2007 ರಲ್ಲಿ ಕೆಳಗಿನ ತೀರ್ಥಯಾತ್ರಾ ಪ್ರವಾಸಗಳನ್ನು ಚೆನ್ನೈನಿಂದ ವ್ಯವಸ್ಥೆ ಮಾಡಲಾಗಿದೆ.**

**ಪ್ರವಾಸ 1 : ದಿನಾಂಕ 02-11-2007 ರಿಂದ 10 ದಿನಗಳು**

**ದೀಪಾವಳಿ ಸ್ಪೆಷಲ್ – ಕಾಶೀ / ಗಯಾ ಯಾತ್ರಾ – ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಅಲಹಾಬಾದ್, ಅಯೋಧ್ಯಾ, ವಾರಣಾಸಿ (ಕಾಶೀ), ಗಯಾ, ಪುರಿ, ಕೋನಾರ್ಕ್, ಭುವನೇಶ್ವರ್ ಮತ್ತು ಧವಳಗಿರಿ.

**ಪ್ರವಾಸ 2 : ದಿನಾಂಕ 28-11-2007 ರಿಂದ 15 ದಿನಗಳು**

**ನವದ್ವಾರಕಾ ಯಾತ್ರಾ ಒಬ್ಬರಿಗೆ ರೂ. 8,100/- ಸ್ಥಳಗಳು** : ಅಹಮದಾಬಾದ್, ಮೂಲದ್ವಾರಕ, ಗೋಮತಿದ್ವಾರಕ, ಭೇಟ್‌ದ್ವಾರಕ, ಹರಿಸಿದ್ಧಿಮಾತ, ಪೋರಬಂದರ್, ಸೋಮನಾಥ, ಮಾತೃಗಯಾ, ಪುಷ್ಕರ, ಅಂಬಾಜಿ, ಉದಯಪುರ, ಶ್ರೀನಾಥದ್ವಾರಕ, ಕಂಗ್ರೋಲಿದ್ವಾರಕ.

ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆಯ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಛಾರ್ಜ್ ಮತ್ತು ಬಸ್ ಛಾರ್ಜು ಸ್ಥಳೀಯ ವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ ಕಾಫಿ / ಟೀ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

**ಆರ್. ಪ್ರಸಾದ್/ಆರ್. ಪ್ರಭಾಕರ್**, ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059 **ದೂ. 044-22390890, ಮೊಬೈಲ್ : 94440-87901 -- ಎ. ಭೀಮರಾವ್**, ನಂ. 10/10, 19ನೇ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 085, **ದೂ. 080-26729528 -- ಡಿ.ಆರ್. ರಾವ್**, 'ಘಟಿಕಾಚಲ', ಪ್ಲಾಟ್ ನಂ. 34, ಶಂಕರ್ ಕಾಲೋನಿ, 1ನೇ ಅಡ್ಡರಸ್ತೆ, ಬಳ್ಳಾರಿ - 583 101, **ದೂ. 08392-274107 -- ಎ. ಮುರಳೀಧರ ರಾವ್**, ಆಲೂರ್ ನಿವಾಸ್, ಅಸುಂಡಿ ಕಾಂಪೌಡ್, ಸ್ಟೇಷನ್ ರಸ್ತೆ, ಹೊಸಪೇಟೆ - 583 201, **ದೂ. 08394-224312**


## ವಿಳಾಸ ಬದಲಾವಣೆಗಾಗಿ ನೂತನ ಎಸ್.ಎಂ.ಎಸ್.

**ಈ ಕೆಳಕಂಡ ಸಂಖ್ಯೆಯು ಮಂತ್ರಾಲಯದ ಮಾಸಪತ್ರಿಕೆಯ ವಿತರಣಾ ವಿಭಾಗದ್ದಾಗಿದ್ದು, ವಿಳಾಸ ಬದಲಾವಣೆಗಾಗಿ, ಸಂಚಿಕೆ ತಲುಪದಿದ್ದಲ್ಲಿ ಮತ್ತು ಸೇವೆಗಳ ಬಗ್ಗೆ, ವಸತಿ ವ್ಯವಸ್ಥೆಗಳ ಬಗ್ಗೆ ಈ ಸಂಖ್ಯೆಗೆ ಎಸ್.ಎಂ.ಎಸ್. ಗಳನ್ನು ಕಳುಹಿಸಿದಲ್ಲಿ ಶೀಘ್ರವಾಗಿ ನಿಮ್ಮ ಹೊಸ ವಿಳಾಸಕ್ಕೆ ಮಾಸಪತ್ರಿಕೆಗಳು ತಲುಪುವುವು ಮತ್ತು ತಮಗೆ ಬೇಕಾದ ಮಾಹಿತಿಗಳು ಸಿಗುವುವು. ಸದಸ್ಯರ, ಭಕ್ತರ ಉಪಯೋಗಕ್ಕಾಗಿ ಈ ನೂತನ ವ್ಯವಸ್ಥೆ. ಇದನ್ನು ಸದುಪಯೋಗಿಸಿಕೊಳ್ಳಿ.**

**S.K. PRANESH — 099857-03033**

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ
ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.
ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ
ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.
ವಿಳಾಸಗಳು ಮುಖಪುಟದಲ್ಲಿವೆ.

ಲೇಖನಾಂಕ

# ಶ್ರೀಮನ್ಮಹಾಭಾರತ ನಿರೂಪಿಸಿದ ಧರ್ಮರಹಸ್ಯಗಳು

## ಲೇಖನಾಂಕ - 2

■ ಶ್ರೀ ಶ್ರೀನಿವಾಸ ಸು. ಮಠದ
'ಶ್ರೀಶ ನಿಲಯ', ಅಜರೇಕರ ಚಾಳ, ಮೀನಾಕ್ಷಿ ಚೌಕ, ವಿಜಾಪುರ - ೫೮೬ ೧೦೧

**ಹವ್ಯವಾಹಸ್ಯ ದೀಪ್ತಸ್ಯ ಸಮಿಧಂ ಯೇ ನ ಜುಹ್ವತಿ ।**
**ಅಗ್ನಿಕಾರ್ಯೇಷು ವೈತೇಷಾಂ ಹವ್ಯಂ ನಾಶ್ನಾತಿ ಪಾವಕಃ ॥** - ಅನುಶಾಸನಪರ್ವ

ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಯಾರು ಸಮಿತ್ತನ್ನು ಹೋಮ ಮಾಡುವುದಿಲ್ಲವೋ, ಅವರು ಮಾಡುವ ಅಗ್ನಿಕಾರ್ಯಗಳಲ್ಲಿ ಯಜ್ಞೇಶ್ವರನು ಹವಿಸ್ಸನ್ನು ಸ್ವೀಕರಿಸುವುದಿಲ್ಲ.

**ಕ್ಷೀರಂ ತು ಬಾಲವತ್ಸಾನಾಂ ಯೇ ಪಿಬಂತೀಹ ಮಾನವಾಃ ।**
**ನ ತೇಷಾಂ ಕ್ಷೀರಪಾಃ ಕೇಚಿಜ್ಜಾಯಂತೇ ಕುಲವರ್ಧನಾಃ ॥**
**ಪ್ರಜಾಕ್ಷಯೇಣ ಯುಜ್ಯಂತೇ ಕುಲವಂಶಕ್ಷಯೇಣ ಚ ॥** - ಅನುಶಾಸನಪರ್ವ

ಯಾವ ಮನುಷ್ಯರು ಎಳಗಂದಿಯ ಹಾಲನ್ನು ಕುಡಿಯುವರೋ, ಅವರಿಗೆ ಹಾಲನ್ನು ಕುಡಿಯುವ ವಂಶವರ್ಧಕರಾದ ಮಕ್ಕಳು ಹುಟ್ಟುವುದಿಲ್ಲ. ಅವರ ಸಂತಾನವು ನಷ್ಟವಾಗುತ್ತದೆ. ಕುಲವೂ ಕ್ಷಯಿಸುತ್ತದೆ. ಆತ್ಮಕಲ್ಯಾಣವನ್ನು ಬಯಸುವ ಮಾನವನು ಶಾಸ್ತ್ರದಲ್ಲಿ ನಿಷೇಧಿಸಿರುವುದನ್ನು ಪರಿತ್ಯಜಿಸಬೇಕು. ಶಾಸ್ತ್ರಸಮ್ಮತ ಕಾರ್ಯಗಳನ್ನು ಮಾಡುತ್ತಿರಬೇಕು.

**ನೀಲಷಂಡ ಪ್ರಮೋಕ್ಷೇಣ ಅಮಾವಾಸ್ಯಾಂ ತಿಲೋದಕೈಃ ।**
**ವರ್ಷಾನುದೀಪಕೈಶ್ಚೈವ ಪಿತೃಣಾಮನೃಣೋ ಭವೇತ್ ॥** - ಅನುಶಾಸನಪರ್ವ

ಕಪ್ಪುಬಣ್ಣದ ಹೋರಿಯನ್ನು ಬಿಡುವುದರಿಂದಲೂ (ವೃಷೋತ್ಸರ್ಗ), ಅಮಾವಾಸ್ಯೆಯಲ್ಲಿ ತಿಲಮಿಶ್ರಿತ ನೀರಿನಿಂದ ತರ್ಪಣಮಾಡುವುದರಿಂದಲೂ, ವರ್ಷಋತುವಿನಲ್ಲಿ ಪಿತೃಗಳ ಪ್ರೀತ್ಯರ್ಥವಾಗಿ ದೀಪದಾನಮಾಡುವುದರಿಂದಲೂ, ಮನುಷ್ಯನು ಪಿತೃಋಣದಿಂದ ಮುಕ್ತನಾಗುತ್ತಾನೆ.

**ಅಕ್ಷಯಂ ನಿರ್ವ್ಯಲೀಕಂ ಚ ದಾನಮೇತನ್ಮಹಾಫಲಮ್ ।**
**ಅಸ್ಮಾಕಂ ಪರಿತೋಷಶ್ಚ ಅಕ್ಷಯಃ ಪರಿಕೀರ್ತ್ಯತೇ ॥** - ಅನುಶಾಸನಪರ್ವ

ನಿಷ್ಕಪಟಭಾವದಿಂದ ಮಾಡುವ ದಾನವು ಅಕ್ಷಯವಾದ ಮಹಾಫಲವನ್ನು ಕೊಡುತ್ತದೆ. ಇದರಿಂದ ನಮಗೂ ಅಕ್ಷಯವಾದ ತೃಪ್ತಿಯೇ ಉಂಟಾಗುತ್ತದೆ.



**ಶ್ರದ್ಧಧಾನಾಶ್ಚ ಯೇ ಮರ್ತ್ಯಾ ಆಹರಿಷ್ಯಂತಿ ಸಂತತಿಮ್ ।**
**ದುರ್ಗಾತ್ತೇ ತಾರಯಿಷ್ಯಂತಿ ನರಕಾತ್ ಪ್ರಪಿತಾಮಹಾನ್ ॥** - ಅನುಶಾಸನಪರ್ವ

ಯಾವ ಮನುಷ್ಯರು ಶಾಸ್ತ್ರವಾಕ್ಯಗಳಲ್ಲಿ ಶ್ರದ್ಧೆಯನ್ನಿಟ್ಟು ಒಳ್ಳೆಯ ಸಂತಾನವನ್ನು ಪಡೆದುಕೊಳ್ಳುವರೋ, ಅವರು ತಮ್ಮ ಪ್ರಪಿತಾಮಹರನ್ನು ಅತಿದುಃಖಕರವಾದ ನರಕದಿಂದ ಉದ್ಧರಿಸುತ್ತಾರೆ.

**ವರ್ಷಾಸು ದೀಪದಾನೇನ ಶಶಿವತ್ ಶೋಭತೇ ನರಃ ।**
**ತಮೋರೂಪಂ ನ ತಸ್ಯಾಸ್ತಿ ದೀಪಕಂ ಯಃ ಪ್ರಯಚ್ಛತಿ ॥** - ಅನುಶಾಸನಪರ್ವ

ವರ್ಷಋತುವಿನಲ್ಲಿ ದೀಪದಾನಮಾಡುವ ಮನುಷ್ಯನು ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದುತ್ತಾನೆ. ದೀಪದಾನಿಗೆ ತಮೋರೂಪ ನರಕದ ಬಾಧೆ ಇಲ್ಲ.

**ಅಮಾವಾಸ್ಯಾಂ ತು ಯೇ ಮರ್ತ್ಯಾಃ ಪ್ರಯಚ್ಛಂತಿ ತಿಲೋದಕಮ್ ।**
**ಪಾತ್ರಮೌದುಂಬರಂ ಗೃಹ್ಯ ಮಧುಮಿಶ್ರಂ ತಪೋಧನ ।**
**ಕೃತಂ ಭವತಿ ವೈ ಶ್ರಾದ್ಧಂ ಸರಹಸ್ಯಂ ಯಥಾರ್ಥವತ್ ॥** - ಅನುಶಾಸನಪರ್ವ

ಅಮಾವಾಸ್ಯೆ ದಿನದಂದು ಯಾವ ಮನುಷ್ಯರು ತಾಮ್ರದ ತಟ್ಟೆಯನ್ನು ಹಿಡಿದುಕೊಂಡು ಅದರಲ್ಲಿ ಜೇನುತುಪ್ಪದಿಂದ ಮಿಶ್ರವಾದ ತಿಲೋದಕವನ್ನು ಪಿತೃಗಳ ತೃಪ್ತಿಗಾಗಿ ತರ್ಪಣ ಕೊಡುವರೋ ಅವರು ರಹಸ್ಯಯುಕ್ತವಾದ ಶ್ರಾದ್ಧವನ್ನು ಯಥಾವತ್ತಾಗಿ ಮಾಡಿದವನಾಗುತ್ತಾರೆ. ಇದರಿಂದ ಮನುಷ್ಯರು ಪಿತೃಋಣದಿಂದ ಮುಕ್ತರಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

**(ಮುಂದುವರೆಯುವುದು)**

## ವರನು ಬೇಕಾಗಿದ್ದಾನೆ

ಮೌನಭಾರ್ಗವ ಗೋತ್ರದ ಪೂರ್ವಾ ನಕ್ಷತ್ರದ 21 ವರ್ಷ ವಯಸ್ಸಿನ 5' 4" ಎತ್ತರವುಳ್ಳ ಬಿ.ಎಸ್ಸಿ. ಪದವೀಧರೆಯಾದ ಸುಸಂಸ್ಕೃತ ಮಾಧ್ವ ಕನ್ಯೆಗೆ ಸೂಕ್ತನಾದ ಉನ್ನತ ಪದವೀಧರನಾಗಿ ಒಳ್ಳೆಯ ಉದ್ಯೋಗದಲ್ಲಿರುವ ವರನು ಬೇಕಾಗಿದ್ದಾನೆ.

ಸಂಪರ್ಕಿಸಿ

**ಎಂ. ಎಸ್. ಕುಲಕರ್ಣಿ**

ಬಿಜಾಪುರ

Ph : 08352-259988, Mob. : 94498-52988, 94486-44188

# ಜ್ಞಾನಿ-ಕರ್ಮಿಗಳ ಮಾರ್ಗದರ್ಶನ

■ ಬಿ. ಭಾಸ್ಕರ
ಸುಧಾ ವಿದ್ಯಾರ್ಥಿ, ಶ್ರೀಗುರುಸಾರ್ವಭೌಮ ವಿದ್ಯಾಪೀಠ, ಮಂತ್ರಾಲಯ

ಅಪರೋಕ್ಷಜ್ಞಾನಿಗಳು ಚರಮ ಶರೀರದಿಂದ ಉತ್ಕ್ರಮಣ ಹೊಂದಿದ ಮೇಲೆ ಕೇವಲ ಲಿಂಗಶರೀರಯುಕ್ತರಾಗಿ ಸತ್ಯಲೋಕದಲ್ಲಿ ಅಥವಾ ವೈಕುಂಠದ ಅಮುಕ್ತ ಸ್ಥಾನದಲ್ಲಿ ಬ್ರಹ್ಮಪ್ರಳಯ ಪರ್ಯಂತ ವಾಸಮಾಡುತ್ತಾ ಪ್ರಾರಬ್ಧ ಸುಖವನ್ನು ಅನುಭವಿಸುತ್ತಾರೆ. ಅದಕ್ಕಾಗಿ ಶರೀರದಿಂದ ಉತ್ಕ್ರಮಣವಾದೊಡನೆ ದೇವಯಾನ ಮಾರ್ಗದಿಂದ ಹೋಗುತ್ತಾರೆ.

ಅಜ್ಞಾನಿಗಳು ಕಾಮ್ಯಕರ್ಮಮಾಡಿ ಆ ಕರ್ಮದ ಫಲವಾಗಿ ಮರಣಾನಂತರ ಪುಣ್ಯಲೋಕಗಳಿಗೆ ಹೋಗುತ್ತಾರೆ. ಅದಕ್ಕೆ ಇರುವ ಮಾರ್ಗವು ಪಿತೃಯಾನವೆನಿಸುತ್ತದೆ. ಪಿತೃಯಾನ ಮಾರ್ಗದಿಂದ ಚಂದ್ರಲೋಕಕ್ಕೆ ಹೋಗಿ, ಬೇರೆ ಪುಣ್ಯಲೋಕಗಳಲ್ಲಿ ಸುಖವನ್ನು ಅನುಭವಿಸಿ ಪುಣ್ಯ ತೀರಿದ ಮೇಲೆ ಭೂಮಿಯಲ್ಲಿ ಜನ್ಮ ತಾಳುತ್ತಾರೆ. ಈ ದೇವಯಾನ, ಪಿತೃಯಾನ ಮಾರ್ಗಗಳು ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆಗಳಲ್ಲಿ ಉಕ್ತವಾಗಿವೆ.

**ದ್ವಾವೇವ ಮಾರ್ಗೌ ಪ್ರಥಿತಾವರ್ಚಿರಾದಿರ್ವಿಪಶ್ಚಿತಾಮ್ ।**
**ಧೂಮಾದಿಃ ಕರ್ಮಿಣಾಂ ಚೈವ ಸರ್ವವೇದವಿನಿರ್ಣಯಾತ್ ॥**

ಎಂಬ ಪ್ರಮಾಣದಂತೆ ಜ್ಞಾನಿಗಳಿಗೆ ಅರ್ಚಿರಾದಿಮಾರ್ಗ, ಕರ್ಮಯೋಗಿಗಳಿಗೆ ಧೂಮಾದಿ ಮಾರ್ಗಗಳೆಂದು ಪ್ರಸಿದ್ಧವಾಗಿವೆ. ಬ್ರಹ್ಮಜ್ಞಾನಿಗಳು ಭಗವಂತನಾದ ನಾರಾಯಣನನ್ನು ಹೊಂದಲು ಪ್ರಯಾಣಮಾಡುವ ಅರ್ಚಿರಾದಿಮಾರ್ಗವನ್ನು ದೇವಯಾನವೆಂದು, ಶುಕ್ಲಮಾರ್ಗವೆಂದೂ ಕರೆಯುತ್ತಾರೆ. ಈ ಅರ್ಚಿರಾದಿಮಾರ್ಗದ ವಿಷಯವನ್ನು ಶ್ರೀವೇದವ್ಯಾಸರು ಸ್ಪಷ್ಟವಾಗಿ ಹೇಳಿದ್ದಾರೆ.

**ಉತ್ಕ್ರಾಂತಸ್ತು ಶರೀರಾತ್ಸ್ವದ್ಗಚ್ಛತ್ಯರ್ಚಿಷಮೇವ ತು ।**
**ತತೋ ಹಿ ವಾಯೋಃ ಪುತ್ರಂ ಚ ಯೋಽಸೌ ನಾಮ್ನಾತಿವಾಹಿಕಃ ॥**

**ತತೋಽಹಃ ಪೂರ್ವಪಕ್ಷಂ ಚಾಪ್ಯುದಕ್ಸಂವತ್ಸರಂ ತಥಾ ।**
**ತಟಿತಂ ವರುಣಂ ಚೈವ ಪ್ರಜಾಪಂ ಸೂರ್ಯಮೇವ ಚ ॥**



**ಸೋಮಂ ವೈಶ್ವಾನರಂ ಚೇಂದ್ರಂ ಧ್ರುವಂ ದೇವೀದಿವಂ ತಥಾ ।**
**ತತೋ ವಾಯುಂ ಪರಂ ಪ್ರಾಪ್ಯ ತೇನೈತಿ ಪುರುಷೋತ್ತಮಮ್ ॥**

- ಬ್ರಹ್ಮತರ್ಕ

ಬ್ರಹ್ಮರಂಧ್ರದಿಂದ ದೇಹತ್ಯಾಗ ಮಾಡಿದ ಜ್ಞಾನಿಯು ಮೊದಲು ಅರ್ಚಿಷ ಲೋಕಕ್ಕೆ ಹೋಗುತ್ತಾನೆ. ಅಲ್ಲಿಂದ ವಾಯುವಿನ ಮಗನಾದ ಆತಿವಾಹಿಕನ ಲೋಕ, ಹಗಲು ಅಭಿಮಾನಿದೇವತೆಯ ಲೋಕ, ಶುಕ್ಲಪಕ್ಷಾಭಿಮಾನಿದೇವತೆಯ ಲೋಕ, ಉತ್ತರಾಯಣ ಅಭಿಮಾನಿದೇವತೆ ಲೋಕ, ಸಂವತ್ಸರಾಭಿಮಾನಿದೇವತೆಯ ಲೋಕ, ಮಿಂಚು ಅಭಿಮಾನಿ ದೇವತೆಯ ಲೋಕ, ವರುಣಲೋಕ, ದಕ್ಷಪ್ರಜಾಪತಿ ಲೋಕ, ಸೂರ್ಯಲೋಕ, ಚಂದ್ರಲೋಕ, ವೈಶ್ವಾನರ ಲೋಕ, ಇಂದ್ರಲೋಕ, ಧ್ರುವಲೋಕ, ಭಾರತೀದೇವಿಲೋಕ, ಮುಖ್ಯಪ್ರಾಣಲೋಕಗಳನ್ನು ಹೊಂದಿ ಆ ಮುಖ್ಯಪ್ರಾಣನ ದ್ವಾರಾ ಭಗವಂತನನ್ನು ಹೊಂದುತ್ತಾನೆ ಎಂದು ಹೇಳಿದೆ.

ಆದರೆ ಇಲ್ಲಿ ಮತಭೇದವಿದೆ.

ಬಾದರಾಯಣರು ಹೀಗೆ ಹೇಳುತ್ತಾರೆ - ''ಬ್ರಹ್ಮಜ್ಞಾನಿಗಳು ಅರ್ಚಿರಾದಿ ಮಾರ್ಗದಿಂದ ಹೋಗಿ ಮುಖ್ಯಪ್ರಾಣನ ದ್ವಾರಾ ಚತುರ್ಮುಖ ಬ್ರಹ್ಮನನ್ನು ಹೊಂದಿ ಪ್ರಳಯಕಾಲದಲ್ಲಿ ಭಗವಂತನನ್ನು ಸೇರುತ್ತಾರೆ'' ಎಂದು.

ಏಕೆಂದರೆ, ಹಾಗೇ ಶ್ರುತಿ-ಸ್ಮೃತಿಗಳು ಇರುತ್ತವೆ.

''ಸ ಏನಾನ್ ಬ್ರಹ್ಮ ಗಮಯತಿ'' ಮುಖ್ಯಪ್ರಾಣನು ಜ್ಞಾನಿಗಳನ್ನು ಚತುರ್ಮುಖ ಬ್ರಹ್ಮನ ಸಮೀಪದಲ್ಲಿ ಸೇರಿಸುತ್ತಾನೆ ಎಂದು ''ಛಾಂದೋಗ್ಯ ಶ್ರುತಿ''ಯು ಹೇಳುತ್ತದೆ.

''ತೇಹ ಬ್ರಹ್ಮಾಣಮಭಿಸಂಪದ್ಯ ಯದ್ಯೈತದ್ವಿಲೀಯತೇಽಥ ಸಹ ಬ್ರಹ್ಮಣಾ ಪರಮಭಿಗಚ್ಛಂತಿ'' ಮಹಾಪ್ರಳಯದಲ್ಲಿ ಜ್ಞಾನಿಗಳು ಚತುರ್ಮುಖ ಬ್ರಹ್ಮನಿಂದ ಸಹಿತರಾಗಿ ಪರಬ್ರಹ್ಮನಾದ ನಾರಾಯಣನನ್ನು ಹೊಂದುತ್ತಾರೆ. ಹೀಗೆ ಸೌಪರ್ಣ ಶ್ರುತಿಯು ತಿಳಿಸುತ್ತದೆ.

**ಬ್ರಹ್ಮಣಾ ಸಹತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ ।**
**ಪರಸ್ಯಾಂತೇ ಪರಾತ್ಮಾನಃ ಪ್ರವಿಶಂತಿ ಪರಂ ಪದಮ್ ॥**

ಹೀಗೆ ಸ್ಮೃತಿಯೂ ಇದೆ. ಆದ್ದರಿಂದ ಬ್ರಹ್ಮಜ್ಞಾನಿಗಳು ಚತುರ್ಮುಖ ಬ್ರಹ್ಮನನ್ನು ಹೊಂದಿ ಭಗವಂತನ ಪ್ರಾಪ್ತಿರೂಪವಾದ ಮೋಕ್ಷವನ್ನು ಹೊಂದುತ್ತಾರೆ ಎಂದು ಬಾದರಾಯಣರ ಮತವು.

ಆದರೆ ಜೈಮಿನೀ ಆಚಾರ್ಯರು ''ಸ ಏನಾನ್ ಬ್ರಹ್ಮಗಮಯತಿ'' ಎಂಬ ಶ್ರುತಿಯಲ್ಲಿ ಬ್ರಹ್ಮಪದಕ್ಕೆ ಮುಖ್ಯಾರ್ಥನಾದ ಭಗವಂತನನ್ನು ಬಿಟ್ಟು ಚತುರ್ಮುಖ ಬ್ರಹ್ಮನೆಂದು ಅರ್ಥಮಾಡಬಾರದು ಎನ್ನುತ್ತಾರೆ. ಏಕೆಂದರೆ,

**ಯದುಪಾಸ್ತೇ ಪುಮಾಂ ಜೀವನ್ ಯತ್ಪ್ರಾಪ್ತುಮಭಿವಾಂಛತಿ ।**
**ಯಚ್ಚ ಪಶ್ಯತಿ ತೃಪ್ತಃಸನ್ ತತ್ಪ್ರಾಪ್ನೋತಿ ಮೃತೇರನು ॥** - ಪದ್ಮಪುರಾಣ

ಹೀಗೆ ಪ್ರಮಾಣವಿರುವುದರಿಂದ ಜ್ಞಾನಿಗಳನ್ನು ವಾಯುದೇವರೇ ಭಗವಂತನಲ್ಲಿ ಸೇರಿಸುತ್ತಾರೆ ಎಂದು ಹೇಳುತ್ತಾರೆ.

''ಈ ಎರಡು ಮತಗಳು ಅಧಿಕಾರಿ ಭೇದದಿಂದ ಸರಿಯಾದವುಗಳೇ'' ಎಂಬುದನ್ನು ಶ್ರೀವೇದವ್ಯಾಸರು ಸಿದ್ಧಾಂತಿಸುತ್ತಾರೆ.

**ಪ್ರತೀಕಂ ದೇಹ ಉದ್ದಿಷ್ಟೋ ಯೇಷಾಂ ತತ್ರೈವ ದರ್ಶನಮ್ ।**
**ನ ತು ವ್ಯಾಪ್ತತಯಾ ಕ್ವಾಪಿ ಪ್ರತೀಕಾಲಂಬನಾಸ್ತು ತೇ ॥** - ಗರುಡಪುರಾಣ

**ಅಪ್ರತೀಕಾ ದೇವತಾಸ್ತು ಋಷೀಣಾಂ ಶತಮೇವ ಚ ।**
**ರಾಜ್ಞಾಂ ಚ ಶತಮುದ್ದಿಷ್ಟಂ ಗಂಧರ್ವಾಣಾಂ ಶತಂ ತಥಾ ॥**

**ಏತೇ ಅಧಿಕಾರಿಣೋ ವ್ಯಾಪ್ತದರ್ಶಿನೋಽನ್ಯೇ ನ ತು ಕ್ವಚಿತ್ ।**
**ಅಪ್ರತೀಕಾಶ್ರಯಾ ಯೇ ಹಿ ತೇ ಯಾಂತಿ ಪರಮೇವ ತು ॥**

**ಸ್ವದೇಹೇ ಬ್ರಹ್ಮದೃಷ್ಟ್ಯೈವ ಗಚ್ಛೇದ್ಬ್ರಹ್ಮ ಸಲೋಕತಾಮ್ ।**
**ಬ್ರಹ್ಮಣಾ ಸಹ ಸಂಪ್ರಾಪ್ತೇ ಸಂಹಾರೇ ಪರಮಂ ಪದಮ್ ॥**

ಬ್ರಹ್ಮಜ್ಞಾನಿಗಳು ಪ್ರತೀಕಾಲಂಬನರು, ಅಪ್ರತೀಕಾಲಂಬನರು ಎಂದು ಎರಡು ವಿಧ. ಅಪ್ರತೀಕಾಲಂಬನರೆಂದರೆ ಸರ್ವತ್ರ ಭಗವಂತನನ್ನು ಕಾಣುವ ಮಾನವರಾಗಿ ಅವತಾರಮಾಡಿದ ದೇವತಾಂಶರು, ನೂರು ಋಷಿಗಳು, ನೂರು ರಾಜರು, ನೂರು ಗಂಧರ್ವರು. ಇವರು ಮುಖ್ಯವಾಯುದ್ವಾರಾ ''ವೈಕುಂಠ''ದಲ್ಲಿ ಅಮುಕ್ತ ಸ್ಥಾನವನ್ನು ಹೊಂದುತ್ತಾರೆ.

ಪ್ರತೀಕಾಲಂಬನರಲ್ಲಿ ದೇಹಾಲಂಬನರು, ಪ್ರತಿಮಾಲಂಬನರು ಎಂದು ಎರಡು ಪ್ರಕಾರ. ದೇಹಾಲಂಬನರು ಋಷ್ಯಾದಿಗಳು. ಪ್ರತಿಮಾಲಂಬನರು ಮನುಷ್ಯೋತ್ತಮರು. ಮನುಷ್ಯೋತ್ತಮರಲ್ಲಿಯೂ ಉತ್ತಮ, ಮಧ್ಯಮ, ಅಧಮರೆಂಬ ಭೇದವಿದೆ. ಇವರಲ್ಲಿ ಉತ್ತಮರು ತಪೋಲೋಕಕ್ಕೆ, ಮಧ್ಯಮರು ಜನೋಲೋಕಕ್ಕೆ, ಅಧಮರು ಮಹರ್ಲೋಕಕ್ಕೆ ಹೋಗುವರು. ಹೀಗೆ ಇವರು ಮಹದಾದಿ ಲೋಕಗಳಿಗೆ ಹೋಗಿ



ಅಲ್ಲಿ ಕೆಲವು ಕಾಲ ಸಾಧನೆಯನ್ನು ಮಾಡಿ ಸತ್ಯಲೋಕಕ್ಕೆ ಹೋಗುವರು. ಹಿಂದೆ ನಿರೂಪಿಸಿದ ಸಕಲ ಜ್ಞಾನಿಗಳು ''ಪುಂ''ನಾಮಕ ಬ್ರಹ್ಮನಿಂದ ಯುಕ್ತರಾಗಿ ವಿರಜಾನದಿ ಸ್ನಾನದಿಂದ ಲಿಂಗದೇಹ ಭಂಗವನ್ನು ಹೊಂದಿ ಭಗವಂತನಾದ ನಾರಾಯಣನ ಪ್ರಸಾದದಿಂದ ಮುಕ್ತರಾಗುವರು.

ಕರ್ಮಯೋಗಿಗಳು ಪ್ರಯಾಣಮಾಡುವ ಧೂಮಾದಿಮಾರ್ಗವು ಕೃಷ್ಣಮಾರ್ಗವೆಂದು, ಪಿತೃಯಾನವೆಂದು ಕರೆಯಲ್ಪಡುತ್ತದೆ. ಈ ಧೂಮಾದಿ ಮಾರ್ಗದ ವಿಷಯವು ಉಪನಿಷತ್ತಿನಲ್ಲಿ ಹೇಳಿದೆ.

''ಅಥ ಯೇ ಯಜ್ಞೇನ ದಾನೇನ ತಪಸಾ ಲೋಕಾನ್ ಜಯಂತಿ ತೇ ಧೂಮಮಭಿಸಂಭವಂತಿ. ಧೂಮಾತ್ ರಾತ್ರಿಂ. ರಾತ್ರೇರಪಕ್ಷೀಯಮಾಣಪಕ್ಷಂ. ಅಪಕ್ಷೀಯಮಾಣಪಕ್ಷಾತ್ ಯಾನ್ ಷಣ್ಮಾಸಾನ್ ದಕ್ಷಿಣಾಽಽದಿತ್ಯಂ ಏತಿ ಮಾಸೇಭ್ಯಃ ಪಿತೃಲೋಕಂ. ಪಿತೃಲೋಕಾಚ್ಚಂದ್ರಂ. ತೇ ಚಂದ್ರಂ ಪ್ರಾಪ್ಯಾನ್ನಂ ಭವಂತಿ. ತೇಷಾಂ ಯದಾ ತತ್ ಪರ್ಯವೈತ್ಯಥೇಯಮೇವಾಕಾಶಮಭಿನಿಷ್ಪದ್ಯಂತೇ. ಆಕಾಶಾದ್ವಾಯುಂ. ವಾಯೋ ವೃಷ್ಟಿಮ್ ವೃಷ್ಟೇಃ ಪೃಥಿವೀಂ. ತೇ ಪೃಥಿವೀಂ ಪ್ರಾಪ್ಯಾನ್ನಂ ಭವಂತಿ. ಪುನಃ ಪುರುಷಾಗ್ನೌ ಹೂಯಂತೇ. ತತೋ ಯೋಷಾಗ್ನೌ. ತತೋ ಜಾಯಂತೇ. ತೇ ಲೋಕಾನ್ ಪ್ರತ್ಯುತ್ಥಾಯಿನಸ್ತ ಏವಾನು ಪರಿವರ್ತಂತೇ. ಅಥ ಯ ಏತೌ ಪಂಥಾನೌ ನ ವಿದ್ಯುಸ್ತೇ ಕೀಟಾಃ ಪತಂಗಾಃ ಯದಿದಂ ದಂದಶೂಕಮ್'' - ಬೃಹದಾರಣ್ಯಕ

ಯಾರು ಜ್ಯೋತಿಷ್ಟೋಮಾದಿಯಾಗ, ಸತ್ಪಾತ್ರರಲ್ಲಿ ದಾನ, ಕೃಚ್ಛ್ರಚಾಂದ್ರಾಯಣ ವ್ರತ ಮೊದಲಾದ ಸಕಾಮಕರ್ಮಗಳನ್ನು ಮಾಡಿ ಪುಣ್ಯಲೋಕಗಳನ್ನು ಸಂಪಾದನೆ ಮಾಡಿರುವವರೋ ಅವರು ಮರಣಾನಂತರ ಧೂಮಾಭಿಮಾನಿದೇವತೆಯ ಲೋಕವನ್ನು ಹೊಂದುತ್ತಾರೆ. ಅಲ್ಲಿಂದ ರಾತ್ರ್ಯಭಿಮಾನಿದೇವತೆ ಲೋಕ, ಕೃಷ್ಣಪಕ್ಷಾಭಿಮಾನಿ ದೇವತೆ ಲೋಕ, ದಕ್ಷಿಣಾಯನಾಭಿಮಾನಿದೇವತೆ ಲೋಕ, ಪಿತೃಲೋಕಕ್ಕೆ ಹೋಗಿ ಅಲ್ಲಿಂದ ಚಂದ್ರಲೋಕವನ್ನು ಹೊಂದುತ್ತಾರೆ. ಅಲ್ಲಿ ದೇವತೆಗಳಿಗೆ ಸೇವಕರಾಗುತ್ತಾರೆ. ಹೀಗೆ ಚಂದ್ರನಲ್ಲಿರುವ ಜೀವರು ತಮ್ಮ ಪುಣ್ಯವು ಮುಗಿದ ಮೇಲೆ ಆಕಾಶವನ್ನು ತಲುಪುತ್ತಾರೆ. ಆಕಾಶದಿಂದ ಪರ್ಜನ್ಯಲೋಕ ಅಲ್ಲಿಂದ ವೃಷ್ಟಿಯಾಗಿ ಭೂಲೋಕಕ್ಕೆ ಬಂದು ಆಹಾರದೊಳಗೆ ಸೇರಿ ಪುನಃ ಪುರುಷಾಗ್ನಿಯಲ್ಲಿ ಹೋಮಿಸಲ್ಪಡುತ್ತಾರೆ. ಅನಂತರ ಯೋಷಾಗ್ನಿಯಲ್ಲಿ ಸೇರಿ ಜನ್ಮವನ್ನು ಪಡೆಯುತ್ತಾರೆ. ಹೀಗೆ ಸಕಾಮಕರ್ಮಿಗಳು ಪುನರಾವೃತ್ತಿಯುಳ್ಳ ಲೋಕಗಳಿಗೆ ಹೋಗಿ ಪುಣ್ಯಹ್ರಾಸವಾದಾಗ ಪುನಃ ಭೂಮಿಗೆ ಬರುತ್ತಾರೆ. ಈ ವಿಧವಾಗಿ ಇವರು ಸಂಚರಿಸುತ್ತಲೇ ಇರುತ್ತಾರೆ. ದೇವಯಾನ, ಪಿತೃಯಾನ ರೂಪವಾದ ಈ ಮಾರ್ಗದ್ವಯವನ್ನು ಯಾರು

ಹೊಂದುವುದಿಲ್ಲವೋ ಅವರು ಕ್ರಿಮಿ, ಕೀಟಗಳು, ಪತಂಗಗಳು ಮತ್ತು ಸರ್ಪಗಳಾಗಿ ಹುಟ್ಟುತ್ತಾರೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಸಕಾಮಕರ್ಮಿಗಳ ಮಾರ್ಗವನ್ನು ಈ ರೀತಿ ಹೇಳುತ್ತಾನೆ –

**ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।**
**ಏವಂ ತ್ರಯೀಧರ್ಮಮನುಪ್ರಪನ್ನಾ ಗತಾಗತಂ ಕಾಮಕಾಮಾ ಲಭಂತೇ ॥**

ಸಕಾಮಕರ್ಮಿಗಳು ಪುಣ್ಯವನ್ನು ಗಳಿಸಿ ಸ್ವರ್ಗಲೋಕವನ್ನು ಹೊಂದುತ್ತಾರೆ. ಸ್ವರ್ಗಲೋಕದಲ್ಲಿ ಸುಖವನ್ನು ಅನುಭವಿಸಿ ಪುಣ್ಯಕ್ಷೀಣವಾದ ಬಳಿಕ ಪುಣ್ಯವನ್ನು ನಿಃಶೇಷವಾಗಿ ಕಳೆದುಕೊಳ್ಳದೆ ಕಿಂಚಿತ್ ಪುಣ್ಯಸಹಿತವಾಗಿಯೇ ಭೂಮಿಗೆ ಬರುತ್ತಾರೆ.

**"ನೈಕೇ ಸೃತೀ ಪಾರ್ಥ ಜಾನನ್ ಯೋಗೀಮುಹ್ಯತಿ ಕಶ್ಚನ"** ಈ ಎರಡು ಮಾರ್ಗ-ಗಳನ್ನು ತಿಳಿದ ಯೋಗಿಯು ಭಗವಂತನ ವಿಸ್ಮರಣೆಯನ್ನು ಹೊಂದುವುದಿಲ್ಲ.

❑❑


॥ ಶ್ರೀಮಲಕ್ಷ್ಮೀ ಅನಂತ ಪ್ರಸನ್ನ ॥

## ಶ್ರೀಅನಂತಪದ್ಮನಾಭ ಟೂರ್ಸ್ ಅಂಡ್ ಟ್ರಾವೆಲ್ಸ್

ದಕ್ಷಿಣ ಭಾರತ (ಉಡುಪಿ ಪರ್ಯಾಯ, ರಾಮೇಶ್ವರ) ಯಾತ್ರೆ

ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ತೀರ್ಥಪ್ರಸಾದ, ಮಡಿಯಿಂದ ಊಟದ ವ್ಯವಸ್ಥೆ ಇದೆ.

**ದಿನಾಂಕ 30–12–2007 ರಿಂದ 19–01–2008 ರವರೆಗೆ**

**ಯಾತ್ರಾಸ್ಥಳಗಳು :**

ಶ್ರೀಶೈಲ, ಅಹೋಬಿಲ, ತಿರುಪತಿ, ಕಂಚಿ, ತಿರಕೋಯಿಲೂರು, ಚಿದಂಬರಂ, ಕುಂಭಕೋಣ, ತಂಜಾವೂರು, ದೊಡ್ಡ ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೇಂದ್ರ, ತಿರುವನಂತಪುರಂ, ಗುರುವಾಯೂರು, ಉಡುಪಿ, ಪಾಜಕಾಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 6,900/– ಮಾತ್ರ** (3 × 2 ಲಕ್ಸುರಿ ಬಸ್ಸಿನಲ್ಲಿ)

**ಸೀಟು ಒಂದಕ್ಕೆ ರೂ. 9,600/– ಮಾತ್ರ** (2 × 2 ಪುಷ್‌ಬ್ಯಾಕ್ ಡಿಲಕ್ಸ್ ಬಸ್ಸಿನಲ್ಲಿ)

ಈ ಸುದೀರ್ಘ ಪ್ರವಾಸದಲ್ಲಿ ಚಹಾ / ಕಾಫಿ, ಉಪಹಾರ, ವಸತಿ ಸೌಕರ್ಯ, ಬಸ್ಸು ಛಾರ್ಜುಗಳು ಸೇರಿವೆ.

ಇಂದೇ ಸೀಟು ಒಂದಕ್ಕೆ ರೂ. 3000/- ಕಳುಹಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.

**ಸೂಚನೆ** : 23-09-2007 ರಿಂದ 23 ದಿನಗಳ ಉತ್ತರ ಭಾರತ (ಬದರಿ) ಯಾತ್ರಾ ಪವಿತ್ರ ಪಕ್ಷಮಾಸದಲ್ಲಿ ಹೈದ್ರಾಬಾದ್ ರೈಲ್ವೆ ನಿಲ್ದಾಣದಿಂದ ಹೊರಡಲಿದೆ ಮತ್ತು ನವೆಂಬರ್ 2007 ರಲ್ಲಿ 12 ದಿನಗಳ ನೇಪಾಳ, ಕಾಶಿ ಯಾತ್ರಾ ಇದೆ.

ಹೆಚ್ಚಿನ ವಿವರಗಳಿಗೆ :

**D. Vijayeendracharya Kosgi**
S/o. D. Ananthapadmanathacharya, Flat, 102, Madhuchaitanya Aprts.,
Sai Delux Nagar, Moulali, Hyderabad - 500 040
**Ph : 040-27141716, Cell : 9440702447**





# ಭಗವದ್ಭಕ್ತರ ಗಮನಕ್ಕೆ

ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ ಸಹಿತವಾದ

## ಶ್ರೀಜಗನ್ನಾಥದಾಸರಾಯರ ಶ್ರೀಮದ್ಧರಿಕಥಾಮೃತಸಾರ

1907 ನೇ ಇಸವಿಯ ತೆಲುಗು ಮುದ್ರಿತ ಪ್ರತಿಯನ್ನು ಆಧರಿಸಿ ಕನ್ನಡದಲ್ಲಿ ಪ್ರಥಮ ಬಾರಿಗೆ ಮುದ್ರಿತವಾಗುತ್ತಿದೆ.

**ಪ್ರಥಮ ಸಂಪುಟವು (ಸಂಧಿ 1–9 ರವರೆಗೆ) – ಶ್ರೀವಿಜಯವಿಠ್ಠಲ ಸಂಪುಟ**
(ರಾಯಲ್ ಸೈಜ್ ಕ್ಯಾಲಿಕೋ ಬೈಂಡ್ 436 ಪುಟಗಳು, ಬೆಲೆ ರೂ. 250/-)

**ದ್ವಿತೀಯ ಸಂಪುಟ (ಸಂಧಿ 10–21 ರವರೆಗೆ) – ಶ್ರೀಗೋಪಾಲವಿಠ್ಠಲ ಸಂಪುಟ**
(ರಾಯಲ್ ಸೈಜ್ ಕ್ಯಾಲಿಕೋ ಬೈಂಡ್ 534 ಪುಟಗಳು, ಬೆಲೆ ರೂ. 350/-)

ಒಟ್ಟು ಎರಡು ಸಂಪುಟಗಳು **ಶ್ರೀಪೇಜಾವರ ಶ್ರೀಪಾದಂಗಳವರಿಂದ** ಬಿಡುಗಡೆಯಾಗಿವೆ.

**ತೃತೀಯ ಸಂಪುಟವು – ಶ್ರೀಜಗನ್ನಾಥವಿಠ್ಠಲ ಸಂಪುಟ** (ಸಂಧಿ 21 ರಿಂದ 32)
(ಪರಿಚ್ಛೇದದಲ್ಲಿ ಶ್ರೀಮದ್‌ಹರಿಕಥಾಮೃತಸಾರ ಹಾಗೂ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದ ಸುಮಾರು 120 ಪುಟಗಳ ಪ್ರಮಾಣದೊಂದಿಗೆ ಪ್ರಕಾಶಸಂಹಿತಾ, ಮುಕ್ತಿತತ್ತ್ವ, ಆಧ್ಯಾತ್ಮಮಾಲಾ ಇತ್ಯಾದಿ ಸಂಸ್ಕೃತ ಪ್ರಮಾಣಗಳು ಹಾಗೂ ಶ್ರೀವಿಜಯದಾಸರ ಸುಳಾದಿಗಳ ಸಮಾಖ್ಯೆಯೊಂದಿಗೆ, ಸುಮಾರು 50 ಕ್ಕೂ ಮೇಲ್ಪಟ್ಟ ಸುಳಾದಿಗಳೊಂದಿಗೆ)

(ರಾಯಲ್ ಸೈಜ್ ಕ್ಯಾಲಿಕೋ ಬೈಂಡ್ 500 ರಿಂದ 550 ಪುಟಗಳು, ಬೆಲೆ ರೂ. 400/-)

ಆಶ್ವೀಜ ಶುಕ್ಲ ದಶಮೀ(ವಿಜಯದಶಮೀ)ಯ ದಿನಾಂಕ 21-10-2007 ರಂದು **ಶ್ರೀಸುವಿದ್ಯೇಂದ್ರತೀರ್ಥರು** 'ಶ್ರೀಸುಮಧ್ವವಿಜಯಸೌಧ', ಪದ್ಮನಾಭನಗರ, ಬೆಂಗಳೂರು ಇಲ್ಲಿ ಸಂಜೆ 6.30 ಕ್ಕೆ ಬಿಡುಗಡೆಮಾಡಲಿದ್ದಾರೆ.

ದಿನಾಂಕ 19-10-2007 ರಿಂದ 21-10-2007 ರವರೆಗೆ ಸಂಜೆ 5.30 ಕ್ಕೆ **ಶ್ರೀಶ್ರೀಸುವಿದ್ಯೇಂದ್ರತೀರ್ಥರಿಂದ** ಶ್ರೀಮದ್‌ಹರಿಕಥಾಮೃತಸಾರದ ಪ್ರವಚನ ಏರ್ಪಡಿಸಲಾಗಿದೆ.

ಈ ಜ್ಞಾನಕಾರ್ಯಕ್ಕೆ ರೂ. 5,000/- ನೀಡುವವರನ್ನು ಪೋಷಕರೆಂದು, ಅದಕ್ಕಿಂತ ಹೆಚ್ಚು ನೀಡುವವರನ್ನು ದಾನಿಗಳೆಂದು ಹಾಗೂ ರೂ. 800/- (ಪ್ರಕಟಣಾಪೂರ್ವ ಬೆಲೆ 800/- ನ್ನು 21-10-2007 ರೊಳಗೆ) ನೀಡುವವರನ್ನು ಸದಸ್ಯರೆಂದು ಪರಿಗಣಿಸಲಾಗುತ್ತದೆ.

ಪುಸ್ತಕವನ್ನು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಬೆಂಗಳೂರಿನವರು ಚೆಕ್ ಅಥವಾ ಡಿ.ಡಿ. ಕಳುಹಿಸಬಹುದು.
ಹೊರ ಊರಿನವರು ಡಿ.ಡಿ. ಮಾತ್ರ ಕಳುಹಿಸಿ ರಸೀದಿ ಪಡೆಯಬೇಕಾಗಿ ವಿನಂತಿ.
(ಅಂಚೆ ವೆಚ್ಚ ಪ್ರತ್ಯೇಕ)

## ಶ್ರೀಜಗನ್ನಾಥವಿಠ್ಠಲ ಪ್ರಕಾಶನ

**ಶ್ರೀರಮೇಶ್. ಪಿ. ಯಲಮೇಲಿ**, ಪ್ರಕಾಶಕರು
ನಂ. 119, 6ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಸಾರ್ವಭೌಮನಗರ
ಚಿಕ್ಕಕಲ್ಲಸಂದ್ರ, ಬೆಂಗಳೂರು - 560 061
ದೂರವಾಣಿ : 080-26393552, ಮೊಬೈಲ್ : 9448190414

ಒಟ್ಟಿಗೆ ಹಣ ನೀಡಿ ಗ್ರಂಥವನ್ನು ಪಡೆಯಲಾಗದವರಿಗಾಗಿ
ವಿಶೇಷ ಯೋಜನೆಯೊಂದಿದ್ದು, ದೂರವಾಣಿಯ
ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

## ಪರ್ಯಟನ

### ಮಂತ್ರಾಲಯದಲ್ಲಿ ಭಕ್ತಿಸಂಗೀತ ಸಪ್ತರಾತ್ರೋತ್ಸವ

ಪರಮಪೂಜ್ಯ ಶ್ರೀಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರ ಮತ್ತು ಶ್ರೀಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ ಚಾತುರ್ಮಾಸ್ಯ ಸಮಾರೋಪ ಸಮಾರಂಭದ ಅಂಗವಾಗಿ ಮಂತ್ರಾಲಯದಲ್ಲಿ ದಿನಾಂಕ ೨೦-೦೯-೨೦೦೭ ರಿಂದ ೨೬-೦೯-೨೦೦೭ ರವರೆಗೆ ಭಕ್ತಿಸಂಗೀತ ಸಪ್ತರಾತ್ರೋತ್ಸವವನ್ನು ವ್ಯವಸ್ಥೆಗೊಳಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ಫಣಿರಾಜಾಚಾರ್ಯರಿಂದ ದಾಸಲಹರಿ, ಕುಮಾರಿ ಸುಮಾ ಬಂಡಿಯವರಿಂದ ದಾಸಕುಸುಮಾಂಜಲಿ, ಶ್ರೀ ಪ್ರಹ್ಲಾದ್ ಅವರಿಂದ ಹರಿದಾಸಾಮೃತ, ಶ್ರೀಗಂಗಾಖೇಡ ಸಹೋದರರಿಂದ ಹರಿದಾಸಸುಧೆ, ಕುಮಾರಿ. ಪಲ್ಲವಿ ಕಿನ್ನಾಳರವರಿಂದ ಹರಿದಾಸಗುಚ್ಛ, ಶ್ರೀ ರವಿ ಕಟ್ಟಿಯವರಿಂದ ಹರಿದಾಸಸೌರಭ, ಶ್ರೀ ರಾಮಚಂದ್ರರಾವ್ ರವರಿಂದ ಹರಿದಾಸತರಂಗ ಕಾರ್ಯಕ್ರಮಗಳನ್ನು ಏಳು ದಿನಗಳ ಕಾಲ ವ್ಯವಸ್ಥೆಗೊಳಿಸಲಾಗಿತ್ತು. ಇದೊಂದು ಅಪೂರ್ವ ಕಾರ್ಯಕ್ರಮವಾಗಿ ಮಾರ್ಪಾಟಾಗಿ ಭಕ್ತಜನರ ಮನಸ್ಸನ್ನು ಸಂತೋಷಗೊಳಿಸಿತು.

### ಚಾತುರ್ಮಾಸ್ಯ ಸಮಾರೋಪ ಸಮಾರಂಭ

ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ದಿನಾಂಕ ೧೦-೦೮-೨೦೦೭ ರಿಂದ ಕೈಗೊಂಡ ಚಾತುರ್ಮಾಸ್ಯ ವ್ರತವು ದಿನಾಂಕ ೨೬-೦೯-೨೦೦೭ ರಂದು ಉಭಯ ಶ್ರೀಪಾದರು ಮಂತ್ರಾಲಯದಿಂದ ದಿಗ್ವಿಜಯ ಯಾತ್ರೆ ಮಾಡುವ ಮೂಲಕ ಚಾತುರ್ಮಾಸ್ಯ ವ್ರತವು ಸಮಾಪ್ತಿಗೊಂಡಿತು.

### "ಧೀರ ವೇಣುಗೋಪಾಲ" ಪ್ರಶಸ್ತಿ ಪ್ರದಾನ

ಪ್ರತಿವರ್ಷ ಚಾತುರ್ಮಾಸ್ಯ ಸಮಾರೋಪ ಸಮಾರಂಭದಂದು ನೀಡಲ್ಪಡುವ 'ಧೀರ ವೇಣುಗೋಪಾಲ ಪ್ರಶಸ್ತಿ'ಯನ್ನು ಈ ಬಾರಿ ಧಾರವಾಡದ ಶ್ರೀ ಅನಂತಾಚಾರ್ಯ ಕಟಗೇರಿಯವರಿಗೆ ಉಭಯ ಶ್ರೀಪಾದಂಗಳವರು ಪ್ರಶಸ್ತಿಯನ್ನು ಆಶೀರ್ವದಿಸಿದರು. ಈ ಪ್ರಶಸ್ತಿಯು ೨೦ ಸಾವಿರ ನಗದು ಹಾಗೂ ಪ್ರಶಸ್ತಿಪತ್ರ, ಸ್ಮರಣಿಕೆಯನ್ನು ಹೊಂದಿತ್ತು.

### ವಿದ್ಯಾಪುರಸ್ಕಾರ

ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಮತ್ತು ಬೀದಿಗಳಲ್ಲಿ ಬಿಟ್ಟುಹೋದ ಸಣ್ಣಮಕ್ಕಳನ್ನು ತಮ್ಮಾಶ್ರಮಕ್ಕೆ ಕರೆತಂದು, ಅವರಿಗೆ ವಿದ್ಯೆಯನ್ನು ನೀಡಿ ಮದುವೆಯ ತನಕ ಅವರನ್ನು ಸಂರಕ್ಷಿಸಿ ಅನಾಥ ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಿ ಸಮಾಜದ ಸತ್ಪ್ರಜೆಗಳನ್ನಾಗಿ ಮಾಡುವುದರಲ್ಲಿ ತಮ್ಮ ಜೀವನವನ್ನು ಮುಡುಪಾಗಿರಿಸಿ ಮಂತ್ರಾಲಯ ಸಮೀಪದ ತುಂಗಭದ್ರಾ ರೈಲ್ವೇ ಸ್ಟೇಷನ್ ಬದಿಯಲ್ಲಿರುವ ಜ್ಯೋತಿ ಅನಾಥಾಶ್ರಮವನ್ನು ಏಕಾಂಗಿಯಾಗಿ ಮುನ್ನಡೆಸುತ್ತಿರುವ ಶ್ರೀಮತಿ ಮುತ್ತುಲಕ್ಷ್ಮಿಯವರಿಗೆ ಈ ಬಾರಿಯ ವಿದ್ಯಾಪುರಸ್ಕಾರ



ಪ್ರಶಸ್ತಿಯನ್ನು ನೀಡಿ ಉಭಯ ಶ್ರೀಪಾದಂಗಳವರ ಆಶೀರ್ವದಿಸಿದರು. ಈ ಅನಾಥಾಶ್ರಮದ ಸುಮಾರು ೬೦ ಅನಾಥ ಮಕ್ಕಳನ್ನು ಮಂತ್ರಾಲಯಕ್ಕೆ ಬರಮಾಡಿಕೊಂಡು ಅವರಿಗೆ ಒಂದು ಜೊತೆ ಬಟ್ಟೆಯನ್ನು, ಸಿಹಿಯನ್ನು ಶ್ರೀಪಾದಂಗಳವರ ಸ್ವಹಸ್ತದಿಂದ ನೀಡಿದುದು ಈ ಕಾರ್ಯಕ್ರಮದ ವಿಶೇಷವಾಗಿತ್ತು. ಈ ಪ್ರಶಸ್ತಿಯು ೨೫ ಸಾವಿರ ರೂ. ನಗದು, ಪ್ರಶಸ್ತಿಪತ್ರ ಹಾಗೂ ಸ್ಮರಣಿಕೆಗಳನ್ನೊಳಗೊಂಡಿತ್ತು.

### ಪತ್ರಿಕಾಪುರಸ್ಕಾರ

ಪ್ರತಿವರ್ಷ ಸೀಮೋಲ್ಲಂಘನ ಕಾರ್ಯಕ್ರಮದಲ್ಲಿ ನೀಡಲಾಗುವ ಪತ್ರಿಕಾ ಪುರಸ್ಕಾರ ಪ್ರಶಸ್ತಿಯನ್ನು ಆಂಧ್ರಪ್ರಭಾ ವರದಿಗಾರರಾದ ಶ್ರೀ ಚಂದ್ರಶೇಖರ್‌ರವರಿಗೆ ಉಭಯ ಶ್ರೀಪಾದಂಗಳವರು ಪ್ರಶಸ್ತಿ - ಸ್ಮರಣಫಲಕಗಳನ್ನಿತ್ತು ಆಶೀರ್ವದಿಸಿದರು. ಸಂಜೆಯಿಂದ ನಡೆದ ಈ ಕಾರ್ಯಕ್ರಮದಲ್ಲಿ ವಿದ್ವಾನ್ ಹರಿಪ್ರಸಾದ್ ಚೌರಾಸಿಯಾರವರ ಶಿಷ್ಯರಾದ ವಿದ್ವಾನ್. ಪದ್ಮನಾಭ ಬಾಪೂ ಅವರಿಂದ ವೇಣುವಾದನವು ಇನ್ನಷ್ಟು ಮೆರುಗನ್ನು ನೀಡಿತ್ತು.

**ವರದಿ : ಸೂರೀಂದ್ರ**

### ಸಾದರ ಸ್ವೀಕಾರ

ಬಿಜಾಪುರದ ಗೀತಾ ಪ್ರಕಾಶನ ಅನೇಕ ಧಾರ್ಮಿಕ ಪುಸ್ತಕಗಳನ್ನು ಹೊರತಂದು ಯುವಕರಲ್ಲಿ ಆಧ್ಯಾತ್ಮಿಕ ಭಾವನೆ ಮೂಡಿಸುವಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆ. ಈ ಪ್ರಕಾಶನದ ಇತ್ತೀಚಿನ ಪ್ರಕಟಣೆಗಳಾದ ಶ್ರೀ ಶ್ರೀನಿವಾಸ ಸು. ಮಠದ ಅವರಿಂದ ಸಂಪಾದಿತಗೊಂಡ 'ವ್ಯಾಸ-ದಾಸವಾಣಿಯಲ್ಲಿ ದೈನಂದಿನ ಆಚರಣೆ' ಎನ್ನುವ ಕೃತಿಯಲ್ಲಿ ವ್ಯಾಸ-ದಾಸಸಾಹಿತ್ಯಗಳ ಉಕ್ತಿಗಳ ಸಂಗ್ರಹವಾಗಿವೆ. ಸಜ್ಜನರಿಗೆ ಉಪಕಾರಿ- ಯಾಗಿರುವ ಈ ಗ್ರಂಥ ಸಂಗ್ರಹಕ್ಕೆ ಯೋಗ್ಯವಾಗಿದೆ ಹಾಗೂ ಇದೇ ಸಂಪಾದಕರ 'ಶ್ರೀಮದ್ಭಾಗವತ ಸೂಕ್ತಿ ಸುಧಾನಿಧಿ' ಎನ್ನುವ ಪುಸ್ತಕವು ಹೊರಬಂದಿದ್ದು, ಭಾಗವತದ ಹನ್ನೆರಡು ಸ್ಕಂದಗಳಲ್ಲಿನ ಶ್ಲೋಕಗಳನ್ನು ಆಲಿಸಿ ಸಂಗ್ರಹಿಸಿರುವ ಅಪೂರ್ವ ಕೃತಿ ಇದಾಗಿದೆ.

**ವ್ಯಾಸ-ದಾಸವಾಣಿಯಲ್ಲಿ ದೈನಂದಿನ ಆಚರಣೆ**

೬೪ ಪುಟಗಳು, ಬೆಲೆ : ರೂ. ೨೦/-

**ಶ್ರೀಮದ್ಭಾಗವತ ಸೂಕ್ತಿ ಸುಧಾನಿಧಿ**

೭೦ ಪುಟಗಳು, ಬೆಲೆ : ೨೦/-

---

ಪುಸ್ತಕ ದೊರೆಯುವ ಸ್ಥಳ

**ಗೀತಾ ಪ್ರಕಾಶನ,** ಅಜರೇಕರ ಚಾಳ, ಬಿಜಾಪುರ

ದೂರವಾಣಿ : ೯೩೪೨೩-೧೭೫೧೬